ಸಂಪುಟ : 13 Volume | ಸಂಚಿಕೆ : 252 Issue | ಪುಟಗಳು : 08 Pages | ಸೋಮವಾರ 24 ನವೆಂಬರ 2025 | ₹6 | PRGINO. 120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ನಿನ್ನ ಕನಸು ನನಸಾಗಬೇಕಿದ್ದರೆ.. ಮೊದಲು ನೀನು ಕನಸು ಕಾಣು.
ಡಾ.ಅಬ್ದುಲ್ ಕಲಾಂ.

4 ಶೀಘ್ರದಲ್ಲಿ ಸಂಚಾರಿ ನ್ಯಾಯಾಲಯ ಕಾರ್ಯ
2 ಕಬ್ಬಿಗೆ 2950 ರೂ. ನಿಗದಿ: ಬೀದರ್
8 ದಕ್ಷಿಣ ಆಫ್ರಿಕಾ 489 ರನ್‌ಗೆ ಆಲೌಟ್
3 ರಾಜ್ಯ ಮಟ್ಟದ ಕಲಾಶ್ರೀ ಶಿಬಿರದಲ್ಲಿ ಚಿತ್ರಕಲೆ

# ಕೈ ಕಮಲ ಕದನ ಹೈಮೌನ

## ರಾಷ್ಟ್ರೀಯ ಪಕ್ಷ ಕಾಂಗ್ರೆಸ್, ಬಿಜೆಪಿ ವರಿಷ್ಠರ ನಿಗೂಢ ನಡೆ, ಮುಗಿಯದ ಶೀತಲ ಸಮರ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ಎರಡು ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್ ಧೋರಣೆಯೇ ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಅಧಿಕಾರದ ಗದ್ದುಗೆ ಏರಿರುವ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಸ್ತಾಂತರದ ಗೊಂದಲವೇ ತಲೆನೋವಾಗಿ ಪರಿಣಮಿಸಿದೆ. ಪ್ರತಿಪಕ್ಷ ಬಿಜೆಪಿಯಲ್ಲೂ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕೆಂಬ ಒತ್ತಡ ಜೋರಾಗಿದೆ. ಆದರೆ, ಈ ಎರಡೂ ಪಕ್ಷಗಳ ಹೈಕಮಾಂಡ್ ತನ್ನ ನಿಲುವನ್ನು ಪ್ರಕಟಿಸದೇ ಇರುವುದು ಕುತೂಹಲಕ್ಕೆ ಕಾರಣವಾಗಿದೆ.

ಸತ್ಯ ಯಾವುದು..?: ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರ ಒಪ್ಪಂದ ಆಗಿದೆಯೇ ಇಲ್ಲವೇ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಹೇಳುತ್ತಿಲ್ಲ. ಇತ್ತ ಬಿಜೆಪಿಯಲ್ಲಿ ವಿಜಯೇಂದ್ರ ಮುಂದುವರಿಯುತ್ತಾರೆಯೇ ಅಥವ ಬದಲಾವಣೆ ಇದೆಯೇ ಎಂಬುದನ್ನೂ ಬಿಜೆಪಿ ವರಿಷ್ಠರು ಸ್ಪಷ್ಟಪಡಿಸದೇ ಇರುವುದು ದಾಖಲಾರ್ಹವಾಗಿದೆ.



**ಮಾಹಾ ಮೌನಕ್ಕೆ ಶರಣು**

**ಎರಡೂ ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್‌ಗಳು ಮೌನಕ್ಕೆ ಜೋತು ಬಿದ್ದಿವೆ. ಪರಿಣಾಮ, ಕಾಂಗ್ರೆಸ್‌ನ ಅಧಿಕಾರ ಹಸ್ತಾಂತರದ ಗೊಂದಲದಿಂದ ಆಡಳಿತ ಯಂತ್ರದ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ. ಸರಕಾರದ ಇಮೇಜ್ ಗೂಧಕ್ಕೆಯಾಗುತ್ತಿದೆ. ಬಿಜೆಪಿಯಲ್ಲಿರುವ ಅಸಮಾಧಾನ ಪ್ರತಿಪಕ್ಷವಾಗಿ ಸಮರ್ಥವಾಗಿ ಕಾರ್ಯನಿರ್ವಹಣೆಯಲ್ಲಿ ವೈಫಲ್ಯ. ಸಂಘಟನೆ ದುರ್ಬಲಕ್ಕೆ ಕಾರಣವಾಗಿದೆ.**

### ನಾನು ಸಿಎಂ ರೇಸ್ ನಲ್ಲಿರುವೆ

ನಾನು ಯಾವಾಗಲೂ ಸಿಎಂ ರೇಸ್‌ನಲ್ಲಿರುವುದಾಗಿ ಗೃಹ ಸಚಿವ ಡಾ.ಪರಮೇಶ್ವರ್ ಹೇಳಿಕೆ ನೀಡಿ ಅಚ್ಚರಿ ಮೂಡಿಸಿದ್ದಾರೆ.

2013ರಲ್ಲಿ ನಾನು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾಗಿದ್ದಾಗ ಸರ್ಕಾರವನ್ನು ಅಧಿಕಾರಕ್ಕೆ ತರಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದೇವೆ. ಆ ಸಂದರ್ಭದಲ್ಲಿ ನಾನು ಚುನಾವಣೆಯಲ್ಲಿ ಪರಾಭವಗೊಂಡಿದ್ದರಿಂದ ಸಿಎಂ ಆಗುವ ಅವಕಾಶ ತಪ್ಪಿತ್ತು. ಸಿಎಂ ಕುರ್ಚಿ ವಿಚಾರದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ.

### ನನ್ನ ಬಳಿ ಏನೂ ಇಲ್ಲ.:ಖರ್ಗೆ

ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಮೊದಲ ಬಾರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ



ಖರ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯದ ಬೆಳವಣಿಗೆ ಬಗ್ಗೆ ನಾನು ಏನೂ ಹೇಳಲ್ಲ, ನನ್ನ ಬಳಿ ಹೇಳಲು ಏನೂ ಇಲ್ಲ. ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಈಗ ನಡೆದ ವಿದ್ಯಾಮನಗಳ ಬಗ್ಗೆ ಹೇಳಲು ನನ್ನ ಬಳಿ ಏನೂ ಇಲ್ಲ. ಯಾವ ವಿಚಾರದಲ್ಲಿಯೂ ಹೇಳಲು ಏನೂ ಇಲ್ಲ ಎಂದಿದ್ದಾರೆ.

### ಸಂಪುಟ ಪುನಾರಚನೆಯ ಸಂಕಟ

ಸಂಪುಟ ಪುನಾರಚನೆಯ ಸಿದ್ದರಾಮಯ್ಯ ಅವರ ಮನವಿಗೆ ಹೈಕಮಾಂಡ್ ಒಪ್ಪಿದರೆ ಸಿದ್ದರಾಮಯ್ಯ



ನಾಯಕತ್ವ ಮುಂದುವರಿಯುವುದು ಖಚಿತ. ಹೀಗಾಗಿಯೇ ಶಿವಕುಮಾರ್ ಸಂಪುಟ ಪುನಾರಚನೆ ಬೇಡ ಎಂದು ಪಟ್ಟು ಹಿಡಿದಿದ್ದಾರೆ. ಹೈಕಮಾಂಡ್ ಯಥಾಸ್ಥಿತಿ ಮುಂದುವರಿಕೆಗೆ ಒಲವು ತೋರಿದೆ ಎಂಬ ವರದಿ ಇದೆ. ಈ ಯಥಾಸ್ಥಿತಿಯನ್ನೂ ಬಹಳ ಕಾಲ ಮುಂದುವರಿಸಲು ಸಾಧ್ಯವಿಲ್ಲ. ಸದ್ಯಕ್ಕೆ ಯಥಾಸ್ಥಿತಿ ಮುಂದುವರಿದರೆ ನಾಯಕತ್ವ ಬದಲಾವಣೆಯೂ ಇಲ್ಲ, ಸಂಪುಟ ಪುನಾರಚನೆಯೂ ಇಲ್ಲ.

### ಯಾರಿಗೂ ಬಗ್ಗಲ್ಲ-ಜಗ್ಗಲ್ಲ..!

ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದರೂ ಸಹ ಮುಖ್ಯಮಂತ್ರಿ ಸಿದ್ದರಾಮಯ್ಯ



ಅವರು ತಮ್ಮ ಸ್ಥಾನವನ್ನು ಡಿ.ಕೆ.ಶಿ ಅವರಿಗೆ ಬಿಟ್ಟುಕೊಡುವುದಿಲ್ಲ. ಯಾರ ಸೂಚನೆಗೂ ಸಿಎಂ ತಲೆ ಬಾಗಲ್ಲ. ಸಿಎಂ ಹಿಂಬಾಲಕರು ಅವರು ಸಿಎಂ ಸ್ಥಾನದಲ್ಲಿಯೇ ಮುಂದುವರಿಯುವಂತೆ ಒತ್ತಾಯ ಮಾಡುತ್ತಾರೆ ಎಂದು ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮಾರ್ಮಿಕವಾಗಿ ನುಡಿದಿದ್ದಾರೆ.

### ಇವರು ಕೊಡಲ್ಲ, ಅವರು ಬಿಡಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ



ಅಧಿಕಾರ ಹಸ್ತಾಂತರದ ಗೊಂದಲ ಜಾರಿಯಲ್ಲಿದೆ.

ಎರಡನೇ ಬಾರಿಗೆ ಸಿದ್ದು ಸಿಎಂ ಆಗಿ ಎರಡೂವರೆ ವರ್ಷವಾಗಿದೆ. ಒಪ್ಪಂದ ಏರ್ಪಟ್ಟಿದ್ದರೆ ಉಳಿದ ಎರಡೂವರೆ ವರ್ಷಗಳ ಅಧಿಕಾರ ಅವಧಿ ಶಿವಕುಮಾರ್ ಅವರದ್ದಾಗಬೇಕು. ಸಮಸ್ಯೆ ಎಂದರೆ ಸಿದ್ದು ಅಧಿಕಾರ ಕೊಡಲ್ಲ, ಡಿಕೆಶಿ ಬಿಡಲ್ಲ ಎನ್ನುವಂತಾಗಿದೆ.

## ಬಸ್ ನಿಲ್ದಾಣವಿಲ್ಲದೆ ಪ್ರಯಾಣಿಕರ ಪರದಾಟ.

ಮಲ್ಲಮ್ಮ ನುಡಿ ವಾರ್ತೆ



ಹುಮನಾಬಾದ: ತಾಲ್ಲೂಕಿನ ಮೋಳಕೇರಾ ಗ್ರಾಮಕ್ಕೆ ಬಸ್ ನಿಲ್ದಾಣ ಇಲ್ಲದಿರುವುದರಿಂದ ಪ್ರಯಾಣಿಕರು ಪರದಾಡುತ್ತಿದ್ದಾರೆ ಎಂದು ಆಶ್ರಯ ದೀಪ ಚಾರಿಟೇಬಲ್ ಟ್ರಸ್ಟ್ ಸದಸ್ಯ ಶಶಿಕುಮಾರ ಜಮಾದಾರ ಒತ್ತಾಯಿಸಿದ್ದಾರೆ.

ಬಸವಕಲ್ಯಾಣದಿಂದ ಮೋಳಕೇರಾ ಗ್ರಾಮದ ರಸ್ತೆಯ ಮೇಲಿಂದ ಬಸ್ಗಳು ದಿನಾಲು ಹುಮನಾಬಾದಗೆ ತೆರಳುತ್ತವೆ. ಹುಮನಾಬಾದಗೆ ತೆರಳಲು ಬಸ್‌ಗೆ ಸಾರ್ವಜನಿಕರು, ವಿದ್ಯಾರ್ಥಿಗಳು ಸರ್ವಿಸ್ ರಸ್ತೆಯ ಮೇಲೆ ನಿಂತು ಕೊಂಡು ಹಾದಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಸ್ ನಿಲ್ದಾಣ ಮೋಳಕೇರಾ ಗ್ರಾಮಕ್ಕೆ ಶೀಘ್ರವೇ ಸಂಬಂಧಿಸಿದ ಮೇಲಾಧಿಕಾರಿಗಳು ಬಸ್ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದಾರೆ.



ಬಸ್ ನಿಲ್ದಾಣ ನಿರ್ಮಾಣ ಮಾಡಿದರೆ ಜನರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಹಾಗೂ ಬಸ್‌ಗಳು ಸಹ ಹೆಚ್ಚು ಓಡಾಡುತ್ತವೆ. ಇದರಿಂದ ಪ್ರಯಾಣಿಕರ ಭಾರಿ ಸಹಾಯವಾಗುತ್ತದೆ.

**ಕ.ಕ ವಿದ್ಯಾರ್ಥಿ ಘಟಕದ ಅಧ್ಯಕ್ಷ**
**-ಅರವಿಂದ ಜೋಗಿರೆ**

## ಸಾಲ ಬಾಧೆ ರೈತ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಕಾಳಗಿ: ಸಾಲ-ಸೂಲ ಮಾಡಿಕೊಂಡು ಇದ್ದ ತನ್ನ ಎರಡು ಎಕರೆ ಜಮಿನಿನೊಂದಿಗೆ 10ಲಕ್ಷ ಸಾಲ ಮಾಡಿ, ಬೇರೆಯವರ ಹೊಲ ಲೀಜ್ ಹಾಕಿಕೊಂಡು ವ್ಯವಸಾಯದಲ್ಲಿ ತೊಡಗಿದ್ದ ಕಾಳಗಿ ತಾಲೂಕಿನ ಕರಿಕಲ್ ತಾಂಡಾ ನಿವಾಸಿ ಪ್ರಕಾಶ ಸೇವು ಜಾಧವ(39) ಶನಿವಾರ ರಾತ್ರಿ 09-00ಕ್ಕೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಕಾಳಗಿ ರೈತ ಸೇವಾ ಸಹಕಾರ ಸಂಘದಲ್ಲೂ 25,000/-.ಸಾಲಮಾಡಿದ ರೈತ ಈ ಬಾರಿ ಜಡಿದ ಭಾರಿ ಮಳೆಗೆ ತನ್ನ ಎಲ್ಲಾ ತೊಗರಿ ಬೆಳೆ ನಾಶವಾಗಿತ್ತು.

ಮನನೊಂದ ರೈತ ಅಲ್ಪ-ಸ್ವಲ್ಪ ಉಳಿದ ತೊಗರಿ ಬೆಳೆಗೆ ಸಿಂಪಡಿಸಲೆಂದು ತಂದಿರುವ ಕಿಟನಾಶಕ 2ನೇ ಪುಟನೋಡಿ

## ಸಾಲ ತೀರಿಸಲು 7.11 ಕೋಟಿ ದರೋಡೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಾಡಹಗಲೇ 7.11 ಕೋಟಿ ಹಣ ದರೋಡೆ ಪ್ರಕರಣದ ಸಂಬಂಧ ಬಂಧಿತ ಆರೋಪಿಗಳು ಮಾಡಿಕೊಂಡಿದ್ದ ಸಾಲ ತೀರಿಸುವ ಸಲುವಾಗಿ ಕೃತ್ಯ ನಡೆಸಿರುವುದನ್ನು ಬಾಯ್ಬಿಟ್ಟ ಬೆನ್ನಲ್ಲೇ ಮತ್ತೊಬ್ಬ ಆರೋಪಿ ಸಿದ್ದಾಪುರ ಠಾಣೆಗೆ ಬಂದು ಶರಣಾಗಿದ್ದಾನೆ. ದರೋಡೆಯ ಮಾಸ್ಟರ್ ಮೈಂಡ್ ಕ್ಸೇವಿಯರ್ ಸೇರಿ ಎಲ್ಲರೂ ವಿಲಾಸಿ ಜೀವನ, ಇಸ್ಪೀಟು, ಜೂಜು ಚಟಕ್ಕೆ ಬಿದ್ದು ಸಾಲಮಾಡಿಕೊಂಡಿದ್ದು, ಅದನ್ನು ಹೇಗಾದರೂ ತೀರಸಿಬೇಕೆಂದು ಎಟಿಎಂ ವಾಹನ ದರೋಡೆ ನಡೆಸಿದ್ದಾರೆ. ಮುಖ್ಯ ಆರೋಪಿಗಳಾದ ಗೋಪಿ ಮತ್ತು ಕ್ಸೇವಿಯರ್ 17 ಸಾವಿರ ರೂ ಸಂಬಳ ಪಡೆಯುತ್ತಿದ್ದರು. ಆ ಪೈಕಿ ಕ್ಸೇವಿಯರ್ ಒಂದು ವರ್ಷದ ಹಿಂದೆಯೇ ಕೆಲಸ ಬಿಟ್ಟಿದ್ದನು. ಕುಡಿತ, ಜೂಜಿನ ಚಟದಿಂದಾಗಿ ಆರೋಪಿಗಳು ಹಣಕಾಸು ಸಮಸ್ಯೆಗೆ ಸಿಲುಕಿದ್ದರು. ದರೋಡೆ ಹಣದಲ್ಲಿ ಸಾಲ ತೀರಿಸಿ, ಉಳಿದ ಹಣದಲ್ಲಿ ಐಷಾರಾಮಿ ಜೀವನ ನಡೆಸುವ ಯೋಜನೆ ಆರೋಪಿಗಳದ್ದಾಗಿತ್ತು.

ಈ ಹಿನ್ನಲೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಅಣ್ಣಪ್ಪನಾಯ್ಕ ಸಂಚಿನ ಪ್ರಕಾರ ವಾಹನ ದರೋಡೆ

2ನೇ ಪುಟನೋಡಿ

## 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೂರ್ಯಕಾಂತ್ ನಾಳೆ ಪ್ರಮಾಣ



ನವದೆಹಲಿ,ನ.23-ಭಾರತದ ಸರ್ವೋಚ್ಚನ್ಯಾಯಾಲಯದ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೂರ್ಯಕಾಂತ್ ಅವರು ನಾಳೆ ಪ್ರಮಾಣ ವಚನ ಸ್ವಿಕರಿಸಲಿದ್ದಾರೆ. ಜಮು ಮತ್ತು ಕಾಶಿರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸುವ 370 ನೇ ವಿಧಿಯನ್ನು ರದ್ದುಗೊಳಿಸುವುದು, ಬಿಹಾರದ ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಪೆಗಾಸಸ್ ಸ್ಪೈವೇರ್ ಪ್ರಕರಣದ ಕುರಿತು ಹಲವಾರು ಮಹತ್ವದ ತೀರ್ಪುಗಳು ನೀಡಿದ ನ್ಯಾಯಮೂರ್ತಿ ಸೂರ್ಯಕಾಂತ್ ಸೋಮವಾರ ಭಾರತದ 53 ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವಿಕರಿಸಲಿದ್ದಾರೆ.

ಇಂದು ಸಂಜೆ ಅಧಿಕಾರದಿಂದ

2ನೇ ಪುಟನೋಡಿ

## ಉಮೀದ್ 'ನಲ್ಲಿ ವಕ್ ಸಂಸ್ಥೆಗಳ ಮಾಹಿತಿ ಸಲ್ಲಿಕೆ : ದ.ಕ. ಜಿಲ್ಲೆಯಲ್ಲಿ ಶೇ.74ರಷ್ಟು ಪ್ರಗತಿ

ಮಂಗಳೂರು, ನ.23: ದ.ಕ. ಜಿಲ್ಲೆಯಲ್ಲಿ ವಕ್ಫ್ ಸಂಸ್ಥೆಗಳ ವಿವರಗಳನ್ನು ಉಮಿದ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೇ.74ರಷ್ಟು ವಕ್ಫ್ ಸೊತ್ತುಗಳ ದಾಖಲೆಗಳನ್ನು ಅಪ್ಲೋಡ್ ಮಾಡಲಾಗಿದೆ ಎಂದು ದ.ಕ.ಜಿಲ್ಲಾ ವಕ್ಫ್ ಕಚೇರಿಯ ಮೂಲಗಳು ತಿಳಿಸಿವೆ.

ರಾಜ್ಯ ವಕ್ಫ್ ಸಚಿವರು 2025 ನವೆಂಬರ್ 27ರ ಮೊದಲು ವಕ್ಫ್‌ನ ಎಲ್ಲ ಸೊತ್ತುಗಳ ದಾಖಲೆಗಳನ್ನು ಅಪ್ಲೋಡ್ ಮಾಡುವಂತೆ ಈಗಾಗಲೇ ನಿರ್ದೇಶನ ನೀಡಿದ್ದಾರೆ.

ಅದರಂತೆ ಇನ್ನು ಬಾಕಿ ಉಳಿದಿರುವ ಮಸೀದಿ, ಮದ್ರಸ ಹಾಗೂ ಖಬರಸ್ಥಾನಗಳನ್ನು ವಿವರಗಳನ್ನು ತಕ್ಷಣ ಸಂಬಂಧಪಟ್ಟ ಸಂಸ್ಥೆಗಳ ಆಡಳಿತ ಸಮಿತಿಯ ಅಧ್ಯಕ್ಷರು ಅಥವಾ ಕಾರ್ಯದರ್ಶಿ ಜಿಲ್ಲಾ ವಕ್ಫ್ ಕಚೇರಿಯನ್ನು ಸಂಪರ್ಕಿಸಿ




ಸೊತ್ತುಗಳ ವಿವರಗಳನ್ನು ಉಮೀದ್ ಪೋರ್ಟಲ್-2025ರಲ್ಲಿ ಅಪ್ಲೋಡ್ ಮಾಡುವಂತೆ ದ.ಕ. ಜಿಲ್ಲಾ ವಕ್ಫ್ ಕಚೇರಿಯ ಪ್ರಕಟನೆ ತಿಳಿಸಿದೆ.

### ಅಪರಾಧಗಳಲ್ಲಿ ಪೊಲೀಸರು ಭಾಗಿಯಾಗಿದ್ದರೆ

## ಮುಲ್ಲಾಜಿಲ್ಲದೆ ಸೇವೆಯಿಂದ ವಜಾ : ಪರಮೇಶ್ವರ್



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ನ.22- ಪೊಲೀಸ್? ಸಿಬ್ಬಂದಿ ಮತ್ತು ಅಧಿಕಾರಿಗಳು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಸೇವೆಯಿಂದ ವಜಾಗೊಳಿಸುವುದು ಸೇರಿದಂತೆ ಮುಲ್ಲಾಜಿಲ್ಲದೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ದರೋಡೆ ಪ್ರಕರಣದಲ್ಲಿ ಮತ್ತು ಕೋರಮಂಗಲ ಪೊಲೀಸ್? ಠಾಣೆ 2ನೇ ಪುಟನೋಡಿ

## ಬೀದರ್ ಟು ಬೆಂಗಳೂರು




ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಸದಾ ಹೊಸತನ ಹಾಗೂ ಸಾಹಸಕ್ಕೆ ಮತ್ತೊಂದು ಹೆಸರಾದ ಮಲ್ಲಮ್ಮ ನುಡಿ ಇದೀಗ ಬೆಂಗಳೂರು ಆವೃತ್ತಿಯಾಗಿಯೂ ಹೊರಹೊಮ್ಮಿದೆ. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಕನಕಪುರ, ತುಮಕೂರು, ಹೊಸಕೋಟೆ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಸೇರಿ ಏಕಕಾಲಕ್ಕೆ ಬೀದರ್ ನಿಂದ ಬೆಂಗಳೂರುವರೆಗೆ ಪ್ರಕಟವಾಗಲಿದ್ದು ಪತ್ರಿಕೋದ್ಯಮ ದಲ್ಲಿ ಹೊಸ ಇತಿಹಾಸ ಸೃಷ್ಟಿಸಲಿದೆ

**-ಆಡಳಿತ ಮಂಡಳಿ**



## ಮಲ್ಲಮ್ಮ ನುಡಿಯ ಕಾನೂನು ವಿಭಾಗಕ್ಕೆ ನೇಮಕ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಹೈಕೋರ್ಟ್‌ನ ಹಿರಿಯ ವಕೀಲರೂ ಜನಪರ ಆಶಯಗಳಿಗೆ ಸ್ಪಂದಿಸುವಲ್ಲಿ ಸದಾ ಮುಂದು ಇರುವ ಶ್ರೀಯುತ ಆನಂದ ರೆಡ್ಡಿ ಇದೀಗ ಪ್ರತಿಷ್ಠಿತ ಮಲ್ಲಮ್ಮ ನುಡಿಯ ಕಾನೂನು ವಿಭಾಗದ ಗೌರವ ಸಲಹೆಗಾರರಾಗಿ ನೇಮಕವಾಗಿದ್ದಾರೆ.



ಪತ್ರಿಕೆಯ ಪ್ರಗತಿಗೆ ಕೈ ಜೋಡಿಸಿರುವ ಇವರು, ನ್ಯಾಯಾಲಯದ ಪ್ರತಿಯೊಂದು ಜಾಹೀರಾತು ರೂಪದ ನೋಟಿಸ್ ಕೊಡಲಿದ್ದಾರೆ. ಪತ್ರಿಕೆಗೆ ಸಂಬಂಧಿತ ರಾಜ್ಯದ ಎಲ್ಲಾ ವ್ಯಾಜ್ಯಗಳನ್ನು ಖುದ್ದು ಪರಿಹರಿಸುವಲ್ಲಿ ಸಹಕರಿಸಲಿದ್ದಾರೆ. ಪತ್ರಿಕಾ ಬಳಗ ಹಾಗೂ ಆಡಳಿತ ಮಂಡಳಿಗೆ ಶ್ರೀಯುತ ಆನಂದ ರೆಡ್ಡಿ ಅವರಿಗೆ ಆದರದ ಸ್ವಾಗತ ಕೋರಿದೆ.

**ಮೊದಲ ಆವೃತ್ತಿಯ ಟಿ-20 ವಿಶ್ವಕಪ್ ಗೆದ್ದ ಭಾರತದ ಅಂಧ ಮಹಿಳೆಯರ ಕ್ರಿಕೆಟ್ ತಂಡ**

## ಒಂದನೇ ಪುಟದಿಂದ

### ಸೂರ್ಯಕಾಂತ್ ನಾಳೆ ಪ್ರಮಾಣ

ನಿವೃತ್ತಲಾಗಲಿರುವ ನ್ಯಾಯಮೂರ್ತಿ ಬಿ ಆರ್ ಗವಾಯಿ ಅವರ ನಂತರ ಅವರು ಅಧಿಕಾರವಹಿಸಿಕೊಳ್ಳಲಿದ್ದಾರೆ. ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಕಳೆದ ಅಕ್ಟೋಬರ್ 30 ರಂದು ಮುಂದಿನ ಸಿಜೆಐ ಆಗಿ ನೇಮಿಸಲಾಗಿತ್ತು. ಸುಮಾರು 15 ತಿಂಗಳುಗಳ ಸೇವಾವಧಿ ಇದ್ದು ,ಮುಂದಿನ ಫೆಬ್ರವರಿ 9, 2027 ರಂದು 65 ವರ್ಷ ತುಂಬಿದ ನಂತರ ನಿವೃತ್ತಲಾಗಲಿದ್ದಾರೆ.

ಫೆಬ್ರವರಿ 10, 1962 ರಂದು ಹರಿಯಾಣದ ಹಿಸಾರ್ ಜಿಲ್ಲೆಯಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ನ್ಯಾಯಮೂರ್ತಿ ಕಾಂತ್, ಪಟ್ಟಣದಲ್ಲಿ ವಕೀಲ ಹುದ್ದೆ ಆರಂಭಿಸಿ ಈಗ ದೇಶದ ಅತ್ಯುನ್ನತ ನ್ಯಾಯಾಂಗ ಹುದ್ದೆಗೆ ಏರುತ್ತಿದ್ದಾರೆ, 2011 ರಲ್ಲಿ ಕುರುಕ್ಷೇತ್ರ ವಿಶ್ವವಿದ್ಯಾಲಯದಿಂದ ಕಾನೂನು ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆಯನ್ನೂ ಅವರು ಹೊಂದಿದ್ದಾರೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಹಲವಾರು ಗಮನಾರ್ಹ ತೀರ್ಪುಗಳನ್ನು ಬರೆದ ನ್ಯಾಯಮೂರ್ತಿ ಕಾಂತ್ ಅವರನ್ನು ಅಕ್ಟೊಬರ್ 5, 2018 ರಂದು ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಯಿತು.

ಎಸ್‌ಸಿ ನ್ಯಾಯಾಧೀಶರಾಗಿ ಅವರ ಅಧಿಕಾರಾವಧಿಯು 370 ನೇ ವಿಧಿ ರದ್ದತಿ, ವಾಕ್ ಸ್ವಾತಂತ್ರ್ಯ ಮತ್ತು ಪೌರತ್ವ ಹಕ್ಕುಗಳ ಕುರಿತಾದ ತೀರ್ಪುಗಳಿಂದ ಗುರುತಿಸಲ್ಪಟ್ಟಿದೆ.

ರಾಜ್ಯ ವಿಧಾನಸಭೆಯು ಅಂಗೀಕರಿಸಿದ ಮಸೂದೆಗಳನ್ನು ನಿರ್ವಹಿಸುವಲ್ಲಿ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳ ಅಧಿಕಾರಗಳ ಕುರಿತು ಇತ್ತೀಚಿನ ಅಧ್ಯಕ್ಷೀಯ ಉಲ್ಲೇಖದ ಭಾಗವಾಗಿ ನ್ಯಾಯಾಧೀಶರು ಇದ್ದರು. ರಾಜ್ಯಗಳಾದ್ಯಂತ ಸಂಭಾವ್ಯ ಪರಿಣಾಮಗಳೊಂದಿಗೆ ಈ ತೀರ್ಪು ಕುತೂಹಲದಿಂದ ಕಾಯಲಾಗುತ್ತಿದೆ.

ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ () ಕೈಗೊಳ್ಳುವ ಚುನಾವಣಾ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ಗುಂಪನ್ನು ಆಲಿಸುವಾಗ, ಬಿಹಾರದಲ್ಲಿ ಕರಡು ಮತದಾರರ ಪಟ್ಟಿಯಿಂದ ಹೊರಗುಳಿದ 65 ಲಕ್ಷ ಮತದಾರರ ವಿವರಗಳನ್ನು ಬಹಿರಂಗಪಡಿಸುವಂತೆ ನ್ಯಾಯಮೂರ್ತಿ ಕಾಂತ್ ಚುನಾವಣಾ ಆಯೋಗಕ್ಕೆ ಆದೇಶಿಸಿದ್ದರು.

### ರೈತ ಆತ್ಮಹತ್ಯೆ

ಸೇವಿಸಿ ಪ್ರಾಣಬಿಟ್ಟಿದ್ದಾನೆ. ಮೃತ ರೈತನಿಗೆ ಎರಡು ಗಂಡು ಮತ್ತು ಒಬ್ಬ ಹೆಣ್ಣು ಮಗಳಿದ್ದಾಳೆ.

**ಫಲಕಾರಿಯಾಗದ ಚಿಕಿತ್ಸೆ :**

ಶನಿವಾರ ರಾತ್ರಿ ಕಾಳಗಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕಲಬುರಗಿ ಜಿಲ್ಲಾಸ್ಪತ್ರೆಗೆ ತರುವಷ್ಟರಲ್ಲಿ ರವಿವಾರ ರಾತ್ರಿ 12-15ಕ್ಕೆ ಕೊನೆಯುಸಿರೆಳೆದಿದ್ದಾನೆ. ಕಾಳಗಿ ಸಮೂದಾಯ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ಮಾಡಲಾಗಿದೆ.

### 7.11 ಕೋಟಿ ದರೋಡೆ

ಮಾಡಲಾಗಿದ್ದು, ಹಾಲಿ ಸಿಬ್ಬಂದಿ ಗೋಪಿಯೇ ದರೋಡೆ ಪ್ರಕರಣದ ಮಾಸ್ಟರ್ ಮೈಂಡ್, ಎಂಬುದು ಬಹಿರಂಗವಾಗಿದೆ. ಪ್ರಕರಣ ಸಂಬಂಧ ಮೊದಲಿಗೆ ನಗರದಲ್ಲಿ ಮೂವರು ಬಳಿಕ ಮೂವರನ್ನು ಹೈದರಾಬಾದ್?ನಿಂದ ಬಂಧಿಸಿ ಕರೆತರಲಾಗಿದೆ. ಪ್ರಕರಣದ 7ನೇ ಆರೋಪಿ ರಾಕೇಶ್‌ನನ್ನು ಕೂಡ ಪೊಲೀಸರು ಬಂಧಿಸಿದ್ದಾರೆ. ಆರೋಪಿ ರವಿ ಸಹೋದರನಾದ ರಾಕೇಶ್, ರವಿ ಜೊತೆ ಸೇರಿ ದರೋಡೆಗೆ ಸಂಚು ರೂಪಿಸಿದ್ದರು, ರಾಕೇಶನೇ ತಡರಾತ್ರಿ ಸಿದ್ದಾಪುರ ಠಾಣೆಗೆ ಬಂದು ಶರಣಾಗಿದ್ದಾನೆ.

**ಗೃಹಸಚಿವರ ಪ್ರಶಂಸೆ:**

ಸದಾಶಿವನಗರದಲ್ಲಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ್, ನಿವಾಸಕ್ಕೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಅಪರಾಧ ವಿಭಾಗ ಜಂಟಿ ಪೊಲೀಸ್ ಆಯುಕ್ತ ಅಜಯ್ ಹಿಲೋರಿ, ಪಶ್ಚಿಮ ವಿಭಾಗ ಜಂಟಿ ಪೊಲೀಸ್ ಆಯುಕ್ತ ವಂಶಿಕೃಷ್ಣ ಮತ್ತು ದಕ್ಷಿಣ ವಿಭಾಗ ಡಿಸಿಪಿ ಲೋಕೇಶ್ ಜಗಲಾಸರ್ ಭೇಟಿ ನೀಡಿದ್ದಾರೆ. ದರೋಡೆ ಪ್ರಕರಣ ಬೇಧಿಸಿರುವ ನಗರ ಪೊಲೀಸರನ್ನು ತಮ್ಮ ನಿವಾಸಕ್ಕೆ ಕರೆಸಿ ನಗರ ಪೊಲೀಸರ ಕಾರ್ಯಕ್ಕೆ ಗೃಹಸಚಿವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಜೊತೆಗೆ ತನಿಖೆಯ ಬಗ್ಗೆ ಮಾಹಿತಿಯನ್ನೂ ಪಡೆದುಕೊಂಡಿದ್ದಾರೆ.

**6.29 ಕೋಟಿ ಜಪ್ತಿ:**

7.11 ಕೋಟಿ ಹಣ ದರೋಡೆ ಸಂಬಂಧ ಇಲ್ಲಿವರೆಗೆ 7 ಆರೋಪಿಗಳನ್ನು ಬಂಧಿಸಲಾಗಿದೆ. ಈಗ 6.29 ಕೋಟಿ ಹಣ ಸಿಕ್ಕಿದೆ, ಉಳಿದ ಹಣದ ಬಗ್ಗೆ ತನಿಖೆ ಆಗ್ತಿದೆ. ಪೊಲೀಸರು ತಾಂತ್ರಿಕವಾಗಿ ಎಚ್ಚರಿಕೆಯಿಂದ ಕೆಲಸ ಮಾಡಿದ್ದು, ಆರೋಪಿಗಳು ಬಳಸಿದ ವಾಹನಗಳನ್ನು ಸೀಜ್ ಮಾಡಿದ್ದಾರೆ. ಮುಂದೆ ಇಲಾಖೆಯಲ್ಲಿ ಇನ್ನಷ್ಟು ಎಚ್ಚರಿಕೆಯಿಂದ ಇರಬೇಕು ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದ್ದಾರೆ.

**ಮಾಜಿ ಸೈನಿಕನ ಪುತ್ರ**

ಬಂಧಿತರಪೈಕಿ ಮಾಜಿ ಸೈನಿಕನ ಪುತ್ರನಾಗಿರುವ ರವಿ ದರೋಡೆ ಪ್ರಕರಣದ ಸೂತ್ರಧಾರನಾಗಿದ್ದು, ಎಂಎಸ್‌ಸಿ ವ್ಯಾಸಂಗ ಮಾಡಿದ್ದ ಆತ ನಡೆಸುತ್ತಿದ್ದ ಟ್ರಾವೆಲ್ ಏಜೆನ್ಸಿ ಯಿಂದ ನಷ್ಟವಾಗಿದ್ದರಿಂದ ಏಜೆನ್ಸಿ ಮುಚ್ಚಿ ಮನೆಯಲ್ಲಿದ್ದಾಗ ದರೋಡೆಗೆ ಸಂಚು ರೂಪಿಸಿದ್ದ ಎಂಬುದು ತಿಳಿದುಬಂದಿದೆ.

ನಗರದಲ್ಲಿ ವಾಸವಿರುವ ರವಿ ಪತ್ನಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಅವರು ತನ್ನ ಪತಿ ದರೋಡೆಯಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. ಕೃತ್ಯದಲ್ಲಿ ರವಿಯ ಸಹೋದರ ಹಾಗೂ ಅವರ ತಂದೆಯ ಪಾತ್ರದ ಬಗ್ಗೆಯೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

### ಸೇವೆಯಿಂದ ವಜಾ : ಪರಮೇಶ್ವರ್

ವ್ಯಾಪ್ತಿಯ ಪ್ರಕರಣವೊಂದರಲ್ಲಿ ಮಾಲೂರು ಪೊಲೀಸ್? ಠಾಣೆಯ ಕಾನ್‌ಟೆಬಲ್ ಭಾಗಿಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಇನ್ನು ಮುಂದೆ ಮತ್ತಷ್ಟು ಎಚ್ಚರಿಕೆಯಿಂದ ಇರುವಂತೆ ಪೊಲೀಸ್? ಸಿಬ್ಬಂದಿಗಳಿಗೆ ಸೂಚನೆ ನೀಡುತ್ತೇ?ನೆ. ಅಪರಾಧಕೃತ್ಯಗಳಲ್ಲಿ ಯಾರಾದರೂ ಭಾಗಿಯಾಗಿರುವುದು ಕಂಡುಬಂದರೆ ಮುಲಾಜಿಲ್ಲದೆ ಸೇವೆಯಿಂದ ವಜಾಗೊಳಿಸಲಾಗುವುದು. ಕೋರಮಂಗಲದಲ್ಲಿ ಪತ್ತೆಯಾದ ಪ್ರಕರಣದಲ್ಲೂ ಮಾಲೂರು ನಗರ ಠಾಣೆಯ ಪೊಲೀಸ್? ಸಿಬ್ಬಂದಿಗಳು ಭಾಗಿಯಾಗಿದ್ದಾರೆ. ಅವರನ್ನು ಈಗಾಗಲೇ ಬಂಧಿಸಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ನಡೆದಿದ್ದ 7.11 ಕೋಟಿ ದರೋಡೆ ಪ್ರಕರಣದಲ್ಲಿ ಪೊಲೀಸ್? ಕಾನ್‌ಸ್ಟೆ?ಬಲ್ ಸೇರಿದಂತೆ ಏಳು ಮಂದಿಯನ್ನು ಬಂಧಿಸಲಾಗಿದೆ. 6.29 ಕೋಟಿ ಹಣವನ್ನು ವಸೂಲಿ ಮಾಡಲಾಗಿದೆ. ಮೂರ್ನಾಲ್ಕು ತಂಡಗಳನ್ನಾಗಿ ರಚಿಸಿ ಆರೋಪಿಗಳನ್ನು ಕ್ಷಿ?ಪ್ರಗತಿಯಲ್ಲಿ ಬಂಧಿಸಲಾಗಿದೆ. ಪೊಲೀಸ್? ಆಯುಕ್ತರು, ಇಬ್ಬರು ಜಂಟಿ ಆಯುಕ್ತರು, 200ಕ್ಕೂ ಹೆಚ್ಚು ಸಿಬ್ಬಂದಿಗಳು ಪತ್ತೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಎಂದು ಹೇಳಿದರು.

ದರೋಡೆ ಪ್ರಕರಣ ಬೆಂಗಳೂರಿಗೆ ಕೆಟ್ಟ ಹೆಸರು ತಂದಿತ್ತು. ಬೆಂಗಳೂರು ಪೊಲೀಸರು ಸಮರ್ಥರಿದ್ದಾರೆ. ಆರೋಪಿಗಳನ್ನು ಬಂಧಿಸಿಯೇ ಬಂಧಿಸುತ್ತಾರೆ ಎಂಬ ವಿಶ್ವಾಸ ತಮಗಿತ್ತು. ಅದರಂತೆ ಪೊಲೀಸರು ತಮ್ಮ ಕಾರ್ಯಕ್ಷಮತೆಯನ್ನು ಸಾಬೀತುಪಡಿಸಿದ್ದಾರೆ ಎಂದರು. ಸವಾಲಿನ ಸಂದರ್ಭವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ತಾಂತ್ರಿಕವಾಗಿ ಮತ್ತು ಬುದ್ಧಿ ಉಪಯೋಗಿಸಿ ಪ್ರಕರಣ ಭೇದಿಸಿದ್ದಾರೆ. ದರೋಡೆಕೋರರು ಕೂಡ ಬಹಳ ಬುದ್ಧಿವಂತಿಕೆ ಪ್ರದರ್ಶಿಸಿದರು. ಹಲವು ವಾಹನಗಳಿಗೆ ಹಣ ಬದಲಾವಣೆ ಮಾಡಿ ಸಾಗಿಸಲಾಗಿತ್ತು ಎಂದು ವಿವರಿಸಿದರು. ದರೋಡೆ ಪ್ರಕರಣದ ಭೇದಿಸಿದ್ದರಿಂದಾಗಿ ಸರ್ಕಾರಕ್ಕೆ ಮತ್ತು ಪೊಲೀಸರಿಗೆ ಒಳ್ಳೆಯ ಹೆಸರು ಬಂದಿದೆ. ಇಡೀ ರಾಜ್ಯವೇ ಈ ಪ್ರಕರಣದ ಮೇಲೆ ತೀವ್ರ ನಿಗಾ ವಹಿಸಿತ್ತು ಎಂದರು. ಸಿಎಂಎಸ್? ಸಂಸ್ಥೆ ಲೋಪ ಇರುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಆರ್‌ಬಿಐ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ವಿಚಾರಣೆ ನಡೆಸಿ ಲೋಪಗಳು ಕಂಡುಬಂದರೆ ಅಗತ್ಯ ಕ್ರಮ ಕೈಗೊಳ್ಳುತ್ತೇ?ವೆ ಎಂದು ಸ್ಪಷ್ಟಪಡಿಸಿದರು.

## ಆಸ್ಪತ್ರೆ ಉನ್ನತೀಕರಣ ಕಾಮಗಾರಿಗೆ ಶಂಕುಸ್ಥಾಪನೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸಮುದಾಯ ಆರೋಗ್ಯ ಕೇಂದ್ರವನ್ನು 50 ಹಾಸಿಗೆಗಳಿಗೆ ಉನ್ನತೀಕರಿಸುವ 6.45 ಕೋಟಿ ಮೊತ್ತದ ಕಾಮಗಾರಿಗೆ ಶಾಸಕ ಪ್ರಭು ಚವ್ಹಾಣ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

ಕಮಲನಗರ ಜನತೆಗೆ ಆರೋಗ್ಯ ಸೇವೆಗಳಿಗಾಗಿ ಬೇಡಿಕೆ ತಕ್ಕಂತೆ. ಉನ್ನತೀಕರಣಗೊಳಿಸಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆಸ್ಪತ್ರೆಯ ಅಭಿವೃದ್ಧಿಗೆ ಬೇಕಿರುವ ಎಲ್ಲ ಸೌಕರ್ಯಗಳನ್ನು ಒದಗಿಸಲು ಕೆಲಸ ಮಾಡುತ್ತೇನೆಂದರು.

ಕಾಮಗಾರಿ ಗುಣಮಟ್ಟ ಹಾಗೂ ನಿಗದಿತ ಅವಧಿಯೊಳಗಾಗಿ ಪೂರ್ಣಗೊಳಿಸಬೇಕು. ಯಾವುದೇ ರೀತಿಯ ದೂರುಗಳು ಬಂದರೆ ಸುಮ್ಮನಿರುವುದಿಲ್ಲ ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಇದೇ ವೇಳೆ ವಿವಿಧ ವಾರ್ಡ್‌ಗಳಲ್ಲಿ ಸಂಚರಿಸಿ ಆಸ್ಪತ್ರೆಯ ವ್ಯವಸ್ಥೆಯನ್ನು ರೋಗಿಗಳ ಕುಂದು ಕೊರತೆಗಳನ್ನು ಆಲಿಸಿದರು. ಸಾರ್ವಜವನಿಕರು ರಾತ್ರಿ ವೇಳೆ ವೈದ್ಯರು ಇರುವುದಿಲ್ಲ ಎಂದಾಗ ತೀವ್ರ ಅಸಮಾಧಾನಗೊಂಡು, ಆರೋಗ್ಯ ಕೇಂದ್ರದಲ್ಲಿ 24 ಗಂಟೆ ವೈದ್ಯರು ಲಭ್ಯವಿರಬೇಕು. ಸಣ್ಣ ಪುಟ್ಟ

ಸಮಸ್ಯೆಗಳಿಗೂ ಜಿಲ್ಲಾಸ್ಪತ್ರೆಗೆ ಶಿಫಾರಸ್ಸು ಮಾಡುವುದನ್ನು ನಿಲ್ಲಿಸಬೇಕು. ವೈದ್ಯರ ನಿರ್ಲಕ್ಷ್ಯ ಹೀಗೆಯೇ ಮುಂದುವರೆದಲ್ಲಿ ಕಠಿಣಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕಮಲನಗರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿಗಳನ್ನು ನಿರ್ಮಿಸಲು 83.5 ಲಕ್ಷ ಹಾಗೂ ಸೋನಾಳ ಗ್ರಾಮದಲ್ಲಿ 32 ಲಕ್ಷ ಮೊತ್ತದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು. ನಂತರ ಹೊರಂಡಿಯಲ್ಲಿನ ಡಾ.ಅಂಬೇಡ್ಕರ್ ವಸತಿ ಶಾಲೆಗೆ ಭೇಟಿ ನೀಡಿ ವ್ಯವಸ್ಥೆಯನ್ನು ಪರಿಶೀಲಿಸಿದರು.

ತಾಲೂಕ ವೈದ್ಯಾಧಿಕಾರಿ ಡಾ.ಗಾಯತ್ರಿ, ಎಇಇ ಸೋಮಶೇಖರ, ವೈದ್ಯಾಧಿಕಾರಿ ಡಾ.ಶ್ರೀಮಂತ ಬಿರಾದಾರ,

ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ರಾಮಶೆಟ್ಟಿ ಪನ್ನಾಳೆ, ಬಸವರಾಜ ಪಾಟೀಲ, ಶಿವಕುಮಾರ ವಡ್ಡೆ, ಶಿವು ಝುಲ್ಯೆ, ರಂಗರಾವ ಜಾಧವ, ಶಿವರಾಜ ಅಲ್ವಾಜೆ, ನಾಗೇಶ ಪತ್ರೆ, ಸಂತೋಷ ಬನವಾಸೆ, ಮಲ್ಲಿಕಾರ್ಜುನ ದಾನಾ, ಸೇರಿದಂತೆ ಅನೇಕರಿದ್ದರು.

## ದುಡಿಯುವ ಜನರ ಹಕ್ಕುಗಾಗಿ ಬೆಂಗಳೂರು ಚಲೋ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಅಸುರಕ್ಷಿತ ಕಾರ್ಮಿಕರ ಐಕ್ಯ ಆಂದೋಲನ ದಡಿ ನ.26ರಂದು ದುಡಿಯುವ ಜನರ ಹಕ್ಕುಗಳಿಗಾಗಿ ಪ್ರಚಾರಾಂದೋಲನ, ಬೆಂಗಳೂರು ಚಲೋ ಅಹೋರಾತ್ರಿ ಸತ್ಯಾಗ್ರಹ ನಡೆಸಲಾಗುವುದು ಎಂದು ಕರ್ನಾಟಕ ಶ್ರಮಿಕ ಶಕ್ತಿಯ ಜಿಲ್ಲಾಧ್ಯಕ್ಷರಾದ ಗಂಗಪ್ಪ ತೋರಣದಿನ್ನಿ ಅವರು ಹೇಳಿದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಗುತ್ತೆಗೆ ಪದ್ಧತಿ ಹೆಸರಲ್ಲಿ ಕಾರ್ಮಿಕರಿಗೆ ವಂಚನೆ ಮಾಡಲಾಗುತ್ತಿದ್ದು, ಅಸಂಘಟಿತ, ಗುತ್ತಿಗೆ, ಸ್ಕಿಂ ಹಾಗೂ ಕೃಷಿ ಕಾರ್ಮಿಕರನ್ನೊಳಗೊಂಡಂತೆ ಸೇವಾ ಭದ್ರತೆಯಿಲ್ಲದ ಕಾರ್ಮಿಕರ ಒಳಿತಿಗಾಗಿ ಹೋರಾಟ ನಡೆಸುವ ಮೂಲಕ ಸರಕಾರದ ಗಮನ ಸೆಳೆಯಲಾಗುವುದು ಎಂದರು.

ಕೊರೋನಾ ಕಾಲದಲ್ಲಿ ಕೇಂದ್ರ ಸರ್ಕಾರ ಕಾರ್ಮಿಕರು ಹಲವಾರು ವರ್ಷಗಳ

ಹೋರಾಟದಿಂದ ಪಡೆದ ಕಾರ್ಮಿಕ ಕಾನೂನುಗಳನ್ನು ಮೊಟಕುಗೊಳಿಸಿ 4 ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದೆ. ಬಂಡವಾಳಶಾಹಿಗಳಿಗೆ ಸಹಸ್ರಾರು ಕೋಟಿ ಲಾಭ ಪಡೆಯಲು ಅವಕಾಶ ಮಾಡಿಕೊಟ್ಟಿದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರಕಾರ ಬಂಡವಾಳಿಶಾಹಿಗಳ ಪರ ಕಾನೂನು ಜಾರಿಗೆ ತಂದು ದುಡಿಯುವ ಜನರ ಜೀವನವು ಹಿಂದೆಂದಿಗಿಂತಲೂ ಹೆಚ್ಚು ಸಂಕಷ್ಟಕ್ಕೆ ಗುರಿಯಾಗುವಂತೆ ಮಾಡಿದೆ. ಹೋರಾಟದ ಮೂಲಕ ಕಾರ್ಮಿಕರ ಸೌಲಭ್ಯ ಕೇಂದ್ರ ತೆರೆಯಲು, ಪಡಿತರ ಬಲಪಡಿಸಿ ಕಾರ್ಮಿಕರಿಗೆ ಕೆಲಸದ ಭದ್ರತೆ ನೀಡುವುದು, ಕನಿಷ್ಠ ವೇತನ, ಸಾಮಾಜಿಕ ಭದ್ರತ ಮಂಡಳಿ ಸ್ಥಾಪನೆ ಮಾಡುವಂತೆ ಪ್ರತಿಭಟನೆ ನಡೆಸಲಾಗುವುದು ಎಂದರು.

ಕಾರ್ಮಿಕ ವಿರೋಧಿ 4 ಕಾರ್ಮಿಕ ಸಂಹಿತೆಗಳು ರದ್ದು

ಕೆಲಸದ ಅವಧಿ 8 ರಿಂದ 12 ಗಂಟೆಗೆ ಏರಿಕೆ ರದ್ದು ಹಾಗೂ ಗುತ್ತಿಗೆ ಪದ್ಧತಿ ರದ್ದು ಮಾಡಿ ಪೌರಕಾರ್ಮಿಕರ ಮಾದರಿಯಲ್ಲಿ ಡಿ.ಪಿ.ಎಸ್ ಯೋಜನೆ ಜಾರಿಮಾಡಬೇಕು ಅಸಂಘಟಿತ ವಲಯದ ಹಮಾಲಿ-ಟೈಲರ್-ಮನೆಕೆಲಸ-ಹೋಟೆಲ್-ಕಲ್ಯಾಣ ಮಂಟಪ-ನೇಕಾರರಿಗೆ ಕಲ್ಯಾಣ ಮಂಡಳಿ ರಚಿಸಬೇಕು ಎಂದು ಆಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಆಂಜನೇಯ ಕುರುಬದೊಡ್ಡಿ, ಮಾರೆಮ್ಮ, ರಂಗರೆಡ್ಡಿ, ಬಂಗಾರಿ ನರಸಿಂಹಲು ಸೇರಿದಂತೆ ಉಪಸ್ಥಿತರಿದ್ದರು.

## ಬೆಳೆ ಪರಿಹಾರ ತಕ್ಷಣ ರೈತರ ಖಾತೆಗೆ ಜಮೆ ಮಾಡಲು ಬೆಲ್ದಾಳೆ ಒತ್ತಾಯ

ಬೀದರ್: ಬೀದರ್ ದಕ್ಷಿಣ ಕ್ಷೇತ್ರ ಸೇರಿದಂತೆ ಬೀದರ್, ಬಸವಕಲ್ಯಾಣ, ಹುಲಸೂರು, ಹುಮನಾಬಾದ್ ತಾಲ್ಲೂಕಿನ ರೈತರಿಗೆ ತಕ್ಷಣ ಅತಿವೃಷ್ಟಿ ಬೆಳೆ ಹಾನಿ ಪರಿಹಾರ ಬಿಡುಗಡೆ ಮಾಡಬೇಕೆಂದು ಕ್ಷೇತ್ರದ ಶಾಸಕರಾದ ಬಿಜೆಪಿ ರಾಜ್ಯ ಕಾರ್ಯದರ್ಶಿ ಡಾ.ಶೈಲೇಂದ್ರ ಬೆಲ್ದಾಳೆ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಅತಿವೃಷ್ಟಿ ಬೆಳೆ ಹಾನಿ ಪರಿಹಾರ ಸಮರ್ಪಕವಾಗಿ ವಿತರಣೆ ಆಗುತ್ತಿಲ್ಲ. ಬೀದರ್, ಹುಮನಾಬಾದ್, ಬಸವಕಲ್ಯಾಣ, ಹುಲಸೂರು ತಾಲ್ಲೂಕಿನ ರೈತರ ಖಾತೆಗೆ ಹಣ ಜಮ ಆಗಿಲ್ಲ. ಈ ಬಗ್ಗೆ ಅನೇಕ ರೈತರು ನನಗೆ ಖುದ್ದು ಭೇಟಿಯಾಗಿ, ದೂರವಾಣಿ ಕರೆ ಮಾಡಿ ದೂರು ನೀಡಿದ್ದಾರೆ. ಜಿಲ್ಲಾಡಳಿತ ತಕ್ಷಣ ಈ ಕುರಿತು ಗಮನಹರಿಸಿ ಸಂತ್ರಸ್ತ ರೈತರ ಖಾತೆಗೆ ಪರಿಹಾರ ಹಣ ಜಮ ಮಾಡಬೇಕೆಂದು ಶನಿವಾರ ಹೊರಡಿಸಿರುವ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.ಬೀದರ್ ಜಿಲ್ಲೆಯ ಸುಮಾರು 1.80 ಲಕ್ಷ ರೈತರ ಖಾತೆಗೆ ಶೀಘ್ರವೇ ಮೊದಲ ಹಂತದ 140 ಕೋಟಿ ರೂ. ಬೆಳೆ ಹಾನಿ ಪರಿಹಾರ ಜಮೆಯಾಗಲಿದೆ. ಜಿಲ್ಲಾಡಳಿತ ಪರಿಹಾರ ವಿತರಣೆ ಪ್ರಕ್ರಿಯೆ ಆರಂಭಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಕಳೆದ ದಿ.29ರಂದು ಹೇಳಿದ್ದರು. ಆದರೆ ಈವರೆಗೆ ಅನೇಕ ರೈತರಿಗೆ ಪರಿಹಾರ ಬಂದಿಲ್ಲ. ಹೆಚ್ಚು ರೈತರು ಪರಿಹಾರಕ್ಕಾಗಿ ಕಾಯುತ್ತಿದ್ದಾರೆ. ಸಮಸ್ಯೆಯಲ್ಲಿರುವ ರೈತರಿಗೆ ಬೇಗ ನೆರವಾಗುವ ಕಾರ್ಯಕ್ಕೂ ಇಷ್ಟೊಂದು ವಿಳಂಬ, ನಿರ್ಲಕ್ಷ್ಯತೆ ವಹಿಸುತ್ತಿರುವುದು ಸರಿಯಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.ಸರ್ಕಾರ ಘೋಷಿಸಿದಂತೆ ಹೆಕ್ಟೇರ್ ಗೆ ಹೆಚ್ಚುವರಿ 8500 ರೂ. ಪರಿಹಾರ ಇನ್ನೂ ನೀಡುತ್ತಿಲ್ಲ. ಈಗ ನೀಡುತ್ತಿರುವ ಪರಿಹಾರ ಕೇಂದ್ರ ಸರ್ಕಾರದ ಎನ್ ಡಿಆರ್ ಎಫ್ ನಿಧಿಯ ಪರಿಹಾರವಾಗಿದೆ. ರಾಜ್ಯ ಸರ್ಕಾರ ಏನೂ ಕೊಟ್ಟಿಲ್ಲ. ಬೆಳೆ ನಷ್ಟದಿಂದ ರೈತ ಸಮೂಹ ಸಾಕಷ್ಟು ಸಂಕಷ್ಟದಲ್ಲಿ ಕಾಲ ಕಳೆಯುತ್ತಿದೆ. ಇಂಥ ಸ್ಥಿತಿಯಲ್ಲೂ ಸರ್ಕಾರದ ಹೆಚ್ಚುವರಿ ಪರಿಹಾರ ಘೋಷಣೆಗಷ್ಟೇ ಸೀಮಿತಗೊಳಿಸಿರುವ ನೀತಿ ರೈತ ವಿರೋಧಿಯಾಗಿದೆ. ಪರಿಹಾರ ನೀಡಿಕೆಯಲ್ಲಿ ಆಗುತ್ತಿರುವ ವಿಳಂಬವನ್ನು ಗಮನಿಸಿದರೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಸರಿಯಿಲ್ಲ.

**CHANGE OF NAME**

I, **PRARTHANA** (Old Name)
R/O 19-6-37,Near Millinum School,
Shivanagar North, Bidar, 585401
Karnataka State.
Have changed my name as
**PRARTHANA NOWBADE**
(New Name)
Vide affidavit Dated: 22-11-2025
Sworn before Notary & Advocate
**Sikenpure Maruti** at Bidar.

## ಕಬ್ಬಿಗೆ 2950 ರೂ. ನಿಗದಿ: ಬೀದರ್ ರೈತರ ಅಹೋರಾತ್ರಿ ಧರಣಿ ಅಂತ್ಯ



ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಕಬ್ಬಿಗೆ ಬೆಂಬಲ ಬೆಲೆಗೆ ಆಗ್ರಹಿಸಿ ರೈತ ಸಂಘಟನೆಗಳು ನಡೆಸುತ್ತಿದ್ದ ಅಹೋರಾತ್ರಿ ಧರಣಿ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮತ್ತು ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಿಂದ ಅಂತ್ಯಗೊಂಡಿದೆ. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರತಿ ಟನ್ ಕಬ್ಬಿಗೆ 2950 ರೂ. ದರ ಘೋಷಿಸಿದ್ದು, ರೈತರು ಒಪ್ಪಿಕೊಂಡು ಗುರುವಾರ ಪ್ರತಿಭಟನೆ ಹಿಂಪಡೆದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಮಧ್ಯಾಹ್ನ ಜಿಲ್ಲಾಧಿಕಾರಿ ಮತ್ತು ಎಸ್‌ಪಿ ನೇತೃತ್ವದಲ್ಲಿ ರೈತ ಸಂಘಟನೆಗಳ ನಾಯಕರ ಜತೆ ಸಭೆ ನಡೆದಿದೆ. ಸರ್ಕಾರದ 50 ರೂ. ಹೆಚ್ಚುವರಿಯಾಗಿ ಒಳಗೊಂಡು ಜಿಲ್ಲೆಯ ಕಾರ್ಖಾನೆಗಳು 2950 ರೂ. ಬೆಲೆ ನೀಡಲು ನಿರ್ಧರಿಸಿದ್ದು, ರೈತರು ಸಹಕರಿಸಬೇಕು ಎಂದು ಮನವೊಲಿಸಿದ್ದಾರೆ. ಇದಕ್ಕೆ ರೈತ ಮುಖಂಡರು ಒಪ್ಪಿಗೆ ಸೂಚಿಸಿದರು. ಬಳಿಕ ಉಸ್ತುವಾರಿ ಸಚಿವರ ಕಚೇರಿ ಎದುರು ಪ್ರತಿಭಟನಾ ಸ್ಥಳಕ್ಕೆ ಡಿಸಿ ಮತ್ತು ಎಸ್‌ಪಿ ಆಗಮಿಸಿ ಕಬ್ಬು ಬೆಳಗಾರರ ಎದುರು ಘೋಷಿಸಿದರು. ಇದರೊಂದಿಗೆ ಒಂದು ವಾರದಿಂದ ನಡೆಸುತ್ತಿದ್ದ ಧರಣಿ ಕೊನೆಗೊಂಡಿದೆ.

ಬಾಗಲಕೋಟೆಯಲ್ಲಿ ಈಚೆಗೆ ರೈತರ ಪ್ರತಿಭಟನೆ ವೇಳೆ ಹಿಂಸಾಚಾರ ನಡೆದ ಹಿನ್ನೆಲೆ ಎಚ್ಚೆತ್ತ ಜಿಲ್ಲಾಧಿಕಾರಿಗಳು ಜಿಲ್ಲೆಯ ಕಾರ್ಖಾನೆಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ ಟನ್‌ಗೆ 2950 ರೂ. ಬೆಲೆ ಕೊಡಲು ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಕ್ಕರೆ ಕಾರ್ಖಾನೆಗಳು ಮತ್ತು ರೈತರ ನಡುವಿನ ಹಗ್ಗಜಗ್ಗಾಟದಿಂದ ಜಿಲ್ಲೆಯಲ್ಲಿ ಕಬ್ಬು ಬೆಲೆ ನಿಗದಿ ವಿಷಯ ಜಟಿಲವಾಗಿತ್ತು. ದರ ನಿಗದಿ ಸಂಬಂಧ ಜಿಲ್ಲಾಧಿಕಾರಿಗಳು ಮೂರು ಸುತ್ತಿನ ಸಭೆಗಳು ನಡೆಸಿದರೂ ಒಮ್ಮತದ ನಿರ್ಧಾರಕ್ಕೆ ಬರಲು ಸಾಧ್ಯವಾಗದೆ ವಿಫಲವಾಗಿದ್ದವು. ಸರ್ಕಾರದ 50 ರೂ. ಹೆಚ್ಚುವರಿ ದರ ಸೇರಿ 2900 ರೂ. ಬೆಲೆ ನಿಗದಿಗೊಳಿಸಲಾಗಿತ್ತು. ಇದನ್ನು ಒಪ್ಪದ ರೈತರು ಟನ್‌ಗೆ 3200 ರೂ.ಗಳಿಗೆ ಆಗ್ರಹಿಸಿ ಹುಮನಾಬಾದ್‌ನಲ್ಲಿ ಬೃಹತ್ ಹೋರಾಟ ನಡೆಸಿದ್ದು, ತದನಂತರ ಧರಣಿ ಆರಂಭಿಸಿದ್ದರು. ನ.17ರಂದು ಸಚಿವರಾದ ಈಶ್ವರ ಖಂಡ್ರೆ ಮತ್ತು ರಹೀಮ್ ಖಾನ್ ಭೇಟಿ ನೀಡಿ ಪ್ರತಿಭಟನಾಕಾರರ ಮನವೊಲಿಕೆಗೆ ಪ್ರಯತ್ನಿಸಿದ್ದರೂ ವಿಫಲವಾಗಿತ್ತು. ಹೀಗಾಗಿ 'ದರ' ಸಂಘರ್ಷ ತಾರಕಕ್ಕೇರಿತ್ತು.

## ನ್ಯಾಯಾಧೀಶರಾದ ಸಂಜೀವಕುಮಾರ ಹಂಚಾಟೆ ಅವರಿಗೆ ಅದ್ದೂರಿ ಸ್ವಾಗತ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಪಟ್ಟಣದಲ್ಲಿ ಸಂಚಾರಿ ನ್ಯಾಯಾಲಯ ಕಾರ್ಯಪರಿಶೀಲನೆ ನಿಮಿತ್ಯ ಹೈಕೋರ್ಟ್ ನ್ಯಾಯಮೂರ್ತಿ ಮತ್ತು ಬೀದರ್ ಅಡಳಿತಾತ್ಮಕ ನ್ಯಾಯಾಧೀಶರಾದ ಸಂಜೀವಕುಮಾರ ಹಂಚಾಟೆ ಅವರಿಗೆ ಅದ್ದೂರಿ ಸ್ವಾಗತ ಮಾಡಿಲಾಯಿತು. ನ್ಯಾಯಾಧೀಶರಾದ ಸಂಜೀವಕುಮಾರ ಹಂಚಾಟೆ, ಬರುವ ಸುದ್ದಿ ತಿಳಿದ ವಿವಿಧ ವಕೀಲ ಸಂಘದವರು, ಕನ್ನಡ ಪರ ಸಂಘಟನೆಗಳು, ರೈತ ಸಂಘ, ಸಾರ್ವಜನಿಕ ಸಂಘ ಸಂಸ್ಥೆಯವರು, ನ್ಯಾಯಾಧೀಶರಿಗೆ ಪುಸ್ತಕಗಳು ಕಿರುಕಾಣಿಕೆ, ಶಾಲು, ಹಾರ, ಕಿರೀಟ ತೊಡೆಸಿ ಬಹಳ ಸಂತೋಷದಿಂದ ಗೌರವಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿ, ಬೀದರ ಜಿಲ್ಲೆಯ ಜನ ಹೃದಯ ಶ್ರೀಮಂತ ಜನರು,ನಿಮ್ಮ ಈ ಪ್ರೀತಿ ಅಭಿಮಾನಕ್ಕೆ ಮತ್ತು ಸ್ವಾಗತ ಕಾರ್ಯಕ್ರಮ ಆಯೋಜನೆ ಮಾಡಿದ ಪ್ರವೀಣ ಪಾಟೀಲ ಅವರಿಗೆ ಧನ್ಯವಾದಗಳು ತಿಳಿಸಿದರು.

## ಜಿಲ್ಲಾ ಉಸ್ತುವಾರಿಯಾಗಿ ಸಂದೀಪ್ ರೆಡ್ಡಿ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಉಸ್ತುವಾರಿಯಾಗಿ ಸಂದೀಪ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ. ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ರೆಡ್ಡಿ ಅವರನ್ನು ನೇಮಕ ಮಾಡಿ ಕಾಂಗ್ರೆಸ್ ಕಾರ್ಮಿಕ ವಿಭಾಗದ ಅಧ್ಯಕ್ಷ ಕೆ. ಪುಟ್ಟಸ್ವಾಮಿ ಗೌಡ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರು, ವಿಭಾಗದ ಅಧ್ಯಕ್ಷರು, ಪದಾಧಿಕಾರಿಗಳು, ಚುನಾವಣೆಗಳ ಪರಾಜಿತ ಹಾಗೂ ಪಕ್ಷದ ಮುಖಂಡರನ್ನು ಸಂಪರ್ಕಿಸಿ, ಪಕ್ಷದ ಸಂಘಟನೆ ಬಲವರ್ಧನೆಗೆ ಶ್ರಮಿಸಬೇಕು ಎಂದು ಸೂಚಿಸಿದ್ದಾರೆ.

## ಸಮಾಜದ ಬೇಡಿಕೆಗಾಗಿ ಪಾದಯಾತ್ರೆ: ಡಾ.ಪ್ರಂಣವಾನಂದ ಸ್ವಾಮಿಜಿ



ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಈಡಿಗ, ಬಿಲ್ಲವ, ನಾಮಧಾರಿ, ಧೀವರ, ತೀಯ ಸೇರಿದಂತೆ 26 ಪಂಗಡಗಳನ್ನು ಹೊಂದಿದ ಸಮಾಜದ ಒಟ್ಟು 18 ಬೇಡಿಕೆಗಳ ಈಡೇರಿಕೆಗಾಗಿ 2026 ಜನವರಿ 06ನೇ

ತಾರೀಖಿನಿಂದ ಶಹಾಪುರ ತಾಲೂಕಿನ ಕರದಾಳದಲ್ಲಿರುವ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದಿಂದ ಬೆಂಗಳೂರು ವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಅಲ್ಲಿಯ ಶಕ್ತಿಪೀಠದ ಪೀಠಾಧಿಪತಿಗಳಾದ ಪೂಜ್ಯ ಡಾ॥ ಪ್ರಣವಾನಂದ ಸ್ವಾಮಿಜಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಟಿಉದ್ದೇಶಿಸಿ ಮಾತನಾಡಿರುವ ಅವರು, ಈ ಐತಿಹಾಸಿಕ ಪಾದಯಾತ್ರೆಯು 700 ಕಿಮಿ ವರೆಗೆ ಸಾಗಲಿದ್ದು, ಬರೋಬ್ಬರಿ ಸುಮಾರು 41 ದಿನಗಳ ಕಾಲ ಸಾಗಲಿದೆ. ಫೆ.16ರಂದು ಬೆಂಗಳೂರಿನ ಫ್ರಿಡಮ್ ಪಾರ್ಕ್‌ನಲ್ಲಿ ಮುಕ್ತಾಯಗೊಂಡು ಅಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಮುಂದುವರೆಸಲಾಗುವುದು ಹೇಳಿದರು.

ಬಿಜೆಪಿ ಅಡಳಿತಾವಧಿಯಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅವರ ಜಯಂತಿ ಸರ್ಕಾರ ಆಚರಿಸಲು ಆರಂಭಿಸಿತು. ಆಗ ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪಿಸಿ ಅದಕ್ಕೆ 10 ಕೋಟಿ ಅನುದಾನ ಸಹ ನೀಡಿತ್ತು. ಆದರೆ ಕಾಂಗ್ರೆಸ್ ಸಕಾರ ಅಧಿಕಾರಕ್ಕೆ ಬಂದು 2 ವರೆ ವರ್ಷಗಳು ಕಳೆದರೂ ನಯಾಪೈಸೆ ನೀಡಿಲ್ಲ. ಒಂದು ತಿಂಗಳ ಕೆಳಗೆ ಅಷ್ಟೇ ನಿಗಮಕ್ಕೆ ನೂತನ ಅಧ್ಯಕ್ಷರ ನೇಮಕ ಮಾಡಿದೆ. 2023ರ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಕೈ ಬಲಪಡಿಸಿದ ನಮ್ಮ ಈ ನಿಗಮಕ್ಕೆ ಕೂಡಲೇ 500 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು, ಹಿಂದೆ 2004ರಲ್ಲಿ ಸಿದ್ದರಾಮಯ್ಯನವರೆ ಅಬಕಾರಿ ಸಚಿವರಾಗಿದ್ದ ಸಂದರ್ಭದಲ್ಲಿ ನಮ್ಮ ಕುಲಕಸುಬು ಆಗಿದ್ದ ಶೆಂಧಿ ಮಾರಾಟ ಸಂಪೂರ್ಣ ಬಂದ್ ಆಯಿತು. ಕುಮಾರ ಸ್ವಾಮಿ ಸಿಎಂ ಆದ ಬಳಿಕ ರಾಜ್ಯದಲ್ಲಿ ಸರಾಯಿ ಮಾರಾಟ ನಿಶೆಧಿಸಿದ್ದರು.

ಹೀಗಾಗಿ ಕುಲಕಸುಬು ಕಳೆದುಕೊಂಡ ಕಲ್ಯಾಣ ಕರ್ನಾಟಕ ಭಾಗದ ಸಂತ್ರಸ್ತ ಈಡಿಗರಿಗೆ 5 ಎಕರೆ ಜಮೀನು ಪ್ರತಿ ಕುಟುಂಬಕ್ಕೆ ಮಂಜೂರು ಮಾಡಬೇಕು, ಮಂಗಳೂರು, ಉಡುಪಿ, ಕಾರವಾರ ಹಾಗೂ ಶಿವಮೊಗ್ಗದಲ್ಲಿ ಒಟ್ಟು 22 ಲಕ್ಷಕ್ಕೂ ಅಧಿಕ ಹಾಗೂ ರಾಜ್ಯದ ಇತರೆ 27 ಜಿಲ್ಲೆಗಳಲ್ಲಿ 6 ಲಕ್ಷಕ್ಕೂ ಅಧಿಕ ಒಟ್ಟು 33 ಲಕ್ಷ ಜನಸಂಖ್ಯೆ ಇರುವ ನಮಗೆ ಈಗಿರುವ 2ಎಯಿಂದ ಎಸ್‌ಟಿ ಮೀಸಲಾತಿಗೆ ಸೇರಿಸುವುದಕ್ಕೆ ರಾಜ್ಯ ಸರಕಾರದಿಂದ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು, ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿಯನ್ನು ಬೆಂಗಳೂರಿನ ವಿಧಾನಸೌಧದ ಎದುರುಗಡೆ ಸ್ಥಾಪಿಸಬೇಕು, ರಾಜ್ಯದ ಈಡಿಗ ಸಮಾಜದ ಹಾಗೂ ಹಿಂದುಳಿದ ವರ್ಗದ ಭಕ್ತಿ-ಶ್ರದ್ಧಾ ಕೇಂದ್ರವಾದ ಸಿಗಂಧೂರು ಚೌಡೇಶ್ವರಿ ದೇವಸ್ಥಾನದ ವಿರುದ್ಧ ಹೂಡಿದ ಮೊಕ್ಕದ್ದಮೆಗಳನ್ನು ಕೂಡಲೇ ಹಿಂತೆಗೆದುಕೊಂಡು ದೇವಸ್ಥಾನಕ್ಕೆ ಸೂಕ್ತ ಭದ್ರತೆ ನೀಡಿ ಹಾಗೂ ಕ್ಷೇತ್ರಕ್ಕೆ ಅಗತ್ಯ ಭೂಮಿ ಮಂಜೂರು ಮಾಡಬೇಕು, ಮದ್ಯ ಮಾರಾಟದಲ್ಲಿ ಸಮಾಜದ ಈಡಿಗ ಸೇರಿದಂತೆ 26 ಪಂಗಡಗಳಿಗೆ ಶೇ 50%ರಷ್ಟು ಮೀಸಲಾತಿ ನೀಡಬೇಕು, ಕೋಟಿ ಚೆನ್ನಯ್ಯರ ಜನ್ಮಸ್ಥಳ ಮತ್ತು ಐಕ್ಯಸ್ಥಳ ಅಭಿವೃದ್ಧಿಗಾಗಿ ಕೋಟಿಚೆನ್ನಯ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರತಿ ಬಜೆಟ್ ನಲ್ಲಿ ಕನಿಷ್ಠ 100 ಕೋಟಿ ರೂಪಾಯಿ ಮಂಜೂರು ಮಾಡಬೇಕು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯದಲ್ಲಿ ನಾರಾಯಣ ಗುರುಗಳ ಅಧ್ಯಯನ ಪೀಠ ಸ್ಥಾಪಿಸುವುದು ಮತ್ತು ರಾಜ್ಯದ ಒಂದು ವಿಶ್ವವಿದ್ಯಾಲಯಕ್ಕೆ ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರು ಘೋಷಣೆ ಮಾಡಬೇಕು.

ಅನುಭವ ಮಂಟಪದಲ್ಲಿ ಈಡಿಗ ಜನಾಂಗದ ಶರಣರಾದ ಹೆಂಡದ ಮಾರಯ್ಯನವರ ಜಯಂತಿ ಆಚರಣೆಯನ್ನು ಸರಕಾರ ಘೋಷಣೆ ಮಾಡಬೇಕು ಶಿವಮೊಗ್ಗ ಜಿಲ್ಲೆಯ ಮುಳುಗಡೆ ಸಂತ್ರಸ್ಥರಿಗೆ ಸೂಕ್ತ ಪರಿಹಾರವಾಗಿ ಮನೆ ಹಾಗೂ ಜಮೀನು ನೀಡಬೇಕು, ರಾಜ್ಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆಯ ಸಂದರ್ಭದಲ್ಲಿ ಸಮುದಾಯದ ಸಾಧಕರಿಗೆ "ಬ್ರಹ್ಮಶ್ರೀ ನಾರಾಯಣ ಗುರು" ರಾಜ್ಯ ಮಟ್ಟದ ಪ್ರಶಸ್ತಿಯನ್ನು ಐದು ಲಕ್ಷ ನಗದು ಪುರಸ್ಕಾರದೊಂದಿಗೆ ನೀಡಬೇಕು, ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ಸಮಾಜ ಬಾಂಧವರು ಅರಣ್ಯ ಪ್ರದೇಶದಲ್ಲಿ ಉಳುಮೆ ಮಾಡಿಕೊಂಡು ಮನೆ ಕಟ್ಟಿಕೊಂಡವರಿಗೆ

ಜಮೀನು ಸಕ್ರಮಗೊಳಿಸಬೇಕು, ಶಿವಮೊಗ್ಗ ಜಿಲ್ಲೆಯ ಹೊಸನಗರ ಕ್ಷೇತ್ರವನ್ನು ಮರಳಿ ವಿಧಾನಸಭೆ ಕ್ಷೇತ್ರವಾಗಿ ಮಾಡುವುದಕ್ಕೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು, ಆಶ್ರಯ ಮತ್ತು ವಸತಿ ಯೋಜನೆಯಲ್ಲಿ ಸಮಾಜಕ್ಕೆ ಪ್ರತ್ಯೇಕವಾಗಿ 25 ಸಾವಿರ ಮನೆ ಮಂಜೂರು ಮಾಡಬೇಕು, ರಾಜ್ಯದ ಎಲ್ಲಾ ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿಯೂ ಬ್ರಹ್ಮಶ್ರೀ ನಾರಾಯಾಣ ಗುರುಭವನ ನಿರ್ಮಿಸುವುದಕ್ಕೆ ಭೂಮಿ ಮಂಜೂರು ಮಾಡಬೇಕು, ಮಂಗಳೂರು ವಿಮಾನ ನಿಲ್ದಾಣಕ್ಕೆ " ಕೋಟಿ ಚೆನ್ನಯ್ಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ " ಎಂದು ಘೋಷಣೆ ಮಾಡಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು, ಸಮುದಾಯದ

ಟ್ರಸ್ಟೊಂದಕ್ಕೆ ಮೆಡಿಕಲ್ ಕಾಲೇಜು ಮಂಜೂರಾತಿ ಮಾಡುವುದು, ಶಿವಮೊಗ್ಗ, ಮಂಗಳೂರು, ಕಾರವಾರ, ಉಡುಪಿ ಪ್ರತಿ ಜಿಲ್ಲೆಯಲ್ಲಿ 5 ಎಕರೆ ಜಮೀನು ಮಂಜೂರು ಮಾಡಿ ಐ.ಎ.ಎಸ್, ಐ.ಪಿ.ಎಸ್ ಹಾಗೂ ಕೆ.ಎ.ಎಸ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಮುಂಬರುವ ಸಚಿವ ಸಂಪುಟ ಪುನರಚನೆಯಾದಲ್ಲಿ ನಮ್ಮ ಸಮಾಜದ ಇನ್ನೋರ್ವ ಶಾಸಕರಿಗೆ ಮಂತ್ರಿ ಮಾಡಬೇಕು. ಈ ಮೇಲಿನ ಬೇಡಿಕೆಗಳಲ್ಲಿ ಕನಿಷ್ಟ 5 ಪ್ರಮುಖ ಬೇಡಿಕೆಗಳನ್ನಾದರೂ ಈಡೇರಿಸುವ ವರೆಗೆ ಉಪವಾಸ ಸತ್ಯಾಗ್ರಹದಿಂದ ಹಿಂದೆ ಸರಿಯುವುದಿಲ್ಲವೆಂದು ಸ್ವಾಮಿಜಿಗಳು ಎಚ್ಚರಿಸಿದರು.

ಸಮಾಜದ ಮುಖಂಡರಾದ ಸುಭಾಷ ಚೌಧರಿ, ಸಂಗಯ್ಯ ಸುಲ್ತಾನಪುರ, ದಿಲೀಪ ತೇಲಂಗ್, ಉಮೇಶ ತೇಲಂಗ್, ಅನಿಲಗೋಡ್ ಸುಂದಾಳ, ಸುರೇಶ, ಸತೀಶ ಎಣಕುರ, ರಾಜಕುಮಾರ, ಆಕಾಶ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ರಾಜ್ಯ ಮಟ್ಟದ ಕಲಾಶ್ರೀ ಶಿಬಿರದಲ್ಲಿ ಚಿತ್ರಕಲೆ ಸ್ಪರ್ಧೆಯಲ್ಲಿ ವಿಶೇಷ ಪ್ರಶಸ್ತಿ :ಅಮುಲ್ ಮಂಜುನಾಥ



ಕಲಬುರಗಿ,ನ.22, (ಕರ್ನಾಟಕ ವಾರ್ತೆ)–ಬೆಂಗಳೂರಿನಲ್ಲಿನವೆಂಬರ್ 17 ರಿಂದ 19 ರವರೆಗೆ ಜರುಗಿದ ರಾಜ್ಯ ಮಟ್ಟದ ಕಲಾಶ್ರೀ ಶಿಬಿರದಲ್ಲಿ ಕಲಬುರಗಿ ಜಿಲ್ಲೆಯ ಪಟ್ಟಣ ಗ್ರಾಮದ ಡಾ. ಬಿ.ಆರ್ ಅಂಬೇಡ್ಕರ್ ವಸತಿ ಶಾಲೆಯ 10ನೇ ತರಗತಿಯ ವಿದ್ಯಾರ್ಥಿಯಾದ ಅಮುಲ್ ತಂದೆ ಮಂಜುನಾಥ ಭಾವಿಮನೆ ಅವರು ಚಿತ್ರಕಲೆ ಸ್ಪರ್ಧೆಯಲ್ಲಿ ವಿಶೇಷ ಪ್ರಶಸ್ತಿಯನ್ನು ಪಡೆದಿದ್ದಕ್ಕಾಗಿ ಬೆಂಗಳೂರಿನ ರಾಜ್ಯ ಬಾಲ ಭವನ ಸೊಸೈಟಿಯ ಅಧ್ಯಕ್ಷರು,ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಅವರನ್ನು ವಿಶೇಷ ಪ್ರಶಸ್ತಿ ನೀಡಿ ಗೌರವಿಸಿದರು.

ಅದೇ ರೀತಿ ಕಲಬುರಗಿ ಜಿಲ್ಲೆಯಿಂದ ಆಯ್ಕೆಯಾಗಿ ರಾಜ್ಯ ಮಟ್ಟದಲ್ಲಿ ಚಿತ್ರಕಲೆ ಸ್ಪರ್ಧೆಯಲ್ಲಿ ಸ್ಪರ್ಧಿಸಿ ವಿಶೇಷ ಪ್ರಶಸ್ತಿ ಹಾಗೂ ಪ್ರಮಾಣ ಪತ್ರವನ್ನು ಪಡೆದಿದಕ್ಕಾಗಿ ಅಮುಲ್ ತಂದೆ ಮಂಜುನಾಥ ಭಾವಿಮನೆ ಅವರಿಗೆ 2025ರ ನವೆಂಬರ್ 20 ರಂದು ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ರಾಜಕುಮಾರ ರಾಠೋಡ ಹಾಗೂ ಜಿಲ್ಲಾ ಬಾಲಭವನ ಕಚೇರಿ ಸಹಾಯಕರಾದ ಮಾನು ಎಂ ಹೂಗಾರ ಅವರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಜರುಗಿದ ರಾಜ್ಯಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ ಕಲಬುರಗಿ ಜಿಲ್ಲಾ ಮಟ್ಟದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಆಯ್ಕೆಯಾದ ಆರು ಜನ ಮಕ್ಕಳನ್ನು ಕಲಬುರಗಿಯಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಲಾಗಿತ್ತು.

# ರಾಷ್ಟ್ರೀಯ ಐಕ್ಯತಾ ಸಪ್ತಾಹ ಅಂಗವಾಗಿ ಕೇಂದ್ರ ಕಾರಾಗೃಹದಲ್ಲಿ ಪ್ರಮಾಣ ವಚನ ಸ್ವೀಕಾರ



ಕಲಬುರಗಿ: ರಾಷ್ಟ್ರೀಯ ಐಕ್ಯತಾ

ಸಪ್ತಾಹ ಪ್ರಯುಕ್ತ ಇತ್ತೀಚೆಗೆ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಕಾರಾಗೃಹದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಲಬುರಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಾದ ಡಾ|| ಅನಿತಾ ಆರ್. ಅವರು ರಾಷ್ಟ್ರೀಯ ಐಕ್ಯತಾ ಸಪ್ತಾಹ ಪ್ರಮಾಣ ವಚನವನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧೀಕ್ಷಕರಾದ ಎಂ.ಹೆಚ್. ಆಶೇಖಾನ್, ಕಛೇರಿಯ ಸಹಾಯಕ ಅಧೀಕ್ಷಕರುಗಳಾದ ಬಿ. ಸುರೇಶ್, ಶ್ರೀ ಚನ್ನಪ್ಪ, ಸಂಸ್ಥೆಯ ಕಛೇರಿ ಅಧೀಕ್ಷಕರಾದ ಗುರುಶೇಶ್ವರ ಆರ್. ಶಾಸ್ತ್ರಿ, ಹಾಗೂ ಜೈಲರ್‌ಗಳಾದ ಸುನಂದ ವಿ. ಪುಂಡಲಿಕ, ಟಿ.ಕೆ. ಶಾಮ ಬಿದರಿ, ಸಂಸ್ಥೆಯ ಶಿಕ್ಷಕರಾದ ನಾಗರಾಜ ಮುಲಗೆ ಹಾಗೂ ಸಂಸ್ಥೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಚಿವ ಪ್ರಿಯಾಂಕ್ ಖರ್ಗೆ ಅವರ ಜನ್ಮದಿನದ ಪ್ರಯುಕ್ತ ಪಾಲಿಕೆ ಸದಸ್ಯರಾದ ಸಚಿನ್ ಶಿರವಾಳ ಅವರು ವೈಯಕ್ತಿಕವಾಗಿ ಗೌರವ ಉಡುಗೊರೆ



ಕಲಬುರಗಿ: ನಗರದ ಕೇಂದ್ರ ಬಸ ನಿಲ್ದಾಣದ ಎದುರುಗಡೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಜನ್ಮದಿನದ ಪ್ರಯುಕ್ತ ಮಹಾನಗರ ಪಾಲಿಕೆ ಸದಸ್ಯರಾದ ಸಚಿನ್ ಶಿರವಾಳ ಅವರು ವೈಯಕ್ತಿಕವಾಗಿ ಗೌರವ ಸಾಧನವನ್ನು, ಸಣ್ಣ ಉದ್ಯಮ ಜೀವನ ಪವನ ಎನ್ನುವ ಹೆಸರಿನೊಂದಿಗೆ ನವ ಉದ್ಯಮ ಸ್ಥಾಪಿಸಿ ಉಡುಗೊರೆಯಾಗಿ 8 ಜನರಿಗೆ ನೀಡಿದರು. 3. ತರಕಾರಿ ಬಂಡಿ ಹಾಗೂ ತರಕಾರಿ 1. ಜ್ಯೂಸು ಬಂಡಿ ಜೊತೆಗೆ ಹಣ್ಣುಗಳು ಹಾಗು ಮಿಕ್ಸರ್, 2 ಟೀ ಸ್ಟಾಲ್ ಗ್ಯಾಸ್, ಸಿಲಿಂಡರ್ ಜೊತೆಗೆ ಸಾಮಾಗ್ರಿಗಳು, 1 ಶೂ ಪಾಲಿಶ್ ಕಿಟ್ ಹಾಗು ವ್ಯಾಪಾರ ಸೆಟಪ್ ಉಡುಗೊರೆಯಾಗಿ ನೀಡಿದರು.

1) ಸಾವಿತ್ರಿ ಹಿರೇಮಠ್ ( ತರಕಾರಿ ), 2) ಸಂಗಮ್ಮ ಸಂತಪುರ (ತರಕಾರಿ), 3) ಮಕಬೂಲ್ ಅಹ್ಮದ್ (ತರಕಾರಿ), 4) ಪ್ರದೀಪ್ ಜಲಕಿ (ಟಿ ಸ್ಟಾಲ್), 5) ಮೊಹಮದ್ ಅಲಿಮ್ (ಟಿ ಸ್ಟಾಲ್), 6)

ರಾಜೇಶ್ ಕಂಬಳೆ (ಶೂ ಸ್ಟಾಲ್), 7) ಅಜರಾ ಫಾತಿಮಾ ಗೌರವ ಸಾಧನ ಉಡುಗೊರೆ ಪಡೆದುಕೊಂಡರು. ಈ ಕಾರ್ಯಕ್ರಮಕ್ಕೆ ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಂಪ್ರಭು ಪಾಟೀಲ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಅಧ್ಯಕ್ಷರಾದ ಅರುಣಕುಮಾರ ಎಂ ವೈ ಪಾಟೀಲ್, ಜೆಸ್ಕಾಂ ಅಧ್ಯಕ್ಷರಾದ ಪ್ರವೀಣ್ ಪಾಟೀಲ್ ಹರವಾಳ್, ಕುಡಾ ಅಧ್ಯಕ್ಷರಾದ ಮಜಾರ್ ಅಲಂ ಖಾನ್, ಎಚ್ ಕೆ ಈ ಕೌನ್ಸಿಲಾರ್ ಡಾ. ಕಿರಣ ದೇಶಮುಖ್, ಕಾಂಗ್ರೆಸ್ ಮುಖಂಡರಾದ ರಾಜೀವ್ ಜಾನೆ, ಈರಣ್ಣ ಝಳಕಿ, ಶಿವಾನಂದ ಹೊನಗುಂಟಿ, ಅಮರ್ ಶಿರವಳ, ಅಶೋಕ್ ವೀರನಾಯಕ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಚಿತ್ರಕಲೆ ಸ್ಪರ್ಧೆಗಳ ಆಯೋಜನೆ: ಹೆಸರು ನೋಂದಣಿಗೆ ಸೂಚನೆ

ಕಲಬುರಗಿ,ನ.22,(ಕರ್ನಾಟಕವಾರ್ತೆ)– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಹಾಗೂ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು "ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ" (Science and Technology for Sustainable Development) ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಚಿತ್ರಕಲೆ ಸ್ಪರ್ಧೆಗಳನ್ನು ಇದೇ ನವೆಂಬರ್ 26 ರಂದು ಅಕಾಡೆಮಿಯ ಕಚೇರಿಯಲ್ಲಿ ಏರ್ಪಡಿಸಲಾಗಿದೆ ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಈ ಸ್ಪರ್ಧೆಗಳಲ್ಲಿ ರಾಜ್ಯದ ಎಲ್ಲಾ ಪ್ರೌಢಶಾಲಾ ಹಾಗೂ ವಿಜ್ಞಾನ ಪದವಿ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದ್ದು, ಆಸಕ್ತ ವಿದ್ಯಾರ್ಥಿಗಳು 2025ರ ನವೆಂಬರ್ 25 ರೊಳಗಾಗಿ ಗೂಗಲ್ ಫಾರ್ಮ್ (Google Form: https://forms.gle/js3x5LAf94ihh7956) ಮೂಲಕ ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮದ ಸಂಯೋಜಕರಾದ ವೈಜ್ಞಾನಿಕಾಧಿಕಾರಿಗಳಾದ ಶ್ರೀನಿವಾಸು ವಿ.ಕೆ

.(ಮೊ: 9620767819) ಹಾಗೂ ಉಮೇಶ ಘಾಟಗೆ (ಮೊ:9743084194) ಇವರನ್ನು ಸಂಪರ್ಕಿಸಲು ಹಾಗೂ https://kstacademy.in ವೆಬ್‌ಸೈಟ್‌ಗೆ ಸಂಪರ್ಕಿಸಲು ಕೋರಲಾಗಿದೆ.

# ಪ್ರಿಯಾಂಕ್ ಖರ್ಗೆ ಅವರ ಜನ್ಮದಿನದ ಅಂಗವಾಗಿ ಉಚಿತ ಬೇಸಿಕ್ ಕಂಪ್ಯೂಟರ್ ತರಬೇತಿ ಚಾಲನೆ



ಕಲಬುರಗಿ : ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಐಟಿ ಮತ್ತು ಬಿಟಿ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆ ಅವರ ಜನ್ಮದಿನದ ಅಂಗವಾಗಿ ನಗರದ ರೆಡ್ಡಿಸ್ ಇನ್ಸಟ್ಯೂಟ್ ಕಂಪ್ಯೂಟರ್ ತರಬೇತಿ ಕೇಂದ್ರ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘ ಜಂಟಿಯಾಗಿ ಯುವಕ/ಯುವತಿಯರಿಗೆ ಉಚಿತ ಬೇಸಿಕ್ ಕಂಪ್ಯೂಟರ್ ತರಬೇತಿಯನ್ನು ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಂಪ್ರಭು ಪಾಟೀಲ, ಎಂಎಲ್‌ಸಿ ಮತ್ತು ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಜಗದೇವ ಗುತ್ತೇದಾರ ಹಾಗೂ ಸಂಸ್ಥೆಯ ಅಧ್ಯಕ್ಷ ಶಾಂತರೆಡ್ಡಿ ಪೇಠಶಿರೂರ ಅವರು ಚಾಲನೆ ನೀಡಿದರು. ಈ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಅಲ್ಲಂ ಪ್ರಭು ಪಾಟೀಲ ಅವರು

ಮಾತನಾಡುತಾ ಒಬ್ಬ ನಾಯಕ ತನ್ನ ಬದುಕಿನಾದ್ಯಂತ ಹೋರಾಟ ಮಾಡಿ, ಹಲವರು ಬಂದಂತೆ ರಾಜಕೀಯಕ್ಕೆ ಬರಲಿಲ್ಲ. ಅವರು ವಿದ್ಯಾರ್ಥಿ ಕಾಂಗ್ರೆಸ್, ಯುವ ಕಾಂಗ್ರೇಸ್

ಹೋರಾಟ ಮಾಡಿ ರಾಜಕೀಯಕ್ಕೆ ಬಂದವರು. ನಮ್ಮ ನಾಯಕರಾದ ಪ್ರಿಯಾಂಕ್ ಖರ್ಗೆ ಕ್ಷೇತ್ರದ ಅಭಿವೃದ್ಧಿ ಶ್ಲಾಘನೆ ಮಾಡಿದರು. ಮತ್ತು

ಯುವಕ/ಯುವತಿಯರಿಗೆ ಉಚಿತ ಬೇಸಿಕ್ ಕಂಪ್ಯೂಟರ್ ತರಬೇತಿಯನ್ನು ಆಯೋಜಿಸಿದ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘ &ಚಿಟರಿ; ರೆಡ್ಡಿಸ್ ಇನ್ಸಟ್ಯೂಟ್

ಕಂಪ್ಯೂಟರ್ ತರಬೇತಿ ಕೇಂದ್ರ ಮುಖ್ಯಸರಿಗೆ &ಚಿಟರಿ; ಸದಸ್ಯರಿಗೆ ಧನ್ಯವಾಗಳು ತಿಳಿಸಿದರು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತೆ–ೇದಾರ ಅವರು ಮಾತನಾಡುತ್ತಾ ಪ್ರಿಯಾಂಕ್ ಖರ್ಗೆ ಅವರು ನಮ್ಮ ಜಿಲ್ಲೆಗೆ ಉಸ್ತುವಾರಿ ಸಚಿವರಾದ ಮೇಲೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಳ್ಳುತ್ತ ಬೆಳೆದು ಬಂದ ದಾರಿಯ ಬಗ್ಗೆ ಮಾತನಾಡಿದ್ದರು ಮತ್ತು ರೆಡ್ಡಿಸ್ ಇನ್ಸಟ್ಯೂಟ್ ಶಾಂತರೆಡ್ಡಿ ಪೇಟಶಿರೂರ ಅವರು ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘ ಅವರ ಜನ್ಮದಿನವನ್ನು ಹಾಗೂ ಪ್ರಿಯಾಂಕ್ ಖರ್ಗೆ ಅವರ ಜನ್ಮದಿನವನ್ನು ಕಳೆದ 15 ವರ್ಷಗಳಿಂದ ಕುಶಾಗ್ರಮತಿ ಖರ್ಗೆ ಪ್ರಶಸ್ತಿ ಹಾಗೂ ಆದರಲ್ಲೂ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್ ಪುಸ್ತಕ ಕೀಟ್ ಹಾಗೂ ಬೇಸಿಕ್ ಕಂಪ್ಯೂಟರ್ ತರಬೇತಿ ನೀಡುವ ಮೂಲಕ ಜನ್ಮದಿನಾರಣೆ ಆಚರಿಸುತ್ತಿರುವುದು ಅರ್ಥಪೂರ್ಣವಾಗಿ ಎಂದು ಹೇಳಿ ಪ್ರಿಯಾಂಕ್

ಖರ್ಗೆ ಅವರಿಗೆ ಈ ಸಂದರ್ಭದಲ್ಲಿ ಜನ್ಮದಿನದ ಶುಭಾಷಯಗಳನ್ನು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷ ವಹಿಸಿದ ಶಾಂತರೆಡ್ಡಿ ಪೇಟಶಿರೂರ ಮಲ್ಲಿಕಾರ್ಜುನ

ಖರ್ಗೆ ಅಭಿಮಾನಿಗಳ ಸಂಘ ಮತ್ತು ಸಂಸ್ಥೆಯ ಮುಖ್ಯಸ್ಥ ಇವರು ಪ್ರಿಯಾಂಕ ಖರ್ಗೆ ಅವರು ನಮ್ಮಂತಹ ಸಾವಿರಾರು ಯುವಕರಿಗೆ ದಾರಿದೀಪವಾಗಿದ್ದಾರೆ ಮತ್ತು ದೇವರು ಮುಂದಿನ ದಿನಗಳಲ್ಲಿ ಹೆಚ್ಚಿನ ಆರೋಗ್ಯ ಮತ್ತು ರಾಜಕೀಯ ಬೆಳೆಯಲೆಂದು ಶುಭಕೋರಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಪತ್ರರ್ಕತರಾದ ರಾಜು ದೇಶಮುಖ,

ಉದ್ದಿಮೆದಾರಾದ ಲನಾರಾಯಣ ಮನೋಕರ, ಕಾಂಗ್ರೆಸ್ ಯುವ ಮುಖಂಡರಾದ ಸಿದ್ರಾಮ ಗೋದಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ದಯಾನಂದ ಮನೋಕರ, ಮಂಜುನಾಥ ಅಣಕಲ್, ಸಿದ್ರಾಮರೆಡ್ಡಿ, ಪ್ರಶಾಂತ ರೆಡ್ಡಿ, ಲಿಂಗರಾಜ ಭಾವಿಕಟ್ಟಿ, ರಾಧಾಕೃಷ್ಣ, ಜಯವರ್ಧನ, ಜಗದೀಶ ಪಾಟೀಲ್, ಆನಂದ ಹೋಳಕುಂದಿ, ನಾಗಾರಾಜ, ಕಲ್ಯಾಣರಾವ, ಆಕಾಶ, ಚಂದ್ರಕಾಂತ ಮತ್ತು ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವೇದಿಕೆಯ ಮೇಲಿದ್ದ ಗಣ್ಯರಿಗೆ ಸಂತೋಷಜವಳಿ ವಂದನಾರ್ಪಣೆ ಮಾಡಿ ಕಾರ್ಯಕ್ರಮ ಮುಕ್ತಯಗೊಳಿಸಿದ್ದರು.

# ಹಾಲು ಉತ್ಪಾದಕರ ಕಟ್ಟಡ ನಿರ್ಮಾಣಕ್ಕೆ 1 ಲಕ್ಷ ಅನುದಾನ

**ಮಲ್ಲಮ್ಮ ನುಡಿ ವಾರ್ತೆ**

**ಹುಮನಾಬಾದ್:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್‌ನಿಂದ ತಾಲ್ಲೂಕಿನ ನಂದಗಾಂವ್ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ ಕಟ್ಟಡ ಮೇಲ್ಛಾವಣಿ ನಿರ್ಮಾಣಕ್ಕೆ 1 ಲಕ್ಷ ಅನುದಾನ ನೀಡಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಮುರಳಿಧರ, ಎಮ್‌ಇಎಸ್ ಯೋಜನಾಧಿಕಾರಿ ಶೇಖರ್ ನಾಯ್ಕ, ತಾಲ್ಲೂಕು ಯೋಜನಾಧಿಕಾರಿ ವೀರೇಶ ಎನ್ ಅವರು ನಂದಗಾಂವ್ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಚಕ್ ವಿತರಣೆ ಮಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್‌ನ ಜಿಲ್ಲಾ ನಿರ್ದೇಶಕ ಮುರಳಿಧರ ಅವರು ಮಾತನಾಡಿದ, ಪರಮ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಮಾತೃಶ್ರೀ



ಡಾ. ಹೇಮಾವತಿ ಹೆಗ್ಗಡೆ ಅಮ್ಮನವರ ಮಾರ್ಗದರ್ಶನದಲ್ಲಿ ವಿವಿಧ ಸಮುದಾಯ ಕಾರ್ಯಗಳಲ್ಲಿ ಕೈ ಜೊಡಿಸುವ ಮೂಲಕ ಸಮಾಜದ ಪ್ರಗತಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನೆಗಳು ಪೂರಕವಾಗಿವೇ ಎಂದರು.

ಈ ಸಂದರ್ಭದಲ್ಲಿ ನಂದಗಾಂವ್ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷೆ ಗಂಗಮ್ಮ ವಿಠಲರಾವ್ ಕಲ್ಯಾಣಿ, ಉಪಾಧ್ಯಕ್ಷ ಕೌಸರಬೇಗಂ ರಹುಫಮಿಯ್ಯಾ, ನಿರ್ದೇಶಕರಾದ ಕಮಲಾಬಾಯಿ ಹೊನ್ನಪ್ಪಾ ಕಲ್ಯಾಣಿ, ರೇಣುಕಾ ಶಿವಾನಂದ ಎಕ್ಕೆಳ್ಳಿ, ಗೌರಮ್ಮ ಶೇರಿಕರ್, ತಜೀಮಬೇಗಂ ಕಲಮುಡ, ತುಕ್ಕಮ್ಮ ರಂಜೇರಿ, ಫರ್ಜಾನಾಬೇಗಂ ಮಂಗಲಗಿ, ಶಿವಕಾಂತಾ ಎಕ್ಕೆಳ್ಳಿ, ಲಕ್ಷ್ಮೀಬಾಯಿ ಡಾಕುಳಗಿ, ರಜೀಯಾಬೇಗಂ ಸುತಾರ, ವಿದ್ಯಾವತಿ ಕುಂದನ, ಕಾರ್ಯದರ್ಶಿ ತಿಪ್ಪಣ್ಣ ಜಮಾದಾರ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಬೇನಚಿಂಚೋಳಿ ವಲಯ ಅಧಿಕಾರಿ ಅಶೋಕ, ಕೃಷಿ ಮೇಲ್ವಿಚಾರಕ ಶಿವಾನಂದ, ಸಹಾಯಕ ವ್ಯವಸ್ಥಾಪಕ ಶಿವಕಾಂತ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹಾಂತೇಶ ಕುಂದನ, ಇದ್ದರು.

# ರಾಷ್ಟ್ರೀಯ ಲೋಕ ಅದಾಲತ್

**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು: ರಾಯಚೂರು ಜಿಲ್ಲಾ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ನ್ಯಾಯಾಲಯಗಳಲ್ಲಿ ಡಿಸೆಂಬರ್ 13ರಂದು ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ.

ಲೋಕ ಅದಾಲತ್‌ನ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ಮತ್ತು ಕ್ರಿಮಿನಲ್ (ರಾಜಿಯಾಗುವಂತಹ) ಮೊಕದಮ್ಮೆಗಳ ಜೊತೆಗೆ ಮೋಟಾರ ವಾಹನ ಪ್ರಕರಣಗಳು ಮತ್ತು ಎಲ್ಲಾ ಬಗೆಯ ಪ್ರಕರಣಗಳನ್ನು (ಕೇಸುಗಳನ್ನು) ಲೋಕ ಅದಾಲತ್ ಮುಖಾಂತರ ಇತ್ಯರ್ಥಗೊಳಿಸಲಾಗುವುದು. ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು (ಕೇಸುಗಳನ್ನು) ರಾಷ್ಟ್ರೀಯ ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳಲು ವಕೀಲರು ಹಾಗೂ ಕಕ್ಷಿದಾರರಿಗೆ ಸದಾವಕಾಶ ಒದಗಿಸಲಾಗಿದೆ. ಆದ್ದರಿಂದ ಎಲ್ಲಾ ವಕೀಲರು, ಕಕ್ಷಿದಾರರು, ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ವ್ಯಾಜ್ಯಪೂರ್ವ ಎಲ್ಲಾ ಬಗೆಯ ಕೇಸುಗಳನ್ನು ಲೋಕ ಅದಾಲತನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಆಗಿರುವ ಗೌರವಾನ್ವಿತ ಹಿರಿಯ ಶ್ರೇಣಿಯ ದಾವಾಣಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಹಪುರಷರ ಸಾಮೊಹಿಕ ಜಯಂತೋತ್ಸವ ಮಾಡಲು ಪದಾಧಿಕಾರಿಗಳ ಆಯ್ಕೆ



**ಮಲ್ಲಮ್ಮ ನುಡಿ ವಾರ್ತೆ**

**ಕಲಬುರಗಿ:** ಚಿಂಚೋಳಿಯಲ್ಲಿ ಶೋಷಿತ ಸಂಘಟನೆಗಳ ಒಕ್ಕೂಟ ಮತ್ತು ಭಾರತ ಜನ–ಸಂಗಮ ವತಿಯಿಂದ ಸುಲೇಪೇಟ ಗ್ರಾಮದಲ್ಲಿ ಸಂವಿಧಾನ ಸಮರ್ಪಣೆ ದಿನಾಚರಣೆ

ಅಂಗವಾಗಿ ಮಾಹತ್ಮರ ಸಾಮೂಹಿಕ ಜಯಂತೋತ್ಸವ ಬೃಹತ್ ಸಮಾವೇಶ ಮಾಡಲು ಸಮಿತಿಯ ಗೌರವಾಧ್ಯಕ್ಷರಾಗಿ

ಶಿವರಾಂ ರಾಠೋಡ, ಅಧ್ಯಕ್ಷರಾಗಿ ರುದ್ರಶೇಟ್ಟಿ ಪಡಶೆಟ್ಟಿ, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಮಾಳಗಿ, ರಜಾಕ್ ಪಟೇಲ್, ಸಂಪತ್ ಬೆಳ್ಳಿಚುಕ್ಕಿ, ಜಗದೇವಯ್ಯಾಸ್ವಾಮಿ, ಮಲ್ಲಿಕಾರ್ಜುನ

ಪಾಳಾದಿ, ರೇವಣಸಿದ್ದಪ್ಪ ಸುಬೇದಾರ್, ಗುರುನಾಥರೆಡ್ಡಿ,

ನಾಮದೇವ ಪೋಲೀಸ್ ಪಾಟೀಲ್, ನಾಗೇಶ ಅವರಾದಿ,

ಮಲ್ಲಿಕಾರ್ಜುನ ಜಮ್ಮುನ್, ಪ್ರಚಾರ ಸಮಿತಿಗೆ ಹಾಫೀಜ್,

ನಾಗೇಶ ಅವರಾದಿ, ಚೇತನ ಅಣವಾರ, ಮಾರುತಿ ಗಂಜಗಿರಿ,

ಮೋಹನ ಐನಾಪೂರ, ಹರೀಶ್ ದೇಗಲ್ಮಡಿ, ಜೈ ಭೀಮ್

ಹೊಳ್ಕರ, ಮುಂತಾದ ಸಮಿತಿಗಳನ್ನು ಆಯ್ಕೆ ಮಾಡಿ ಸಮಾವೇಶ ಯಶಸ್ವಿ ಮಾಡಲು ಜವಾಬ್ದಾರಿ ವಹಿಸಿಕೊಡಲಾಯಿತು.



ಕಲಬುರಗಿ: ಗುಲ್ಬರ್ಗಾ ಜಿಲ್ಲಾ ಸೆಂಟ್ರಲ್ ಕೋ–ಆಪರೇಟಿವ್ ಹೋಲ್ಸೇಲ್ ಸ್ಟೋರ್ಸ್ ಲಿಮಿಟೆಡ್ (ಜನತಾ ಬಜಾರ್) ಚುನಾವಣೆಗೆ ಸಯ್ಯದ್ ಅಲಿ ಅಹಮದ್ ಜೈದಿ ಅವರು ತಮ್ಮ ನಾಮಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರೊಂದಿಗೆ ಸುರ್ಣಾ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ರಾಮ್ ಪವಾರ್, ಜಿಡಿಎ ಚೇರ್ಮನ್ ಮಝ್ಹರ್ ಆಲಂ ಖಾನ್, ಜನತಾ ಬಜಾರ್ ಅಧ್ಯಕ್ಷ ದಟ್ಟು ಫಡ್ನಿಸ್, ರಾಜೀವ್ ಜಾನಿ, ಮಹಬೂಬ್ ಸೇಠ ಮಹಾರಾಜ್, ಮೊಪನ್ನ ಅಣ್ಣಬಸ್ತಿ, ಇರ್ಫಾನ್ ಗೋಲಾಗುಂಡಿ,

ಅನ್ವೀರಪ್ಪ ಕಲ್ಗಿ, ಜಮೀಲ ಸದರ್ಗಿ, ಯಾಸೀನ್ ಖಾನ್, ಅಬ್ರಾರ್ ಜೈದಿ, ಖುಸ್ರೋ ಜಾಗೀರ್‌ದಾರ್, ಶಿವಾಜಿ, ಅಲಮ್ದಾರ್ ಜೈದಿ ಸೇರಿದಂತೆ ಅನೇಕ ಮತದಾರರು ಹಾಜರಿದ್ದರು.



ಕಲಬುರಗಿ: ನಗರದ ಕೇಂದ್ರ ಬಸ ನಿಲ್ದಾಣದ ಎದುರುಗಡೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಅವರ 47ನೇ ಜನ್ಮದಿನ ನಿಮಿತ್ತ ಎನ್‌ಎಸ್‌ಯುಐ ಕಾರ್ಯದರ್ಶಿ ಸಚಿನ್ ಬಂದೆ ಅವರ ನೇತೃತ್ವದಲ್ಲಿ ಕೇಕ್ ಕತ್ತರಿಸಿ ಅನ್ನದಾಸೋಹ ಮಾಡಲಾಯಿತು. ಕಾಂಗ್ರೆಸ್ ಮುಖಂಡರಾದ ಶರಣು ಅಲ್ಲಮಪ್ರಭು ಪಾಟೀಲ, ಸಂಜು ಹೋಳಕರ್, ಸಚಿನ ಶಿರವಾಳ, ಅಮರ ಶಿರವಾಳ, ನಿಕಿಲಾ ಕಮಲಾಪುರ, ಗೌತಮ್ ಚಿಂಚನಸೂರ್, ಮನೋಜ್ ಉಡಗಿ, ಹರೀಶ್ ವಾಗ್ಗೆ, ರೋಹಿತ್‌ಹೊಸಮನಿ ಸೇರಿದಂತೆ ಇತರರು ಇದ್ದರು.

# ಸಮಾಜದ ಒಳಿತಿಗಾಗಿ ಕಾರ್ಯ ಮಾಡಬೇಕು: ಡಾ. ಹುಲಸೂರೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ಪಟ್ಟಣದ ಭವಾನಿ ಮಂದಿರದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಮಡಿವಾಳಯ್ಯ ಸಾಲಿ ಅವರಿಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಮತ್ತು ಗೆಳೆಯರ ಬಳಗ ಹುಮನಾಬಾದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಅಧ್ಯಕ್ಷರಾದ ಡಾ. ನಾಗನಾಥ ಹುಲಸೂರೆ ಮಾತನಾಡಿ ವೀರಶೈವ ಲಿಂಗಾಯತ ನೌಕರರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಸುಮಾರು ವರ್ಷಗಳಿಂದ ಅನೇಕ ಕಾರ್ಯಕ್ರಮ ಸಮಾಜದಲ್ಲಿ ಮಾಡಿಕೊಂಡು ಬರುತ್ತಿದೆ ಎಲ್ಲಾ ಸಂಘ ಸಂಸ್ಥೆಗಳು ಸಮಾಜದ ಒಳಿತಿಗಾಗಿ ಕಾರ್ಯ ಮಾಡಬೇಕು ಯಾವಗಲು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವಂತೆ ಸಂಘಗಳು ತಮ್ಮ ಜವಾಬ್ದಾರಿ ವಹಿಸಿ ಕೆಲಸ ಮಾಡಬೇಕು ಎಂದು ಕರೆ ಕೊಟ್ಟರು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಿದ್ಧಲಿಂಗ ವಿ ನಿರ್ಣಾ ಮಾತನಾಡಿ ಸಾಹಿತ್ಯ ಪರಿಷತ್ತು ವಿವಿಧ ಕ್ಷೇತ್ರದಲ್ಲಿ ನಾಡ ನುಡಿ ಕಲೆ ಸಾಹಿತ್ಯ ಸಂಗಿತ ಹೀಗೇ ಅನೇಕ ವರ್ಗಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಗುರುತಿಸಿ ಅವರಿಗೆ ಗೌರವಿಸುವದು ಹಾಗೂ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿದೆ ಎಂದು ನುಡಿದರು, ಕಾರ್ಯಕ್ರಮದಲ್ಲಿ ಸನ್ಮನಿತರಾದ ಡಾ ಗೊವಿಂದ ಮಾತನಾಡಿ ನನ್ನನು ಗುರುತಿಸಿ ತಾಲ್ಲೂಕು ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದು ತುಂಬಾ ಸಂತೋಷವಾಗಿದೆ ವೀರಶೈವ ಲಿಂಗಾಯತ ನೌಕರರ ಸಂಘದ ಪದಾಧಿಕಾರಿಗಳಿಗು ಕಸಾಪ ಪದಾಧಿಕಾರಿಗಳಿಗು ಹುಮನಾಬಾದ ಗೆಳೆಯರ ಬಳಗದ ಸದಸ್ಯರಿಗೆ ಅನಂತ ಧನ್ಯಾವಾದ ತಿಳಿಸಿದರು, ಕರ್ನಾಟಕ ರಾಜ್ಯೋತ್ಸವ ಪುರಸ್ಕೃತರಾದ ಮಡಿವಾಳಯ್ಯ ಸಾಲಿ ಸಹ ವೇದಿಕೆ ಉದ್ದದಸಿಸಿ ಮಾತನಾಡಿದರು , ಕಾರ್ಯಕ್ರಮದ ವೇದಿಕೆಯಲ್ಲಿ ತಾಲ್ಲೂಕು ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ ವೆಂಕಟೇಶ ಗುಡಾಳ, ಸಮಾಜ ಕಲ್ಯಾಣ ಅಧಿಕಾರಿಗಳಾದ ಲಿಂಗರಾಜ ಅರಸ , ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರಾದ ರವೀಂದ್ರರೆಡ್ಡಿ ಮಾಲಿಪಾಟೀಲ, ಉಪಸ್ಥಿತರಿದ್ದರು, ಪ್ರಾಸ್ತಾವಿಕವಾಗಿ ಕಸಾಪ ಜಿಲ್ಲಾ ಉಪಾಧ್ಯಕ್ಷರಾದ ವೀರಣ್ಣ ಕುಂಬಾರ ಮಾತನಾಡಿದರು , ಕಾರ್ಯಕ್ರಮದಲ್ಲಿ ಶಶಿಧರ ಪಾಟೀಲ, ಭಕ್ತರಾರಾಜ ಚಿತಾಪೂರೆ, ಮಡೆಪ್ಪ ಕುಂಬಾರ, ಮಲ್ಲಿಕಾರ್ಜುನ ಸಂಗಮಕರ, ಭಗವಂತ ಬಿರಾದರ, ಅಮೀತ ಚಿಂಚೋಳಿಕರ, ರಾಮಚಂದ್ರ ಅಲ್ಲೂರ, ಮದನಸಿಂಗ, ವಿಜಯಕುಮಾರ ಚಟ್ಟಿ, ಭಾಗವಹಿಸಿದರು ವಲಯ ಅಧ್ಯಕ್ಷರಾದ ಭಜರಂಗ ಹುಪ್ಪಳೆ ಸ್ವಾಗತಿಸಿದರು, ಶ್ರೀಕಾಂತ ಸೂಗಿ ನಿರೂಪಿಸಿದರು, ಸಾಹಿತಿ ಐ.ಎಸ.ಶಕೀಲ ವಂದಿಸಿದರು. ಅನೇಕರು ಸಾಕ್ಷಿಯಾದರು.

# ಗ್ರಾ.ಪಂ. ನೌಕರರ ಬೇಡಿಕೆ ಈಡೇರಿಸದಿದ್ದಲ್ಲಿ ಅನಿರ್ದಿಷ್ಟ ಚಳುವಳಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳನ್ನು ಡಿ.8 ರಂದು ನಡೆಯುವ ಚಳಿಗಾಲ ಅಧಿವೇಶನದಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರಬೇಕು ಸರಕಾರ ಬೇಡಿಕೆ ಈಡೇರಿಸದಿದ್ದಲ್ಲಿ ಡಿ.21 ರಂದು ಬೆಂಗಳೂರು ಅನಿರ್ದಿಷ್ಟ ಚಳುವಳಿ ನಡೆಸಲಾಗುವುದು ಎಂದು ಗ್ರಾಮ ಪಂಚಾಯತಿ ರಾಜ್ಯಾಧ್ಯಕ್ಷರಾದ ಎಂ. ಡಿ ನಾಡಗೌಡ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳನ್ನು ಚಳಿಗಳ ಆದೇಶದಲ್ಲಿ ಚರ್ಚಿಸುವಂತೆ ಈಗಾಗಲೇ ರಾಜ್ಯದ ಎಲ್ಲಾ ಶಾಸಕರಿಗೆ ಮತ್ತು ಎಂ ಎಲ್ ಸಿ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದರು

ರಾಜ್ಯದಲ್ಲಿ ಸುಮಾರು 63 ಸಾವಿರ ಗ್ರಾಮ ಪಂಚಾಯತ ನೌಕರರು, ಕರವಸೂಲಿಗಾರರಾಗಿ, ಕ್ಲರ್ಕ ಕಂ ಡಾಟಾ ಎಂಟ್ರಿ ಅಪರೇಟರಗಳಾಗಿ, ಸ್ವಚ್ಚತಾಗಾರರು, ಸಿಪಾಯಿ ಮತ್ತು ವಾಟರಮನ್‌ಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಪಂಚಾಯತ್ ಮಟ್ಟದಲ್ಲಿ ಸ್ವಚ್ಚವಾಹಿನಿ ನೌಕರರು ಎಂದು ಸರಕಾರ ತರಬೇತಿ ನೀಡಿ ಸಂಜೀವಿನಿ ಒಕ್ಕೂಟದಿಂದ ನೇಮಕಾತಿ ಮಾಡಿಕೊಂಡು ಗುತ್ತಿಗೆ ಆಧಾರದಲ್ಲಿ ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದಾರೆ. ಸರಕಾರ ಇವರಿಗೆ ಪಂ ನೌಕರರು ಎಂದು ಪರಿಗಣಿಸಬೇಕು ಮತ್ತು ಒಂದು ನಿಗದಿತ ವೇತನ ನೀಡಬೇಕು ಎಂಬುದು ನೌಕರರ ಬೇಡಿಕೆ ಆಗಿದೆ ಎಂದರು. ಗ್ರಾಮ ಪಂಚಾಯತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ, ಕ್ಲರ್ಕ ಕಂ ಡಾಟಾ ಎಂಟ್ರಿ ಅಪರೇಟರ್, ನೀರುಗಂಟಿಗಳು, ಜವಾನ, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರಕಾರಿ ನೌಕರ–ರೆಂದು ಘೋಷಿಸಬೇಕು. ಇವತ್ತಿನ ಬೆಲೆ ಏರಿಕೆಯ ಆಧಾರದಲ್ಲಿ ಪಂಚಾಯತ ನೌಕರರಿಗೆ 36000 ರೂ ವೇತನ, ಸೇವಾ ಹಿರಿತನ ಪರಿಗಣಿಸಿ ವೇತನ ಹೆಚ್ಚಳ ಹಾಗೂ ಈಗಾಗಲೇ ಆರ್ಥಿಕ ಇಲಾಖೆಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವುದಕ್ಕೆ ಅನುಮೋದನೆ ಪಡೆಯಬೇಕು.

ಗ್ರಾಮ ಪಂಚಾಯತಗಳಲ್ಲಿ ಕೆಲಸ ನಿರ್ವಹಿಸುವ ನೌಕರರಿಗೆ ನಿವೃತ್ತಿ ಅಥವಾ ಮರಣ ಹೊಂದಿದರೆ ಅವರಿಗೆ ಪ್ರತಿ ತಿಂಗಳು ಕನಿಷ್ಠ 6000 ರೂ ಪಿಂಚಣಿ ಅಥವಾ ಗ್ರಾಮ ಸೇವಕರಿಗೆ ನೀಡಿದಂತೆ ಪಂಚಾಯತ ನೌಕರರಿಗೂ 10 ಲಕ್ಷ ಇಡಗಂಟು ತರಬೇತಿ ಪಡೆದಿರುವ ಎಲ್ಲಾ ಸ್ವಚ್ಛ ವಾಹಿನಿ ನೌಕರರಿಗೆ ಉದ್ಯೋಗ ನೀಡುವುದು ಬೇಡಿಕೆ ಈಡೇರಿಸಬೇಕು. ಅಧಿವೇಶನ ಮುಕ್ತಾಯ ಒಳಗಡೆ ಜಾರಿಗೆ ತರಬೇಕು. ನಿರ್ಲಕ್ಷ ವಹಿಸಿದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರು ಮಲ್ಲಿಕಾರ್ಜುನ, ಆಂಜನೇಯ ಮಾಡಗಿರಿ, ಡಿ ಎಸ್ ಶರಣಬಸವ, ವೀರೇಶ ಸೇರಿದಂತೆ ಉಪಸ್ಥಿತರಿದ್ದರು.

# ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ




ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ಜಿಲ್ಲಾ ಪೊಲೀಸ್ ಇಲಾಖೆಯ ವಾರ್ಷಿಕ ಕ್ರೀಡಾ–ಕೂಟ2025 ಭಾನುವಾರ ಬೆಳಿಗ್ಗೆ 8 ಗಂಟೆಗೆ ಪೊಲೀಸ್ ಕವಾಯತು ಮೈದಾನದಲ್ಲಿ ಘನವಾಗಿ ಆರಂಭವಾಯಿತು. ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ (ಭಾ.ಆ.ಸೇ.) ಉದ್ಘಾಟಿಸಿದರು. ಜಿಲ್ಲಾ ಪೊಲೀಸ್ ಅಧೀಕ್ಷಕ ಎಂ. ಪುಟ್ಟಮಾದಯ್ಯ (ಭಾ.ಪೊ.ಸೇ.) ಅಧ್ಯಕ್ಷತೆ ವಹಿಸಿದರು.

ಪೊಲೀಸರ ಆರೋಗ್ಯ ಸಮಾಜದ ಸುರಕ್ಷತೆಗೆ ಆಧಾರ.

ಉದ್ಘಾಟನಾ ಭಾಷಣದಲ್ಲಿ ಈಶ್ವರ ಕುಮಾರ ಕಾಂದೂ ಅವರು, ಪೊಲೀಸ್ ಸಿಬ್ಬಂದಿಯ ದೈಹಿಕ ಕ್ಷೇಮವು ಸಮಾಜದ ಒಟ್ಟಾರೆ ಸುರಕ್ಷತೆಗೆ ಮಹತ್ವದ್ದಾಗಿದೆ ಎಂದು ಹೇಳಿದರು. ಕೆಲಸದ ಒತ್ತಡದ ನಡುವೆ ಯೋಗ ಮತ್ತು ಕ್ರೀಡೆ ಮುಖ್ಯವಾಗಿದ್ದು, ಪ್ರತಿಯೊಬ್ಬ ಸಿಬ್ಬಂದಿಯೂ ಇಂತಹ ಚಟುವಟಿಕೆಯಲ್ಲಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷರಾದ ಎಸ್.ಪಿ. ಪುಟ್ಟಮಾದಯ್ಯ ಅವರು, ಒತ್ತಡಭರಿತ ಸೇವೆಯಲ್ಲಿ ದೈಹಿಕ ಮಾನಸಿಕ ದೃಢತೆ ಅಗತ್ಯವಿದ್ದು, ಕ್ರೀಡೆ ಮತ್ತು ಯೋಗ ಇವೆರಡೂ ಪೊಲೀಸರಿಗೆ ಶಕ್ತಿದಾಯಕ ಎಂದು ಹೇಳಿದರು.

ವಿಜೇತರಿಗೆ ಬಹುಮಾನ ವಿತರಿಸಿದ ಪೂರ್ವ ವಲಯದ ದಾವಣಗೆರೆ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರು, "ಸದೃಢ ದೇಹಕ್ಕೆ ಸದೃಢ ಮನಸ್ಸು, ಅದಕ್ಕೆ ಕ್ರೀಡೆ ಪೂರಕ. ಸೋಲುಗೆಲುವು ಕ್ರೀಡಾಂಗಣದ ಭಾಗ. ಸೋತವರು ಮುಂದಿನ ಗೆಲುವಿಗೆ ಸನ್ನದ್ಧರಾಗಬೇಕು" ಎಂದು ಹೇಳಿದರು.

ಅಂತಾರಾಷ್ಟ್ರೀಯ ಕ್ರೀಡಾಪಟುಗೆ ಗೌರವ ದಕ್ಷಿಣ ಏಷ್ಯಾ ಮತ್ತು ಏಷ್ಯಾ ದೇಹದಾಢ್ಯ ಸ್ಪರ್ಧೆಗಳಲ್ಲಿ ಕಂಚಿನ ಪದಕಗಳನ್ನು ಪಡೆದ ಕಿರಣ್ ಕುಮಾರ ವಾಲ್ಮೀಕಿ ಅವರಿಗೆ ವಿಶೇಷ ಸನ್ಮಾನ ಸಲ್ಲಿಸಲಾಯಿತು.

ಪ್ರತೀಕಾತ್ಮಕ ಚಾಲನೆ

ಬಲೂನು ಮತ್ತು ಪಾರಿವಾಳಗಳನ್ನು ಆಕಾಶಕ್ಕೆ ಬಿಟ್ಟ ಮೂಲಕ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ ನೀಡಲಾಯಿತು. ಅತಿಥಿಗಳ ಹಾಜರಾತಿ ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಎಸ್.ಜೆ. ಕುಮಾರಸ್ವಾಮಿ (ಕೆ.ಎಸ್.ಪಿ.ಎಸ್.), ಜಿ. ಹರೀಶ (ಕೆ.ಎಸ್.ಪಿ.ಎಸ್.) ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದರು. ವಂದನೆಯನ್ನು ಕುಮಾರಸ್ವಾಮಿ ಸಲ್ಲಿಸಿದರು.

# ಶೀಘ್ರದಲ್ಲಿ ಸಂಚಾರಿ ನ್ಯಾಯಾಲಯ ಕಾರ್ಯ ನಿರ್ವಹಿಸುತ್ತದೆ:ನ್ಯಾ.ಮೂ. ಸಂಜೀವಕುಮಾರ ಹಂಚಾಟೆ

ಮಲ್ಲಮ್ಮ ನುಡಿ ವಾರ್ತೆ



**ಕಮಲನಗರ:** ಕಮಲನಗರನಲ್ಲಿ ಶೀಘ್ರ ಸಂಚಾರಿ ನ್ಯಾಯಾಲಯ ಕಾರ್ಯ ನಿರ್ವಹಿಸುತ್ತದೆ, ಇದಕ್ಕೆ ಬೇಕಾದ ಎಲ್ಲಾ ತಯಾರಿ ಮಾಡಿ ಕೊಳ್ಳಲಾಗಿದೆ ಎಂದು ನ್ಯಾಯಾಲಯದ ಕಟ್ಟಡ ಕಾಮಗಾರಿ ಹೈಕೋರ್ಟ್ ನ್ಯಾಯಮೂರ್ತಿ ಮತ್ತು ಬೀದರ್ ಅಡಳಿತಾತ್ಮಕ ನ್ಯಾಯಾಧೀಶರಾದ ಸಂಜೀವಕುಮಾರ ಹಂಚಾಟೆ ಅವರು ಭೇಟಿ ಪರಿಶೀಲಿಸಿ ಹೇಳಿದರು.

ಪಟ್ಟಣದ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯದ ಆವರಣದಲ್ಲಿ ಸಿದ್ದ ವಾಗಿರು ದಿವಾಣಿ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳ ಸಂಚಾರಿ ಕಾಮಗಾರಿಯನ್ನು ಅವರು ಸ್ವಂತ ಬಂದು ವೀಕ್ಷಣೆ ಮಾಡಿದರು.

ಲೋಕೋಪಯೋಗಿ ಇಲಾಖೆ ಕಾರ್ಯಪಾಲ ಅಭಿಯಂತರ ಶಿವಶಂಕರ ಕಾಮಶೆಟ್ಟಿ ಅವರ ಜತೆ ಕಟ್ಟಡ ಕಾಮಗಾರಿ ಬಗ್ಗೆ ಚರ್ಚಿಸಿದರು . ನ್ಯಾಯಾಲಯದ ಕೋಣೆಗೆ ತೆರಳಿ ಎಲ್ಲಾ ಮೆಜು ಮತ್ತು ಆಸನಗಳ ವ್ಯವಸ್ಥೆ ನೋಡಿ ದರು. ಹೊರಗಿನ ವರಂಡದಲ್ಲಿ ಸಾರ್ವಜನಿಕರಿಗೆ ಕುಳಿತು ಕೊಳ್ಳಲು ಆಸನ ಮಾಡಿಸಲು ತಿಳಿಸಿದರು.

ನ್ಯಾಯಾಲಯದಲ್ಲಿ ವಕೀಲರು ಕುಳಿತುಕೊಳ್ಳಲು ಮತ್ತು ಅಗತ್ಯ ಮಾಹಿತಿ ಕಲ್ಪಿಸಲು ವಿಶೇಷ ವ್ಯವಸ್ಥೆ ಕಲ್ಪಿಸಬೇಕು. ಕಕ್ಷಿದಾರರ ಕಟಕಟೆ ಸರಿಪಡಿಸಿ ಸೂಕ್ತ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ನ್ಯಾಯಾಧೀಶರ ಪೀಠದಲ್ಲಿ ಸೂಕ್ತ ಗಾಳಿ ಮತ್ತು ಬೆಳಕು ಬರುವಂತೆ ಕಿಟಕಿಗಳನ್ನು ಅಳವಡಿಸಬೇಕು ಸೂಚಿಸಿದರು. ಎಂದು ವಕೀಲರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಜತೆಗೆ ಕುಡಿಯುವ ನೀರು ಮತ್ತು ಅಗತ್ಯ ಮಾಹಿತಿ ಒದಗಿಸಲು ಮುಂದಾಗಬೇಕು.

ಸಾರ್ವಜನಿಕರಿಗೆ ಶೌಚಾಲಯ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ಪ್ರಥಮ ಆದ್ಯತೆ ನೀಡಬೇಕು. ಹೀಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ವಸತಿ ನಿಲಯದ ಕೋಣೆಗಳನ್ನು ಪಡೆದು ಶೀಘ್ರ ಕಾಮಗಾರಿ ಆರಂಭಿಸಬೇಕು. ಇದಕ್ಕೆ ಬೇಕಾಗುವ ಅನುದಾನ ಶೀಘ್ರದಲ್ಲಿ ಬಿಡುಗಡೆ ಮಾಡಲಾಗುತ್ತದೆ ಎಂದು ಅಧಿಕಾರಿ ಶಿವಶಂಕರ ಕಾಮಶೆಟ್ಟೆ ಅವರಿಗೆ ಆದೇಶಿಸಿದರು.

ಈ ಸಂದರ್ಭದಲ್ಲಿ ಭೇಟಿ ಮಾಡಿದ ಪೌರಕಾರ್ಮಿಕ ತಂಡದ ಮಹಿಳೆರಿಗೆ ಮಾತನಾಡಿ, ಕಾರ್ಯಾಲಯದ ಸ್ವಚ್ಚತೆ ನಿಮ್ಮ ಕೈಯಲ್ಲಿದೆ, ಪ್ರತಿ ನಿತ್ಯ ಸ್ವಚ್ಚತೆ ಕಾಪಾಡಬೇಕು ಎಂದು ಹೇಳುವಾಗ ಅವರ ಎರಡೂ ಕೈ ಮುಗಿದು ಬಹಳ ವಿನಯ ದಿಂದ ಸಂಭಾಷಣೆ ಮಾಡಿದು ಎಲ್ಲರ ಮನ ಸೆಳೆಯಿತು.

ಔರಾದ್ ನ್ಯಾಯಾಧೀಶ ವಿಜಯ ಕುಮಾರ ವಾಲಖೇಡೆ, ತಹಸೀಲ್ದಾರ್ ಅಮಿತಕುಮಾರ ಕುಲಕರ್ಣಿ, ತಾಪಂ ಇಒ ಹಣಮಂತರಾಯ ಕೌಟಗೆ, ಭಾಲ್ಕಿ ವಕೀಲ ಸುರೇಶ ಬಿರಾದಾರ, ಪ್ರವೀಣ ಪಾಟೀಲ್, ಔರಾದ್ ವಕೀಲರ ಸಂಘದ ಅಧ್ಯಕ್ಷ ಬಾಲಾಜಿ ಕಂಬಾರ, ಕಾರ್ಯ ದರ್ಶಿ ಬಾಲಾಜಿ ಉಪಾಸೆ ರವಿಕಾಂತ ನೌಬಾದೆ, ವಕೀಲ ಚಂದ್ರಪಾಲ, ಸಂಜೀವಕುಮಾರ, ನಾಗೇಂದ್ರ ಬಿರಾದಾರ,ಕಿರಣ ಮಾರತಂಡ ಡಿಗ್ಗಿ, ಲೋಕೋಪಯೋಗಿ ಇಲಾಖೆ ಎಇಇ ಹಮೀಲಾಪುರ ಮತ್ತು ನ್ಯಾಯಾಲಯದ ಸಿಬ್ಬಂದಿ ಸೇರಿದಂತೆ ಇನ್ನಿತರ ಇದ್ದರು.

# ಕಣ್ಣು ಕಳೆದುಕೊಂಡು ಪರಾವಲಂಬಿ ಆಗಬೇಡಿ

ಮಲ್ಲಮ್ಮ ನುಡಿ ವಾರ್ತೆ



ಭಾಲ್ಕಿ: ಕಣ್ಣು ಮನುಷ್ಯನ ದೇಹದ ಪ್ರಮುಖ ಅಂಗ. ಕಣ್ಣು ಕಳೆದುಕೊಂಡು ಪರಾವಲಂಬಿ ಆಗಬೇಡಿ ಎಂದು ಉದಗೀರನ ಉದಯಗಿರಿ ಲಾಯನ್ಸ್ ನೇತ್ರಾಲಯದ ಸಮಾಲೋಚಕ ಡಾ.ಪ್ರಶಾಂತ ಗಾಯಕವಾಡ ಸಲಹೆ ನೀಡಿದರು.

ಪಟ್ಟಣದ ಹಳೇ ಜಾಧವ ಆಸ್ಪತ್ರೆ ಸಮೀಪ ಪವನ ಆಪ್ಟಿಕಲ್ಸ್ ಮುಂಭಾಗದಲ್ಲಿ ರೋಟರಿ ಕ್ಲಬ್ ಆಫ್ ಭಾಲ್ಕಿ ಪೋರ್ಟ್ ,ವ್ಹಿಜನ್ ಫೌಂಡೆಶನ್ ಆಫ್ ಇಂಡಿಯಾ ಮತ್ತು ಉದಯಗಿರಿ ಲಾಯನ್ಸ್ ನೇತ್ರಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಮೋತಿ ಬಿಂದು ಶಸ್ತ್ರಕ್ರಿಯೆ ಮತ್ತು ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ಇಂದಿನ ಆಧುನಿಕ ವೈದ್ಯಕೀಯ ಬೆಳವಣಿಗೆಯಲ್ಲಿ ದೃಷ್ಟಿಕಳೆದುಕೊಂಡರೂ ಪುನ: ಪಡೆದುಕೊಳ್ಳಲು ಸಾಧ್ಯ. ಸೂಕ್ಷ್ಮ ವಸ್ತುಗಳು ಕಣ್ಣಿಗೆ ಸ್ಪಷ್ಟವಾಗಿ ಕಾಣದಿರುವುದು ಮೋತಿಬಿಂದು ಲಕ್ಷಣವಾಗಿರುತ್ತದೆ.40 ವರ್ಷ ವಯಸ್ಸಿನ ನಂತರ ಮೋತಿಬಿಂದು ಗೋಚರಿಸುತ್ತದೆ. ತಕ್ಷಣವೇ ನೇತ್ರತಜ್ಞರ ಸಲಹೆ ಪಡೆದು ಕಣ್ಣಿನ ಅಂಧತ್ವ ನಿವಾರಿಸಿಕೊಳ್ಳಬಹುದು ಎಂದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಜೈರಾಜ ದಾಬಶೆಟ್ಟೆ ಮಾತನಾಡಿ, ಕಣ್ಣಿನ ದೃಷ್ಟಿ ದೀರ್ಘಾಯುವರೆಗೆ ಉಳಿಯಬೇಕಾದರೆ ಪ್ರತಿ 06 ತಿಂಗಳಿಗೊಮ್ಮೆ ನೇತೃತಜ್ಞರ ಸಲಹೆ ಪಡೆದುಕೊಳ್ಳುವುದು ಅಗತ್ಯ. ಭಾಲ್ಕಿ ರೋಟರಿ ಕ್ಲಬ್‌ನವರು ಪ್ರತಿ 06 ತಿಂಗಳಿಗೊಮ್ಮೆ ಉಚಿತ ನೇತ್ರಚಿಕಿತ್ಸಾ ಶಿಬಿರ ಆಯೋಜಿಸಿ ದೃಷ್ಠಿಹೀನರಿಗೆ ಸಹಾಯ ಮಾಡುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಶಿಬಿರದಲ್ಲಿ 55 ಜನರಿಗೆ ನೇತ್ರಚಿಕಿತ್ಸೆ ನಡೆಸಿ,25 ಜನರಿಗೆ ಕ್ಯಾಟರೆಕ್ಟ್ ಶಸ್ತ್ರಕ್ರಿಯೆಗೊಳಪಡಿಸಲಾಯಿತು.

ರೋಟರಿ ಕ್ಲಬ್ ಆಫ್ ಭಾಲ್ಕಿ ಫೋರ್ಟ್ನ ತಾಲೂಕು ಅಧ್ಯಕ್ಷ ಅಶ್ವಿನ ಭೋಸ್ಲೆ ಅಧ್ಯಕ್ಷತೆ ವಹಿಸಿದ್ದರು.

ಡಾ.ಶಿವರಾಜ ಮನಸುರೆ,ಮಹೇಶ ಸಮಗೆ,ಡಾ.ಅಮೀತ ಅಷ್ಟೂರೆ,ಡಾ.ನಿತೀನ ಪಾಟೀಲ್,ಡಾ.ವಸಂತ ಪವಾರ,ಡಾ. ಯುವರಾಜ ಜಾಧವ,ಡಾ.ಶ್ರೀರಂಗ ಬಿರಾದಾರ,ಡಾ.ಸಜ್ಜಲಬಳತೆ,ದತ್ತುಕುಮಾರ ಮೆಹಕ್ರೆ,ನ್ಯಾಯವಾದಿ ಶಾಂತನು ಕುಲಕರ್ಣಿ, ಡಾ.ಮಾಣಿಕಪ್ರಭು ಕೋಟೆ,ವೈಜಿನಾಥಪ್ಪ ಕೋಟೆ,ಪವನ ಕೋಟೆ ಸೇರಿದಂತೆ ರೋಗಿಗಳು ಉಪಸ್ಥಿತರಿದ್ದರು. ನಿವೃತ್ತ ಪ್ರಾಚಾರ್ಯ ಅಶೋಕರಾಜೋಳೆ ನಿರೂಪಿಸಿದರು. ರೋಟರಿ ಕ್ಲಬ್ ಕಾರ್ಯದರ್ಶಿ ಬಸವ ಪಾಟೀಲ್ ವಂದಿಸಿದರು.

# ರಕ್ತದಾನ ಮಹತ್ವ ಕುರಿತು ಜಾಗೃತಿ ಮೂಡಿಸಿ: ಡಾ.ಯಲ್ಲಾ ರಮೇಶ್ ಬಾಬು

ಬಳ್ಳಾರಿ,ನ: ಸಾರ್ವಜನಿಕರಿಗೆ ರಕ್ತದಾನ ಮಹತ್ವ ಕುರಿತು ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು. ಶುಕ್ರವಾರ, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ರಕ್ತಹೀನತೆಯಿಂದ ಬಳಲುವಂತಹ ಗರ್ಭಿಣಿಯರಿಗೆ, ಅಪಘಾತ ಸಂದರ್ಭದಲ್ಲಿ ಸಾಮಾನ್ಯ ಜನರಿಗೆ ತುರ್ತಾಗಿ ರಕ್ತದ ಸೌಲಭ್ಯ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವಂತೆ ಮಾಡಬೇಕು.

ಹಾಗಾಗಿ ಹೆಚ್ಚಿನ ಮಟ್ಟದಲ್ಲಿ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳುವಂತೆ ತಿಳಿಸಿದರು.

18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪುರುಷ ಮತ್ತು ಮಹಿಳೆಯರು ರಕ್ತದಾನ ಮಾಡುವ ಮೂಲಕ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರಿಗೆ, ಶಸ್ತ್ರಚಿಕಿತ್ಸಾ ಹೆರಿಗೆ ವೇಳೆ, ಅಪಘಾತಗಳು, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಕ್ಕಾಗಿ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಥ್ಯಾಲಿಸೀಮಿಯಾ,

ಹಿಮೋಫಿಲಿಯಾ ಮುಂತಾದ ರೋಗಿಗಳ ಜೀವವನ್ನು ಉಳಿಸುವ ಪುಣ್ಯದ ಕೆಲಸವಾಗಿದೆ.

ಜಗತ್ತಿನಲ್ಲಿ ಅತಿ ದೊಡ್ಡ ಸಂಶೋಧನೆ ಎಂದರೆ ಒಬ್ಬ ಮನುಷ್ಯನ ರಕ್ತವನ್ನು ಇನ್ನೊಬ್ಬರ ಜೀವ ಉಳಿಸಲು ಉಪಯೋಗಿಸುವುದು, ಇದರಿಂದ ಹಲವಾರು ಜನರ ಆರೋಗ್ಯವನ್ನು ಸುಧಾರಿಸುವ ಜೊತೆಗೆ ಸಾವಿನಿಂದ ಪಾರು ಮಾಡಲು ಸಾಧ್ಯವಿದ್ದು, ಪ್ರತಿಯೊಬ್ಬರೂ ರಕ್ತದಾನ ಮಾಡಲು ಮುಂದೆ ಬರುವಂತೆ ಗ್ರಾಮೀಣ ಭಾಗದ ಜನರಿಗೆ,

ನಗರ ಪ್ರದೇಶದ ಜನರಿಗೆ ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸಲು ಸೂಚಿಸಿದರು. ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ ಅವರು ಮಾತನಾಡಿ, ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ, ರಕ್ತವೇ ದೇಹದ ಜೀವನಾಡಿಯಾಗಿದ್ದು, ರಕ್ತಕ್ಕೆ ಪರ್ಯಾಯವಾದ ವಸ್ತು ಇಲ್ಲದೇ ಇರುವುದರಿಂದ ಇನ್ನೊಬ್ಬ ವ್ಯಕ್ತಿಯು ರಕ್ತದಾನದ ಮೂಲಕ ಮಾತ್ರ ನಾವು ರಕ್ತವನ್ನು ಪಡೆಯಬಹುದಾಗಿದೆ. ಹಾಗಾಗಿ 18 ರಿಂದ 60 ವರ್ಷದ ಒಳಗಿನ ಎಲ್ಲಾ ಆರೋಗ್ಯವಂತ ಪುರುಷ ಮತ್ತ ಮಹಿಳೆಯರು ರಕ್ತದಾನ ಮಾಡುವ ಅವಕಾಶವಿದೆ ಎಂದು ತಿಳಿಸಿದರು.

45 ಕೆಜಿ ಮೇಲ್ಪಟ್ಟ ಹಾಗೂ 12.5 ಗ್ರಾಂ ಗಿಂತ ಹೆಚ್ಚು ಹಿಮೋಗ್ಲೊಬಿನ್ ಇರುವ ಮಹಿಳೆಯರು ಪ್ರತಿ ನಾಲ್ಕು ತಿಂಗಳಿಗೊಮ್ಮೆ, ಪುರುಷರು ಪ್ರತಿ ಮೂರು ತಿಂಗಳಿಗೊಮ್ಮೆ, ತಪ್ಪದೇ ರಕ್ತದಾನವನ್ನು ಮಾಡುವ ಮೂಲಕ ದಾನಿಗಳು ತಮ್ಮ ಆರೋಗ್ಯ ಉಲ್ಲಾಸಮಯವಾಗಿಸಿಕೊಳ್ಳುವ ಜೊತೆಗೆ ಇನ್ನೊಬರ ಜೀವ ಉಳಿಸಬಹುದು ಎಂದರು.

ರಕ್ತದಾನ ಮಾಡುವುದರಿಂದ ಹೃದಯದ ಆರೋಗ್ಯವನ್ನು ಸುಧಾರಿಸಬಹುದು. ರಕ್ತದಾನವು ದಾನಿಗಳಿಗೆ ಯೋಗಕ್ಷೇಮದ ಭಾವನೆಯನ್ನು ನೀಡುತ್ತದೆ ಮತ್ತು ನಿಯಮಿತ ರಕ್ತದಾನವು ಕೆಲವು ರೋಗಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು. ಸಭೆಯಲ್ಲಿ ಪ್ರಭಾರಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಶಿದ್ ಬೇಗಮ್, ಜಿಲ್ಲಾ ಮೇಲ್ವಿಚಾರಕ ಗಿರೀಶ್, ಲೆಕ್ಕಾಧಿಕಾರಿ ಹೊನ್ನೂರಪ್ಪ

ಮತ್ತು ಐಸಿಟಿಸಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ತೆರೆ, ವಿಜೇತರಿಗೆ ಬಹುಮಾನ ವಿತರಣೆ ಗುಂಪು ಕ್ರೀಡೆಗಳಿಂದ ನಾಯಕತ್ವದ ಮಹತ್ವ ತಿಳಿಯಲಿದೆ: ವರ್ತಿಕ ಕಟಿಯಾರ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ: ಪೊಲೀಸ್ ಇಲಾಖೆ ಎಂದರೆ ಶಿಸ್ತಿಗೆ ಹೆಸರುವಾಸಿ. ಇಂತಹ ಶಿಸ್ತು ರೂಢಿಸಿಕೊಳ್ಳಬೇಕಾದರೆ ಕ್ರೀಡೆಯಲ್ಲಿ ಭಾಗವಹಿಸುವುದು ಅಗತ್ಯ. ಕ್ರೀಡೆಗಳಿಂದ ಶಿಸ್ತು, ಸಂಯಮ ರೂಢಿಯಾಗಲಿದೆ. ಜೊತೆಗೆ ಗುಂಪು ಕ್ರೀಡೆಗಳಿಂದ ನಾಯಕತ್ವದ ಮಹತ್ವವೂ ಅರಿವಿಗೆ ಬರಲಿದೆ. ಎಲ್ಲರೂ ಒಟ್ಟುಗೂಡಿದರೆ ಜಯ ಎನ್ನುವುದು ಗೊತ್ತಾಗಲಿದೆ. ಜೀವನದಲ್ಲೂ, ಕರ್ತವ್ಯ ನಿರ್ವಹಣೆಯಲ್ಲಿ ಒಗ್ಗಟ್ಟು ಎಷ್ಟು ಮುಖ್ಯ ಎನ್ನುವುದನ್ನು ಕ್ರೀಡೆಗಳು ತಿಳಿಸಿಕೊಡುತ್ತವೆ ಎಂದು ಬಳ್ಳಾರಿ ವಲಯ ಪೊಲೀಸ್ ಮಹಾನೀರಿಕ್ಷಕರಾದ ವರ್ತಿಕ ಕಟಿಯಾರ್ ಅವರು ಹೇಳಿದರು.

ನಗರದ ಡಿಎಆರ್ ಕವಾಯತು ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ–2025ರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ಬಾರಿಯ ವಾರ್ಷಿಕ ಕ್ರೀಡಾಕೂಟವನ್ನು ಬಹಳ ಶಿಸ್ತು ಬದ್ಧತೆಯಿಂದ ನಡೆಸಿದ್ದೀರಿ. ಎಲ್ಲರು ಒಟ್ಟುಗೂಡಿ ಕ್ರೀಡೆಯಲ್ಲಿ ಭಾಗವಹಿಸಿ, ತಮ್ಮ ಪ್ರತಿಭೆ ಜತೆಗೆ ಎಲ್ಲರೊಟ್ಟಿಗೆ ಒಡಗೂಡಿ ಬೆರೆತ್ತಿದ್ದೀರಿ. ಗೆದ್ದವರಿಗೆಲ್ಲ ಅಭಿನಂದನೆ. ಸೋತವರು ನಿರಾಶರಾಗಬಾರದು. ಸೋಲು ಗೆಲುವಿನ ಮೆಟ್ಟಿಲು ಎನ್ನುವುದನ್ನು ಅರಿಯಬೇಕು. ಜೀವನವನ್ನು ಕ್ರೀಡೆಯಂತೆ ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಬೇಕು. ಶಿಸ್ತು, ಸಂಯಮ, ಮೌಲ್ಯಯುತ ಜೀವನ ಅತ್ಯಂತ ಮುಖ್ಯ ಎಂದು ಹೇಳಿದರು.

ಟೈಮ್ ಮ್ಯಾನೇಜ್ಮೆಂಟ್ ಪೊಲೀಸ್ ವೃತ್ತಿ ಜೀವನದಲ್ಲಿ ತುಂಬಾ ಮಹತ್ವದ್ದು. ಜಿಲ್ಲೆಯಲ್ಲಿ ನಡೆದ ಹಬ್ಬ–ಹರಿ ದಿನಗಳಲ್ಲಿ ರಜೆ ತೆಗೆದುಕೊಳ್ಳದೇ ಎಲ್ಲ ಹಂತದ ಪೊಲೀಸ್ ಅಧಿಕಾರಿಗಳು ನಿಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿದ್ದೀರಿ ಎಂದು ಶ್ಲಾಘಿಸಿದರು.

ಮೂರು ದಿನಗಳಲ್ಲಿ ಶಿಸ್ತು ಮತ್ತು ಸಮಯ ಬದ್ಧವಾದ ಕ್ರೀಡಾಕೂಟ ನಡೆಸಿದ್ದೀರಿ, ಮುಂದೆ ಕೂಡ ಇದೇ ರೀತಿ ಪ್ರತಿ ದಿನ ಪೊಲೀಸ್ ಕೆಲಸದಲ್ಲಿ ಮತ್ತು ಜೀವನದಲ್ಲಿ ಶಿಸ್ತು ಮತ್ತು ಸಮಯ ಬದ್ಧತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳೀದರು.

ಈ ಮೂರು ದಿನಗಳ ಕಾಲ ಎಸ್ಪಿಯಿಂದ ಪಿಸಿವರೆಗೂ ಭಾಗವಹಿಸಿದ ಎಲ್ಲಾ ಆರಕ್ಷಕರಿಗೆ ನಾನು ಅಭಿನಂದನೆ ತಿಳಿಸುತ್ತೇನೆ. ಆರಕ್ಷಕರು ತಮ್ಮ ಕೆಲಸದ ಸಮಯದಲ್ಲಿ ಎರಡು ಮೂರು ದಿನಗಳ ಕಾಲ ನಿರಂತರವಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಈ ಸಮಯದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢರಾಗಿರಬೇಕು. ಇಲ್ಲಿ ಪೊಲೀಸ್ ಕುಟುಂಬ ವರ್ಗ ಹಾಗೂ ಮಕ್ಕಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಕ್ಕೆ ನನಗೆ ಸಂತೋಷ ಉಂಟು ಮಾಡಿದೆ ಎಂದರು.

ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲ ಠಾಣೆಯ ಸಿಬ್ಬಂದಿಗಳು ಉತ್ತಮ ಕೆಲಸ ಮಾಡುತ್ತಿದ್ದೀರಿ, ಇದನ್ನೇ ಮುಂದುವರಿಸಿಕೊಂಡು ಹೋಗಬೇಕು. ಕಾನೂನು ಸುವ್ಯವಸ್ಥೆ, ಟ್ರಾಫಿಕ್ ಹಾಗೂ ಅಪರಾಧ ಪ್ರಕರಣ ಪತ್ತೆಗಳಲ್ಲಿ ಚುರುಕಾಗಿ ಕೆಲಸ ಮಾಡಬೇಕು. ಸ್ವತ್ತು ವಿಲೇವಾರಿ ವಿಚಾರವಾಗಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳು ಉತ್ತಮವಾಗಿ ಕ್ರಮ ವಹಿಸಿ, ಅಚ್ಚುಕಟ್ಟಾಗಿ ವಿಲೇವಾರಿ ಮಾಡಿದ್ದಾರೆ. ಮುಂದೆಯೂ ಹೀಗೆ ಮಾಡಿ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಹೇಳೀದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಮಾತನಾಡಿ, ಈ ಮೂರು ದಿನಗಳಲ್ಲಿ ನಡೆದ ಕ್ರೀಡಾಕೂಟದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಬಹಳ ಉತ್ಸಾಹದಿಂದ ಭಾಗವಹಿಸಿದ್ದೀರಿ. ಹೀಗೆ ಮುಂದಿನ ದಿನಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ 6 ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು. ಪೊಲೀಸ್ ಸಿಬ್ಬಂದಿಗಳು ಪೊಲೀಸ್ ಧ್ವಜ ಹಸ್ತಾಂತಿಸಿದರು.

ಬಳಿಕ ವಿಜೇತರಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನವೀನ್ ಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಕುಟುಂಬ ವರ್ಗ, ಸಾರ್ವಜನಿಕರು ಉಪಸ್ಥಿತರಿದ್ದರು.

# ಪತ್ರಕರ್ತರಿಗೆ ಮಾಹಿತಿ ಹಕ್ಕು ಕಾಯ್ದೆ ಬಹಳ ಉಪಯುಕ್ತ

## ಮಾಹಿತಿ ಆಯೋಗದ ಕಲಬುರಗಿ ಆಯುಕ್ತ ಬಿ.ವೆಂಕಟಸಿಂಗ್ ಅನಿಸಿಕೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಮಾಹಿತಿ ಹಕ್ಕು ಕಾಯ್ದೆ ಪತ್ರಕರ್ತರಿಗೆ ಬಹಳ ಉಪಯುಕ್ತವಾಗಿದ್ದು, ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು. ಪತ್ರಕರ್ತರು ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಜನರಿಗೆ ತಿಳಿಸಲು ಈ ಕಾಯ್ದೆ ಸಹಾಕರಿಯಾಗಲಿದೆ ಎಂದು ಮಾಹಿತಿ ಹಕ್ಕು ಆಯೋಗದ ಕಲಬುರಗಿ ವಿಭಾಗದ ಆಯುಕ್ತರಾದ ಬಿ.ವೆಂಕಟಸಿಂಗ್ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ರಿಪೋರ್ಟರ್ಸ್ ಗಿಲ್ಡ್ ನಿಂದ ಆಯೋಜಿಸಿದ್ದ ಪತ್ರಕರ್ತರೊಂದಿಗೆ ಆಯುಕ್ತರ ಸೌಹಾರ್ದ ಭೇಟಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರ್ಕಾರದ ಹಣದ ಖರ್ಚು ವೆಚ್ಚಗಳನ್ನು ನಾವು ಮಾಹಿತಿ ಆಯೋಗದ ಮೂಲಕ ತಿಳಿದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. 2005 ರಲ್ಲಿ ಈ ಕಾಯ್ದೆಯನ್ನು ಜಾರಿ ಮಾಡಲಾಯಿತು.

ಕಳೆದ 20 ವರ್ಷದಲ್ಲಿ ಸಾಕಷ್ಟು ಸುಧಾರಣೆ ಆಗಿದೆ. ಮಹಾರಾಷ್ಟ್ರ ರಾಜ್ಯದಲ್ಲಿ 61 ಸಾವಿರ ಅರ್ಜಿಗಳು ಬಾಕಿ ಉಳಿದು ಮೊದಲನೇ ಸ್ಥಾನದಲ್ಲಿದ್ದರೆ; ರಾಜ್ಯದಲ್ಲಿ 41 ಸಾವಿರ ಅರ್ಜಿಗಳು ಬಾಕಿ ಉಳಿದು ಮೂರನೇ ಸ್ಥಾನದಲ್ಲಿದೆ. ಕಲಬುರಗಿ ವಿಭಾಗದಲ್ಲಿ ಏಳು ಸಾವಿರ ಅರ್ಜಿಗಳು ಬಾಕಿ ಉಳಿದಿವೆ ಎಂದು ವಿವರಿಸಿದರು.

ಅಧಿಕಾರಿಗಳು ನಿರ್ಲಕ್ಷ್ಯದಿಂದ ಮಾಹಿತಿ ಕೊಡಲು ಹಿಂಜರಿದರೆ,



ರಾಯಚೂರು: ನಗರದ ಪತ್ರಿಕಾ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ರಿಪೋರ್ಟರ್ಸ್ ಗಿಲ್ಡ್ ನಿಂದ ಮಾಹಿತಿ ಆಯೋಗದ ಕಲಬುರಗಿ ಆಯುಕ್ತರಾದ ಬಿ.ವೆಂಕಟಸಿಂಗ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇನ್ನೂ ಕೆಲವರು ಭಯದಿಂದ ಹಿಂಜರಿಯುತ್ತಿದ್ದಾರೆ. ಇನ್ನೂ ಕೆಲವರು ಉದ್ದೇಶಪೂರಕವಾಗಿಯೇ ಮಾಹಿತಿ ನೀಡುತ್ತಿಲ್ಲ. ಅಧಿಕಾರಿಗಳು ಕಚೇರಿಯ ಎಲ್ಲ ವಿವರ ದಾಖಲಿಸಬೇಕು. ಅದು ಕೂಡ ಸರಿಯಾಗಿ ಮಾಡುತ್ತಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಇರುತ್ತಾರೆ. ಆದರೆ, ಅವರು ಮಾಹಿತಿ ನೀಡದಿದ್ದರೆ ಅಧಿಕಾರಿಗಳಿಗೆ ದಂಡ ಹಾಕುವ, ಕ್ರಮ ಕೈಗೊಳ್ಳುವ ಅಧಿಕಾರ ಆಯೋಗಕ್ಕಿದೆ. ಈ ಬಗ್ಗೆ ಜನರಿಗೆ ಮಾಹಿತಿ ಸಿಗಬೇಕಿದ್ದು, ಕಾಯಿದೆ ಬಗ್ಗೆ ಮಾಹಿತಿ ಕಾರ್ಯಾಗಾರ ನಡೆಸುವ ಉದ್ದೇಶವಿದೆ. ಬೀದರ್ ನಲ್ಲಿ ನ.29 ರಂದು ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಬದ್ಧತೆ, ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಸಾಧನೆ ಮಾಡಲು ಸಾಧ್ಯ. ದೇವದುರ್ಗದ ಹಿಂದುಳಿದ ತಾಲೂಕಿನ ಕುಗ್ರಾಮದಲ್ಲಿ ಬೆಳೆದ ನಾನು ಓದಿದ್ದು ಐಟಿಐ. ಆದರೆ, ಆಕಸ್ಮಿಕವಾಗಿ ಮಾಧ್ಯಮ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದೆ. ಕಳೆದ 39 ವರ್ಷಗಳ ಸೇವಾನುಭವ ಹೊಂದಿದ್ದೇನೆ.

ಅಲ್ಲದೇ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ರಿಪೋರ್ಟರ್ ನಲ್ಲಿ 25 ವರ್ಷಗಳಲ್ಲಿ ಅನೇಕ ಹುದ್ದೆಗಳನ್ನು ಸೇವೆ ಸಲ್ಲಿಸಿದ್ದೇನೆ. ಈಗ ನನಗೆ ಮಾಹಿತಿ ಆಯೋಗದ ಆಯುಕ್ತರಾಗುವ ಅವಕಾಶ ಸಿಕ್ಕಿದ್ದು, ಇದಕ್ಕೆ ಪತ್ರಕರ್ತ ಮಿತ್ರರ ಸಹಕಾರವೇ ಕಾರಣ ಎಂದು ಅಭಿಪ್ರಾಯ ಪಟ್ಟರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ಮಾತನಾಡಿ, ಅತ್ಯಂತ ಬಡತನದ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಬಿ.ವೆಂಕಟಸಿಂಗ್ ಅವರು ಇಂದು ಮಾಹಿತಿ ಆಯೋಗದ ಆಯುಕ್ತರಂಥ ದೊಡ್ಡಹುದ್ದೆ ಅಲಂಕರಿಸಿರುವುದು ಅವರ ಪರಿಶ್ರಮಕ್ಕೆ ಹಿಡಿದ ಕನ್ನಡಿಯಾಗಿದೆ. ಮಾಹಿತಿ ಹಕ್ಕು ಆಯೋಗ ಬಹಳ ಪ್ರಮುಖ ಕ್ಷೇತ್ರವಾಗಿದ್ದು, ಅಲ್ಲಿಯೂ ಅವರು ಯಶಸ್ಸು ಕಾಣಲಿ. ಮುಂದೆಯೂ ಮಾಧ್ಯಮ ಕ್ಷೇತ್ರಕ್ಕೆ ಅವರ ಮಾರ್ಗದರ್ಶನ ಇರಲಿ ಎಂದು ತಿಳಿಸಿದರು. ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ,

ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯಕುಮಾರ ಜಾಗಟಗಲ್ ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯಸ್ವಾಮಿ ಕುಕನೂರು, ಗಿಲ್ಡ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಹೂಗಾರ ಇದ್ದರು.

# 24ರಂದು ಸಾಥ್ ಕಚೇರಿ ಮುಂದೆ ರೈತರ ಹೋರಾಟ–ಅಬ್ದುಲ್ ಮಜೀದ್



ಮಲ್ಲಮ್ಮ ನುಡಿ ವಾರ್ತೆ

ರಾಯಚೂರ: ನ. –ಮಕ್ಕೆ ಜೋಳ,ಹತ್ತಿ,ಜೋಳ ಖರೀದಿ ಕೇಂದ್ರ ಆರಂಭಿಸಲು ಹಾಗೂ ಆಯ ಬೆಳೆಗಳಿಗೆ ಸರ್ಕಾರ ಬೆಲೆ ನಿಗದಿ ಮಾಡಲು ಒತ್ತಾಯಿಸಿ ರಾಜ್ಯ ರೈತ ಸಂಘ, ಹಸಿರು ಸೇನೆ ನೇತೃತ್ವದಲ್ಲಿ ರಾಜ್ಯದ್ಯಂತ ಹೋರಾಟವನ್ನು ದಿ.24 ರಂದು ಹಮ್ಮಿಕೊಂಡಿದ್ದು, ಅದರಂತೆ ಜಿಲ್ಲೆಯಲ್ಲಿಯೂ ನಗರದ ಹಳೆ ಜಿಲ್ಲಾಧಿಕಾರಿ ಕಛೇರಿ(ಸಾಥ್ ಕಛೇರಿ) ಬಳಿ ಅಂದು ಬೃತಹ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಅಬ್ದುಲ್ ಮಜೀದ್ ಹೇಳಿದರು.ಅವರಿಂದು ನಗರದ ಸುದ್ದಿಗಾರರೊಂದಿಗೆ ನಗರದ ಮಾತನಾಡಿ, ರಾಜ್ಯ ಸರ್ಕಾರ ಇನ್ನೂವರೆಗೂ ಮಕ್ಕೆ ಜೋಳ,ಹತ್ತಿ ಸೇರಿದಂತೆ ಯಾವುದೇ ದವಸ ಧಾನ್ಯಗಳ ಖರೀದಿ ಕೇಂದ್ರವನ್ನು ಆರಂಭಿಸಿಲ್ಲವೆಂದು ದೂರಿದರು

ಸರ್ಕಾರ ಸರಿಯಾದ ಸಮಯಕ್ಕೆ ಖರೀದಿ ಕೇಂದ್ರಗಳನ್ನು ಆರಂಭಿಸದೇ ರೈತರು ತಮ್ಮ ಬೆಳೆಗಳನ್ನು ಮಾರಟ ಮಾಡಿದ ನಂತರ ಖರೀದಿ ಕೇಂದ್ರಗಳನ್ನು ಆರಂಭಿಸುತ್ತದೆ. ಆದರೆ ರೈತರಲ್ಲಿ ಕಡಿಮೆ ಬೆಲೆಗೆ ಬೆಳೆಗಳನ್ನು ಖರೀದಿಸಿ ವ್ಯಾಪರಸ್ಥರು ಅದೇ ಬೆಳೆಯನ್ನು ಹೆಚ್ಚಿನ ಬೆಲೆಗೆ ಖರೀದಿ ಕೇಂದ್ರಗಳಿಗೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಾರೆ. ನಾವು ರೈತರು ಬೆಳೆದ ಬೆಳೆಯನ್ನು ಕಡಿಮೆ ಬೆಲೆಗೆ ಮಾಡಿ ನಷ್ಟ ಮಾಡಿಕೊಳ್ಳವಂತಾಗಿದೆ ಎಂದು ಹೇಳಿದರು. ಒಂದು ಕಡೆ ರೈತರು ದೇಶದ ಬೆನ್ನಲುಬು ಎಂದು ಹೇಳುವ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ರೈತರ ಬೆನ್ನು ಮುರಿಯುವಂತ ಕೆಲಸ ಮಾಡುತ್ತಿದ್ದಾರೆಂದು ಆರೋಪಿಸಿದರು.

ರೈತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಇದೇ ದಿ.24 ರಂದು ಹಳೆ ಜಿಲ್ಲಾಧಿಕಾರಿ ಕಛೇರಿ ಮುಂದು ಬೃಹತ ಪ್ರತಿಭಟನೆ ನಡೆಸಲಾಗುವುದು.

ಎಲ್ಲಾ ರೈತ ಬಂಧುಗಳು,ಪ್ರಗತಿಪರರು ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.ಈ ಸಂದರ್ಭದಲ್ಲಿ ಗೌವಾಧ್ಯಕ್ಷ ಲಕ್ಷ್ಮಣಗೌಡ ಕಡಂದೊಡ್ಡಿ, ನರಸಪ್ಪ, ಹುಲಗಪ್ಪ,ರಮೇಶ,ವೀರ 'ೇಶಗೌಡ,ತಿಮ್ಮಪ್ಪ, ಚಂದ ಸಾಬ್ ಉಪಸ್ಥಿತರಿದ್ದರು.

# ಗರ್ಭಿಣಿಯನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸಿದ ಪ್ರಕರಣ: ತಜ್ಞ ವೈದ್ಯರಿಗೆ ಕಾರಣ ಕೇಳಿ ನೋಟಿಸ್

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಲಿಂಗಸುಗೂರು ತಾಲೂಕಿನ ಅನ್ವಲ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಸಂಭವಿಸಿದ ಸಾಬಮ್ಮ (ಗಂಡ: ಸಂತೋಷ್) ಅವರ ತಾಯಿ ಮರಣ ಪ್ರಕರಣಕ್ಕೆ ಸಂಬಂಧಿಸಿ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತೀವ್ರ ಗಂಭೀರವಾಗಿ ಗಮನ ಹರಿಸಿದ್ದು, ಸರ್ಕಾರಿ ಆಸ್ಪತ್ರೆಗೆ ಬದಲಾಗಿ ಗರ್ಭಿಣಿಯನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸಿರುವ ಕುರಿತು ಸಂಬಂಧಿಸಿದ ಸ್ತ್ರೀರೋಗ ತಜ್ಞರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದೆ.ಸೆಪ್ಟೆಂಬರ್ 8, 2025 ರಂದು ಮಾನ್ಯ ಮುಖ್ಯ ಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಯಚೂರು ಅವರ ಅಧ್ಯಕ್ಷತೆಯಲ್ಲಿ ನಡೆದ ತಾಯಿ ಮರಣ ಪರಿಶೀಲನಾ ಸಭೆಯಲ್ಲಿ ಈ ವಿಷಯ ಬಹಿರಂಗವಾಯಿತು. ಸಭೆಯಲ್ಲಿ ಅನ್ವಲ ಪಿಎಚ್‌ಸಿಯಲ್ಲಿ ದಾಖಲಾಗಿದ್ದ ಸಾಬಮ್ಮ ತಾಯಿ ಮರಣ ಪ್ರಕರಣದ ಪರಿಶೀಲನೆಯ ಸಂದರ್ಭದಲ್ಲಿ, ಗರ್ಭಾವಸ್ಥೆ ಸಂದರ್ಭದಲ್ಲಿ ಸ್ಥಾನಿಂಗ್ ಸೇರಿದಂತೆ ಅಗತ್ಯ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸದೆ ಖಾಸಗಿ ಆಸ್ಪತ್ರೆಯಾದ ಶ್ರೀ ಸಾಯಿ ಸ್ಥಾನಿಂಗ್ ಸೆಂಟರ್ ಗೆ ಕಳುಹಿಸಲಾಗಿದೆ ಎಂಬ ಮಾಹಿತಿ ದೊರಕಿತು.ಪಾಲಕರಿಂದ ಕೂಡ ವಿಚಾರಣೆ ನಡೆಸಿದಾಗ, ಎಲ್ಲಾ ಸ್ಥಾನಿಂಗ್‌ಗಳೂ ಖಾಸಗಿ ಆಸ್ಪತ್ರೆಯಲ್ಲೇ ಮಾಡಲಾಗಿದೆ ಎಂಬುದು ತಿಳಿದುಬಂದಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞರು, ಸಾಧನಗಳು ಮತು ಸೇವೆಗಳು ಲಭ್ಯವಿದ್ದರೂ ಖಾಸಗಿ ಚಿಕಿತ್ಸೆಗೆ ಕಳುಹಿಸಿರುವುದರಿಂದ ಇಲಾಖೆಯ ನಿಯಮಾವಳಿಗೆ ಧಕ್ಕೆಯಾಗಿದ್ದು, ಅಭ್ಯಂತರ ಸಂಬಂಧಿತ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಸೂಚಕವಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.ಈ ಹಿನ್ನೆಲೆಯಲ್ಲಿ, "ಸರ್ಕಾರಿ ವೈದ್ಯಕೀಯ ಸೌಲಭ್ಯಗಳನ್ನು ಬಿಟ್ಟು ರೋಗಿಯನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸಲು ಏನು ಕಾರಣ?" ಎಂಬುದರ ಕುರಿತು ಸ್ಪಷ್ಟೀಕರಣವನ್ನು ಮೂವರು (3) ದಿನಗಳಲ್ಲಿ ಸಲ್ಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೂಚನೆ ನೀಡಿದೆ. ಸೂಚನೆ ಪಾಲಿಸದಿದ್ದರೆ ಸಂಬಂಧಿಸಿದ ವೈದ್ಯಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ಇಲಾಖೆಯ ಮೂಲಗಳು ತಿಳಿಸಿವೆ.

# ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿ ಅಡಿಗಲ್ಲು ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ನ,ನಗರದ ಹೊರಹೊಲೆಯ ಏಗನೂರು ಗ್ರಾಮದಲ್ಲಿ ನೂತನ ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ ಅಡಿಗಲ್ಲು ಕಾರ್ಯಕ್ರಮವನ್ನು ಚಿಕ್ಕಸೂಗೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀನಿವಾಸ್ ಏಗನೂರು ಹಾಗೂ ಎಸ್ ಡಿ ಎಸ್ ಎಂಸಿ ಅಧ್ಯಕ್ಷ ವಿರೇಶ ಹಾಗೂ ಸದಸ್ಯರು ಅವರು ನೆರವೇರಿಸಿದರು. ನಂತರ ಶ್ರೀನಿವಾಸ್ ಏಗನೂರು ಮಾತನಾಡಿ, ಸರ್ಕಾರಿ ಶಾಲೆಗೆ ಹೊಸ ಸ್ವರೂಪ ಕೊಡಬೇಕು, ಗುಣಮಟ್ಟದ ಶಿಕ್ಷಣದ ಮೂಲಕ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತೆ ಗ್ರಾಮೀಣ ಮಕ್ಕಳ ಭವಿಷ್ಯ ರೂಪಿಸಲು ಸರಕಾರ ಕನಸು ಕಂಡಿದೆ. ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಶೀಘ್ರವಾಗಿ ಕಟ್ಟಡ ಕಾಮಗಾರಿಯನ್ನು ಯಾವುದೇ ಲೋಪಗಳಿಲ್ಲದೆ ಪೂರ್ಣಗೊಳಿಸಬೇಕೆಂದು ತಿಳಿಸಿದರು. ಈ ಸಂದರ್ಭದಲ್ಲಿ ಊರಿನ ಗ್ರಾಮಸ್ಥರು, ಮುಖಂಡರು, ಶಿಕ್ಷಕರು ಗ್ರಾಮದ ಸದಸ್ಯರು ವಿಶ್ವನಾಥ್, ಅನಿಲ್ ನಾಯಕ , ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚಿತ್ತಾಪುರ: ಉದ್ಯೋಗಿನಿ ಯೋಜನೆಯಡಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನ,2025–26ನೇ ಸಾಲಿನ ಉದ್ಯೋಗಿನಿ ಯೋಜನೆಯಡಿ ವಿವಿಧ ಆದಾಯೋತ್ಪನ್ನ ಹಾಗೂ ವ್ಯಾಪಾರ ಚಟುವಟಿಕೆಗಳನ್ನು ನಡೆಸಲು ಸಹಾಯಧನ ನೀಡಲಾಗುತ್ತಿದ್ದು, ಇದಕ್ಕಾಗಿ ಆಸಕ್ತಿಯುಳ್ಳ ಅರ್ಹ ಮಹಿಳೆಯರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಚಿತ್ತಾಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ. ಆಸಕ್ತಿಯುಳ್ಳ ಮಹಿಳೆಯರು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಸೆಂಟರ್‌ಗಳಲ್ಲಿ ಆನ್‌ಲೈನ್ ಮೂಲಕ 2025ರ ಡಿಸೆಂಬರ್ 15 ರ ಸಂಜೆ 5.30 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಚಿತ್ತಾಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಅಥವಾ ನಿಗಮದ https://kswdc.karnataka.gov.in ವೆಬ್‌ಸೈಟ್‌ಗೆ ಸಂಪರ್ಕಿಸಲು ಕೋರಲಾಗಿದೆ.

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ 17ನೇ ಸಂಸ್ಥಾಪನಾ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 22 ನವೆಂಬರ್ 2025 ರಂದು 17ನೇ ಸಂಸ್ಥಾಪನಾ ದಿನಾಚರಣೆ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಜೀವಿಪರಿಸ್ಥಿತಿ ಹಾಗೂ ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಶ್ರೀನಿವಾಸಲು ಉದ್ಘಾಟಿಸಿದರು.



ಮಾತನಾಡಿದ ಅವರು, ಜೀವನದಲ್ಲಿ ಬರುವ ಬದಲಾವಣೆಗಳು ಮತ್ತು ಸವಾಲುಗಳನ್ನು ಸರಿಯಾದ ರೀತಿಯಲ್ಲಿ ಎದುರಿಸಿ ವಿದ್ಯಾರ್ಥಿಗಳು ತಮ್ಮ ಗುರಿ ತಲುಪಬೇಕೆಂದು ಕರೆ ನೀಡಿದರು. ಗ್ರಂಥಾಲಯವನ್ನು ಜ್ಞಾನ ದೇವಾಲಯದಂತೆ ಕಾಣಬೇಕು, ಸ್ಪರ್ಧೆಯಲ್ಲದೇ ಸ್ವ–ಪ್ರಗತಿಗೆ ಆದ್ಯತೆ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು. ಕೃಷಿ ಕ್ಷೇತ್ರದ ಮಹತ್ವವನ್ನು ಉಲ್ಲೇಖಿಸಿ, "ಕೃಷಿತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ನೀವು ಅದೃಷ್ಟವಂತರಾಗಿದ್ದೀರಿ. ಸಮಾಜವೂ ನಿಮ್ಮ ಸೇವೆಯನ್ನು ನಿರೀಕ್ಷಿಸುತ್ತಿದೆ" ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ ಕುಲಪತಿ ಡಾ. ಎಂ. ಹನುಮಂತಪ್ಪ ಅವರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದೇಶ–ರಾಜ್ಯಗಳ ವಿವಿಧ ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ವಿಶ್ವವಿದ್ಯಾಲಯವು ಇದುವರೆಗೆ ರೈತರಿಗೆ 55 ಹೊಸ ತಳಿಗಳು ಹಾಗೂ 500 ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದ್ದು, 'ಇ–ಸ್ಯಾಪ್' ಸೇರಿದಂತೆ ಹಲವು ಆವಿಷ್ಕಾರಗಳು ದೇಶದಾದ್ಯಂತ ಉಪಯೋಗವಾಗುತ್ತಿದ್ದವೆಂದು ಹೇಳಿದರು. ಈ ವರ್ಷ ವಿಶ್ವವಿದ್ಯಾಲಯ ಸಂಶೋಧಿಸಿದ ನಾಲ್ಕು ತಂತ್ರಜ್ಞಾನಗಳಿಗೆ ಪೇಟೆಂಟ್ ದೊರೆತಿರುವುದನ್ನೂ ಅವರು ಉಲ್ಲೇಖಿಸಿದರು.

ಆಡಳಿತ ಮಂಡಳಿಯ ಸದಸ್ಯ ಶ್ರೀ ಮಲ್ಲಿಕಾರ್ಜುನ ಡಿ. ಅವರು ಸಂಶೋಧನೆಗಳ ಫಲಿತಾಂಶಗಳಲ್ಲಿ ಕೇವಲ 20% ಮಾತ್ರ ರೈತರಿಗೆ ತಲುಪುತ್ತಿರುವುದನ್ನು ಲಕ್ಷ್ಯಕ್ಕೆ ತೆಗೆದುಕೊಂಡು, ತಂತ್ರಜ್ಞಾನ ಅಳವಡಿಕೆಯ ಬಗ್ಗೆ ವಿಶೇಷ ಅಧ್ಯಯನ ಅವಶ್ಯಕತೆ ಇದೆ ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು

ಶಿಸ್ತು ಮತ್ತು ಬದ್ಧತೆಯಿಂದ ಜ್ಞಾನ ಸಂಪಾದಿಸಿ ರೈತರಿಗೆ ಸೇವೆ ಸಲ್ಲಿಸಬೇಕೆಂದರು.

ವಿಶ್ವವಿದ್ಯಾಲಯದ ಪ್ರಥಮ ಕುಲಪತಿ ಡಾ. ಬಿ.ವಿ. ಪಾಟೀಲ್, ಕೃಷಿ ಮಹಾವಿದ್ಯಾಲಯದ ನಿವೃತ್ತ ಡೀನ್ ಡಾ. ಸಿ.ವಿ. ಪಾಟೀಲ್, ಆಡಳಿತ ಮಂಡಳಿಯ ಇನ್ನೊಬ್ಬ ಸದಸ್ಯ ಶ್ರೀ ಮಲ್ಲೇಶ ಕೊಲಿಮಿ ಅವರು ಶುಭಾಶಯ ತಿಳಿಸಿದರು.

ಈ ಸಂದರ್ಭದಲ್ಲಿ ಮಸ್ಕಿ ತಾಲ್ಲೂಕಿನ ಗುಡಿಹಾಳ ಗ್ರಾಮದ ಶ್ರೀ ಶಿವಕುಮಾರ ಪಾಟೀಲ್ ಅವರಿಗೆ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಾಗಿ

"2025ರ ಕೃಷಿರತ್ನ ಪ್ರಶಸ್ತಿ ಹಾಗೂ ಚಿನ್ನದ ಪದಕ" ಪ್ರದಾನಿಸಲಾಯಿತು. ಜೊತೆಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಅತ್ಯುತ್ತಮ ಶಿಕ್ಷಕ, ಸಂಶೋಧನಾ ವಿಜ್ಞಾನಿ, ವಿಸ್ತರಣಾ ವಿಜ್ಞಾನಿ,

ಕ್ಷೇತ್ರ ಅಧೀಕ್ಷಕ, ಸೇವಾ ಸಿಬ್ಬಂದಿ, ಕ್ಷೇತ್ರ ಸಹಾಯಕ ಹಾಗೂ ಅತ್ಯುತ್ತಮ ಕೃಷಿ ಕಾರ್ಮಿಕ ಪ್ರಶಸ್ತಿಗಳನ್ನು ವಿತರಿಸಲಾಯಿತು.

ವಿಶ್ವವಿದ್ಯಾಲಯದ ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಸೇರಿ 600 ಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಕಾಲುವೆ ನೀರು ಹರಿದು ಕೊಯ್ಲಿಗೆ ಬಂದ ತೊಗರಿ ಬೆಳೆ ಹಾನಿ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರ: ನ..–ರಾಂಪೂರ ಏತ್ ನೀರಾವರಿ ಕಾಲುವೆಯ ಡಿಸ್ಟ್ರಿಬ್ಯೂಟರ 6 ರಲ್ಲಿ ಬರುವ ಅಡವಿಬಾವಿ ಕೆಸರಟ್ಟಿ ತಾಂಡಾ ಹತ್ತಿರದ ಉಪ ಕಾಲುವೆಯ ನೀರು ಹರಿದು ಕೊಯ್ಲಿಗೆ ಬಂದ ಸುಮಾರು ಹತ್ತು ಎಕರೆಯಷ್ಟು ತೊಗರಿ ಬೆಳೆ ಹಾನಿಯಾಗಿದೆ.

ತಾಲೂಕಿನ ಈಚನಾಳ ಶಿವಾರದ ಸರ್ವೆ ನಂ 70 ರಲ್ಲಿ ದೊಡ್ಡ ಅಯ್ಯಮ್ಮ ಗಂಡ ಹನಮಾಗೌಡ ಈಚನಾಳ ಇವರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ ತೊಗರಿ ಬೆಳೆ ಈ ಕಾಲುವೆ ನೀರಿನಿಂದಾಗಿ ರೈತನಿಗೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ಕೆ ಬಿ ಜೆ ಏನ್ ಎಲ್

**ಅಧಿಕಾರಿಗಳ ನಿರ್ಲಕ್ಷ :**

ವಿತರಣಾ ಕಾಲುವೆಗಳಿಂದ ಕೆಲವರು ಅಕ್ರಮವಾಗಿ ತಮ್ಮ ಜಮೀನುಗಳಿಗೆ ನೀರು ಹರಿಯಲು ಕಾಲುವೆಗಳಿಗೆ ದೊಡ್ಡ ದೊಡ್ಡ ಪೈಪಗಳನ್ನು ಅಳವಡಿಕೊಂಡಿದ್ದು ಅದೇ ಪೈಪಗಳಿಂದ ಸತತವಾಗಿ ಹರಿದು ಆ ನೀರು ಹೆಚ್ಚಾಗಿ ದ್ದರಿಂದ ತೊಗರಿ ಬೆಳೆದ ಜಮೀನುಗಳಿಗೆ ಹರಿದು ತೆ–ೂಗರಿ ಬೆಳೆ ಹಾನಿಯಾಗಿದ್ದು ಇದಕ್ಕೆ ಕೆಬಿಜೆ ಏನ್ ಎಲ್ ಅಧಿಕಾರಿಗಳ ನಿರ್ಲಕ್ಷ್ಯವೆ ಕಾರಣ ವೆಂದು ಬೆಳೆ ನಷ್ಟಕ್ಕೊಳಗಾದ ಅಯ್ಯಮ್ಮ ಈಚನಾಳ ಅವರು ಆರೋಪಿಸಿದ್ದಾರೆ.

ಪರಿಹಾರ ನೀಡಲು ಅಗ್ರಹ : ಅಕ್ರಮವಾಗಿ ಹಾಕಲಾಗಿದ್ದ ಕಾಲುವೆಗೆ ಪೈಪ ಗಳ ಮೂಲಕ ನೀರು ಹರಿದು ಬಂದು ಅಪಾರ ತೊಗರಿ ಬೆಳೆ ನಷ್ಟವಾಗಿದ್ದು ಕೂಡಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪರಿಹಾರ ನೀಡಬೇಕೆಂದು ಪಿಡ್ಡನಗೌಡ ಈಚನಾಳ ಅಗ್ರಹಿಸಿದ್ದಾರೆ.

# ಸಂಗೀತ ಉತ್ಸವ: ಸಂಗೀತಕ್ಕೆ ರೋಗವಾಸಿ ಮಾಡುವ ಶಕ್ತಿ : ನಾಡೋಜ ಕುಂ. ವೀರಭದ್ರಪ್ಪ

ರಾಯಚೂರು

ಸಂಗೀತದ ನಾದವು ಮನಸ್ಸಿಗೆ ಆನಂದ ನೀಡುವುದರೊಂದಿಗೆ ವ್ಯಕ್ತಿಯ ದೈಹಿಕ–ಮಾನಸಿಕ ರೋಗ ನಿವಾರಣೆಗೆ ಸಹಕಾರಿಯಾಗಿದೆ ಎಂದು ಹಿರಿಯ ಸಾಹಿತಿ ನಾಡೋಜ ಕುಂ. ವೀರಭದ್ರಪ್ಪ ಅಭಿಪ್ರಾಯ ಪಟ್ಟರು.

ವನಸಿರಿ ಪಂ. ಅಂಬಯ್ಯ ನುಲಿ ಸಂಗೀತ ಸಾಂಸ್ಕೃತಿಕ ಸಂಸ್ಥೆ, ರಾಯಚೂರು ಆಯೋಜಿಸಿದ್ದ 3ನೇ ವಾರ್ಷಿಕ ರಾಯಚೂರು ಸಂಗೀತ ಉತ್ಸವ ಹಾಗೂ ನುಲಿ ಸಿರಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅವರು ಮಾತನಾಡಿದರು. ನಗರದಲ್ಲಿನ ಪಂ. ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಶನಿವಾರ ನಡೆದ ಈ ಕಾರ್ಯಕ್ರಮಕ್ಕೆ ಅವರು ಅಧ್ಯಕ್ಷತೆ ವಹಿಸಿದ್ದರು.ವೀರಭದ್ರಪ್ಪ ಅವರು ಮಾತನಾಡುತ್ತಾ, ಗದಗದ ವೀರೇಶ್ವರ ಪುಣ್ಯಾಶ್ರಮವು ರಾಷ್ಟ್ರಕ್ಕೆ ಅನೇಕ ಕಲಾನಿಧಿಗಳನ್ನು ನೀಡಿರುವ ಪವಿತ್ರ ಕೇಂದ್ರವಾಗಿದ್ದು, ದೇಶದ ಸಂಗೀತಗಾರರ ಆರಾಧ್ಯಸ್ಥಳವಾಗಿದೆ ಎಂದರು. ಆಕ್ರಮಣಗಳು, ಬಡತನ ಮತ್ತು ಸಂಕಷ್ಟಗಳನ್ನು ಎದುರಿಸಿದ ರಾಯಚೂರು ಜಿಲ್ಲೆ ಕಲಾತ್ಮಕ ಪ್ರತಿಭೆಗಳ ಜನ್ಮಸ್ಥಳವಾಗಿದೆ. ಅಂತಹ ಹಲವಾರು ಪ್ರತಿಭೆಗಳ ಪೈಕಿ ಚಿದಾನಂದ ನುಲಿ ಅವರ ಹೆಸರನ್ನು ಅವರು ವಿಶೇಷವಾಗಿ ಉಲ್ಲೇಖಿಸಿದರು.ಸಂಗೀತವು ಜೀವನ ಪಾಠಗಳನ್ನು ಕಲಿಸುವ ಮಹತ್ತರ ಮಾಧ್ಯಮವಾಗಿದ್ದು, ಶಾಲಾ ಪಠ್ಯಪುಸ್ತಕಗಳಿಂದ ತೆಗೆದಿರುವ ಪಂಚಾಕ್ಷರಿ ಗವಾಯಿಗಳ ಪಾಠವನ್ನು ಮರುಸ್ಥಾಪಿಸುವಂತೆ ಸರ್ಕಾರದ ಪ್ರತಿನಿಧಿಗಳಿಗೆ ಅವರು ಮನವಿ ಮಾಡಿದರು. ಹಲವು ಶಾಲೆಗಳಲ್ಲಿ ಸಂಗೀತ ಶಿಕ್ಷಕರ ಕೊರತೆ ಗಂಭೀರ ಸಮಸ್ಯೆಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.ಕಾರ್ಯಕ್ರಮದಲ್ಲಿ ಓಂ ಸಾಯಿ ಮಂದಿರದ ಧರ್ಮಾಧಿಕಾರಿ ಸಾಯಿ ಕಿರಣ ಆದೋನಿ ಕೂಡ ಮಾತನಾಡಿದರು.

ಗದುಗಿನ ವಿರೇಶ್ವರ ಪುಣ್ಯಾಶ್ರಮದ ಕಲ್ಲಯ್ಯ ಅಜ್ಜನವರಿಗೆ ತುಲಾಭಾರ ಕಾರ್ಯಕ್ರಮ ನೆರವೇರಿತು.ಈ ಸಂದರ್ಭದಲ್ಲಿ ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ




ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಜಿಲ್ಲೆಯ ರತ್ನಮ್ಮ ದೇಸಾಯಿ ಮತ್ತು ಜಾಫರ್ ಮೋಹಿನುದ್ದೀನ್ ಅವರನ್ನು ಸನ್ಮಾನಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ 2025ರ ನುಲಿ ಸಿರಿ ಪ್ರಶಸ್ತಿಗಳು ಪ್ರದಾನಗೊಂಡವು.ಸಂಸ್ಥೆಯ ಅಧ್ಯಕ್ಷ ಚಿದಾನಂದ ನುಲಿ ಪರಿವಾರದಿಂದ ವೀರಶಿವಾಚಾರ್ಯ ಸ್ವಾಮೀಜಿ, ರವೀಂದ್ರ ಜಲ್ದಾರ್, ಪಂಡಿತ ನರಸಿಂಹ ಲುವಡವಾಟಿ, ಮಾಹಿತಿ ಆಯೋಗದ ಆಯುಕ್ತ ಬಿ.ವೆಂಕಟಿಸಿಂಗ್, ಚನ್ನಪ್ಪ ಪಾಟೀಲ್, ಚಂದ್ರಶೇಖರ ಮಿರ್ಜಾಪೂರ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

# ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದ ಜೀನ್ಸ್ ಘಟಕಗಳು ಸ್ಥಗಿತ: ರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದ, ಸಿ.ಎಂ.ಸಿದ್ದರಾಮಯ್ಯ ಅವರ ನಡೆಯಿಂದ ಇಲ್ಲಿನ 36 ಜೀನ್ಸ್ ಘಟಕಗಳು ಸ್ಥಗಿತಗೊಂಡಿದ್ದು, ರಾತ್ರೋ ರಾತ್ರಿ ಅಧಿಕಾರಿಗಳು ಬೀಗ ಜಡಿದ ಹಿನ್ನೆಲೆಯಲ್ಲಿ ಕಾರ್ಮಿಕರು, ಮಾಲೀಕರ ಸಂಕಷ್ಟ ಹೇಳತೀರದಾಗಿದೆ ಕೂಡಲೇ ಇಲ್ಲಿನ ಜೀನ್ಸ್ ಘಟಕಗಳನ್ನು ಪ್ರಾರಂಭಿಸಿ, ಕಾರ್ಮಿಕರ, ಮಾಲೀಕರ ಹಿತ ಕಾಪಾಡಬೇಕು ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಹೇಳಿದರು. ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕಳೆದ ಸುಮಾರು ದಶಕಗಳಿಂದ ಇಲ್ಲಿನ ಜೀನ್ಸ್ ಉದ್ಯಮವು ಸಾವಿರಾರು ಬಡ ಕಾರ್ಮಿಕರಿಗೆ, ಮಾಧ್ಯಮ ವರ್ಗದ ಕುಟುಂಬಗಳ ಬದುಕಿಗೆ ಆಸರೆಯಾಗಿದೆ. ಬಳ್ಳಾರಿ ನಗರವನ್ನು ದೇಶಾದ್ಯಂತ ಜೀನ್ಸ್ ಹಬ್ ಆಗಿ ರೂಪಿಸಿದ ಇಲ್ಲಿನ 36 ಜೀನ್ಸ್ ಘಟಕಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ರಾತ್ರೋ ರಾತ್ರಿ ಬೀಗ ಜಡಿಸಿದ್ದು, ಇದು ಸಂಪೂರ್ಣ ಕಾರ್ಮಿಕ ವಿರೋಧಿ ನಡೆಯಾಗಿದೆ, ಉದ್ಯಮ ವಿರೋಧಿ ನಡೆಯಾಗಿದೆ.

ಬುಧವಾರ ಬೆಂಗಳೂರು ನಗರದಲ್ಲಿ ಜೀನ್ಸ್ ಘಟಕಗಳಿಗೆ ನೀಡಿದ ನೋಟೀಸ್‌ನ್ನು ಹಿಂಪಡೆದು, ವಿಶೇಷ ಅನುದಾನ ಘೋಷಿಸಿದ ಬಗ್ಗೆ ಮಾಹಿತಿಯಿದೆ. ಇದನ್ನು ಸ್ವಾಗತಿಸುವೆ. ಆದರೆ, ಏಕಾ ಏಕಿ ಅಧಿಕಾರಿಗಳಿಂದ ಘಟಕಗಳಿಗೆ ಬೀಗ ಜಡಿಸಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತ್ ಜೋಡೊ ಯಾತ್ರೆ ವೇಳೆ ಕಾಂಗ್ರೆಸ್ ನ ರಾಹುಲ್ ಗಾಂಧಿ ಅವರು ಬಳ್ಳಾರಿಗೆ ಆಗಮಿಸಿದಾಗ ಹಾಗೂ 2023ರ ಚುನಾವಣೆ ವೇಳೆ, ಬಳ್ಳಾರಿಯಲ್ಲಿ ವಿಶ್ವ ದರ್ಜೆಯ ಜೀನ್ಸ್ ಅಪರೇಲ್ ಪಾರ್ಕ್ ನಿರ್ಮಿಸುವ ಕುರಿತು ಇಲ್ಲಿನ ಜನರಿಗೆ ಭರವಸೆ ನೀಡಿದ್ದರು. ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದರೂ ಇಲ್ಲಿವರೆಗೂ ಯಾವುದೇ ಪ್ರಕ್ರಿಯೆಗಳೇ ನಡೆದಿಲ್ಲ, ಕೇವಲ ಕಾಗದದಲ್ಲಿ ಉಳಿದಿದೆ, ಕಾಂಗ್ರೆಸ್ ಸುಳ್ಳಿನ ಪಕ್ಷ, ಜನವಿರೋಧಿ ಸರ್ಕಾರ ಎಂಬುದು ಸಾಬೀತಾಗಿದೆ ಎಂದು ವಾಗ್ದಾಳಿ ನಡೆಸಿದರು.

ಕೇವಲ ಒಂದೇ ನೋಟಿಸ್ ಗೆ ಜೀನ್ಸ್ ಘಟಕಗಳಿಗೆ ಬೀಗ ಜಡಿಸಿರುವುದು, ಕಾನೂನು ಜಾರಿ ಎನ್ನಲು ಸಾಧ್ಯವಿಲ್ಲ, ಇದು ಕಾರ್ಮಿಕರ ಬಾಯಿಗೆ ಬೀಗ ಹಾಕಿದಂತೆ, ಬಡ ಕಾರ್ಮಿಕರ ಮೇಲೆ ಸರ್ಕಾರ ದೌರ್ಜನ್ಯ ಎಸಗಿದೆ ಎಂದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಸದಾ ಬಳ್ಳಾರಿಯ ಕೈಗಾರಿಕೆ ಉದ್ಯಮಿದಾರರಿಗೆ ಸಾಕಷ್ಟು ಅನುಕೂಲ ಮಾಡಿಕೊಡಲಾಗಿದೆ. ಬಳ್ಳಾರಿಯ ಜೀನ್ಸ್ ಉದ್ಯಮಕ್ಕೆ ಸಹಾಯಧನ, ಸಬ್ಸಿಡಿ, ಸೇರಿ ಮೂಲ ಸೌಕರ್ಯ ಒದಗಿಸಲಾಗಿದೆ. ಕಾರ್ಮಿಕರ ಕಲ್ಯಾಣಕ್ಕೆ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಉದ್ಯಮಕ್ಕೆ ಮೇಲಿಂದ ಮೇಲೆ ಹೊಡೆತ ನೀಡುವ ಮೂಲಕ ಕಾರ್ಮಿಕರಿಗೆ ಅನ್ಯಾಯ ವ್ಯಸಗಿದೆ. ಇರುವ ಕೈಗಾರಿಕೆಗಳನ್ನು ನಾಶ ಮಾಡಿರುವುದೇ ಕಾಂಗ್ರೆಸ್ ಸರ್ಕಾರದ ಸಾಧನೆಯಾಗಿದೆ. ಜೀನ್ಸ್ ಪಾರ್ಕ್ ನಿರ್ಮಾಣ ಮಾಡ್ತೀರಾ ಬಿಡ್ತೀರಾ ಗೊತ್ತಿಲ್ಲ, ಮೊದಲು ಇರುವ ಘಟಕಗಳನ್ನು ಉಳಿಸಿ, ಇದೇ ಉದ್ಯಮವನ್ನು ಆಶ್ರಯಿಸಿದ ಸಾವಿರಾರು ಕುಟುಂಬಗಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಜಿ.ವೆಂಕಟರಮಣ, ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಚೇತನ ವೇಮಣ್ಣ, ಹನುಮಂತ ಕೆ., ಗುಡಿಗಂಟೆ ಹನುಮಂತ, ಕೋನಂಕಿ ತಿಲಕ್ ಕುಮಾರ್, ಮೋತ್ಕರ್ ಶ್ರೀನಿವಾಸ್, ಸುರೇಂದ್ರ ಇತರರಿದ್ದರು.

# ಗ್ಯಾರಂಟಿ ಸಮಿತಿಯಿಂದ ಜಾಗೃತಿ ಅಭಿಯಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸುವ ನಿಟ್ಟಿನಲ್ಲಿ ಮಾನ್ಯ *ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ* ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಟ್ಟಾ ಗ್ರಾಮದ ವಾರ್ಡ್ ನೋ 04 ರಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ, ಗೃಹ ಲಕ್ಷ್ಮಿ ಯೋಜನೆ: ಹಲವು ಮಹಿಳೆಯರಿಗೆ ಬ್ಯಾಂಕ್ ಖಾತೆ ಹಾಗೂ ಆಧಾರ್ ಜೋಡಣೆ (ಓಕಅಖ) ಸಮಸ್ಯೆಯಿಂದ ಹಣ ಜಮಾವಣೆಯಾಗಿರಲಿಲ್ಲ. ಅಂತಹ ಪ್ರಕರಣಗಳನ್ನು ಸಮಿತಿ ಗುರುತಿಸಿ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸಮಸ್ಯೆ ಬಗೆಹರಿಸುತ್ತಿದೆ.

ಅನ್ನಭಾಗ್ಯ ಯೋಜನೆ: ಪಡಿತರ ಚೀಟಿ ತಿದ್ದುಪಡಿಗೆ ಸಂಬಂಧಿಸಿದಂತೆ ಗ್ರಾಮ ಒನ್ ಕೇಂದ್ರಗಳಲ್ಲಿ ಎದುರಾಗುತ್ತಿದ್ದ ತೊಂದರೆಗಳನ್ನು ನಿವಾರಿಸುವಲ್ಲಿ ತಂಡವು ಸಕ್ರಿಯವಾಗಿ ಕೆಲಸ ಮಾಡಿದೆ. ಅಲ್ಲದೆ, ಕಳ್ಳ ಸಾಗಣಿಕೆಯಂತಹ ಪ್ರಕರಣಗಳ ಬಗ್ಗೆಯೂ ನಿಗಾ ವಹಿಸಿ, ಅಧಿಕಾರಿಗಳ ಗಮನಕ್ಕೆ ತರುತ್ತಿದೆ. ಮತ್ತುಶಕ್ತಿ ಯೋಜನೆ, ಗೃಹ ಜ್ಯೋತಿ, ಯುವನಿಧಿ, ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಶಿವಕುಮಾರ ಕುತ್ತಾಬಬಾದ್, ಮುಖಂಡರಾದ ನವಾಜ್ ಖಾನ್, ಪವನ ಬಾಪೂರೆ, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

# ವಾಲ್ಮೀಕಿ ಪ್ರತಿಮೆಯ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

**ಬಳ್ಳಾರಿ:** : ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ನಾರಾ ಭರತ್‌ರೆಡ್ಡಿಯವರು ಮುತುವರ್ಜಿ ವಹಿಸಿ 1 ಕೋಟಿ 20 ಲಕ್ಷ ರೂ.ಗಳ ಮೌಲ್ಯದಲ್ಲಿ ನಿರ್ಮಾಣ ಮಾಡುತ್ತಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆಯ ಉದ್ಘಾಟನಾ ಕಾರ್ಯಕ್ರಮ ನಗರದ ಮಹರ್ಷಿ ವಾಲ್ಮೀಕಿ ವೃತ್ತ (ಎಸ್‌ಪಿ) ದಲ್ಲಿ 2026ರ ಜ.3ರಂದು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಪಕ್ಷಾತೀತವಾಗಿ ವಾಲ್ಮೀಕಿ ಸಮುದಾಯದವರ ಪೂರ್ವಭಾವಿ ಸಭೆ ನಗರದ ಮೋಕಾ ರಸ್ತೆ ಪ್ರದೇಶದಲ್ಲಿರುವ ನಕ್ಷತ್ರ ಹೋಟೇಲ್‌ನ ಸಭಾಂಗಣದಲ್ಲಿ ನಾಳೆ (ನ.24ರಂದು) ಸಂಜೆ 4 ಗಂಟೆಗೆ ಜರುಗಲಿದೆ.

ಶಾಸಕ ನಾರಾ ಭರತ್‌ರೆಡ್ಡಿಯವರು ಸ್ವಯಂ ಪ್ರೇರಿತರಾಗಿ ಸರ್ಕಾರದ ಅನುದಾನ 1.20 ಕೋಟಿ ರೂ.ಗಳ ವೆಚ್ಚದಲ್ಲಿ ಆಕರ್ಷಕವಾಗಿ ನಿರ್ಮಾಣ ಮಾಡುತ್ತಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆಯ ಉದ್ಘಾಟನೆಯನ್ನು ಹಬ್ಬದ ರೀತಿಯಲ್ಲಿ ಆಚರಿಸಲು ಮುಂದಾಗಿದ್ದು ಇದಕ್ಕೆ ಪಕ್ಷಾತೀತವಾಗಿ ವಾಲ್ಮೀಕಿ ಸಮುದಾಯದವರ ಪೂರ್ವಭಾವಿ ಸಭೆಗಳನ್ನು ನಡೆಸಿ ಕಾರ್ಯಕ್ರಮವು ಖಾಸಗಿಯಾಗಿ, ಅಚ್ಚುಕಟ್ಟಾಗಿ, ಅದ್ದೂರಿಯಾಗಿ ಜರುಗಿಸಲು ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದ ಪ್ರಜ್ಞಾವಂತರ, ಪ್ರಬುದ್ಧರ, ಬುದ್ಧಿಜೀವಿಗಳ, ವಿದ್ಯಾವಂತರ ಸಭೆಯನ್ನು ನಾಳೆ ಕರೆದಿದ್ದು ಈ ಸಭೆಯಲ್ಲಿ ವಾಲ್ಮೀಕಿ ಸಮುದಾಯದವರು ಪಕ್ಷಾತೀತವಾಗಿ ಭಾಗವಹಿಸಿ ಮಹರ್ಷಿ ವಾಲ್ಮೀಕಿ ಪ್ರತಿಮೆಯ ಉದ್ಘಾಟನಾ ಸಮಾರಂಭವು ಯಶಸ್ವಿಯಾಗಿ ಜರುಗಲು ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ವಾಲ್ಮೀಕಿ ಸಮುದಾಯದ ಮುಖಂಡರುಗಳು.

# ಸಂವಿಧಾನ ದಿನಾಚರಣೆ ಬೃಹತ್ ಜಾಥ: ವೇದಿಕೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

**ಬಳ್ಳಾರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ನ.26 ರಂದು ಬೆಳಿಗ್ಗೆ 08 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬೃಹತ್ ಜಾಥ, ಬಳಿಕ ನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಾಥಾದಲ್ಲಿ ಸಂವಿಧಾನ ಕುರಿತಂತೆ ರಾಷ್ಟ್ರಧ್ವಜ ಮತ್ತು ಸಂವಿಧಾನದ ಪ್ರಮುಖ ಕಲಂಗಳು, ಭಾಗಗಳು ಪ್ರತಿಬಿಂಬಿಸುವಂತೆ ಹಾಗೂ ಪ್ರಮುಖ ನುಡಿಮುತ್ತುಗಳನ್ನು ಪ್ಲಕಾರ್ಡ್ ನಲ್ಲಿ ಪ್ರದರ್ಶಿಸುವುದರ ಆಕರ್ಷಕ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಶಾಸಕರುಗಳ ಸಮಕ್ಷಮದಲ್ಲಿ ಚಾಲನೆ ನೀಡಲಿದ್ದು, ಜಾಥಾವು ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಹೆಚ್.ಆರ್.ಗವಿಯಪ್ಪವೃತ್ತ, ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಮಾರ್ಗವಾಗಿ ಮಹರ್ಷಿ ವಾಲ್ಮೀಕಿ ಭವನಕ್ಕೆ ತಲುಪಿ ವೇದಿಕೆ ಕಾರ್ಯಕ್ರಮದೊಂದಿಗೆ ಮುಕ್ತಾಯಗೊಳ್ಳಲಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ವಸತಿ ನಿಲಯಗಳ ವಿದ್ಯಾರ್ಥಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದ ಅವರು ತಿಳಿಸಿದ್ದಾರೆ.

# ಮಹಾಪೌರರ ಕಚೇರಿಯಲ್ಲಿ ಪೂಜಾ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

**ಬಳ್ಳಾರಿ:** ಬಳ್ಳಾರಿ ಮಹಾನಗರ ಪಾಲಿಕೆ, ಮಹಾಪೌರರ ಕಚೇ-ರಿಯಲ್ಲಿ ಪೂಜಾ ಕಾರ್ಯಕ್ರಮ ನಾಳೆ (2.240) ಬೆಳಿಗ್ಗೆ 9.45 ಗಂಟೆಗೆ ಜರುಗಲಿದೆ.

ಈ ಪೂಜಾ ಕಾರ್ಯ ಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ ಸಂಸದರು, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರು ಹಾಗೂ 3 ಮಹಾನಗರ ಪಾಲಿಕೆಯ ಸದಸ್ಯರುಗಳು ಮತ್ತು ಸರ್ವ ಪಕ್ಷಗಳ ಮುಖಂಡರುಗಳು, ಕಾರ್ಯಕರ್ತರು, ಅಧಿಕಾರಿ ವರ್ಗದವರು ಭಾಗವಹಿಸಬೇಕೆಂದು ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪನವರು ತಿಳಿಸಿದ್ದಾರೆ.

ನಾಳಿನ ಪೂಜಾ ಕಾರ್ಯಕ್ರಮದಲ್ಲಿ ಸಮಾಜದಲ್ಲಿರುವ ಎಲ್ಲಾ ಸಮುದಾಯಗಳ ಬಂಧುಗಳು, ಸ್ನೇಹಿತರು, ಹಿತೈಷಿಗಳು ಭಾಗವಹಿಸಿ ನನಗೆ ಶುಭ ಕೋರಬೇಕೆಂದು ನೂತನ ಮೇಯರ್ ಹಾಗೂ ಬಳ್ಳಾರಿ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷರು ಆದ ಪೂಜಾರಿ ಗಾದೆಪ್ಪ ಮನವಿ ಮಾಡಿದ್ದಾರೆ.

# ದಾಖಲಾತಿಗಳು ಆನ್‌ಲೈನ್‌ನಲ್ಲಿ ಲಭ್ಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಬಾಗಲಕೋಟೆ ತಹಶೀಲ್ದಾರ ಕಾರ್ಯಾಲಯದ ಅಭಿಲೇಖಾಲಯದ ದಾಖಲಾತಿಗಳನ್ನು ಭೂ ಸುರಕ್ಷಾ ಯೋಜನೆಯಡಿಯಲ್ಲಿ ಸ್ಕಾನ್ ಮಾಡಲಾಗಿದೆ.. ಆದ್ದರಿಂದ ಸಾರ್ವಜನಿಕರಿಗೆ, ರೈತರಿಗೆ ಜೂನ್ ಮಾಹೆಯಿಂದ ಅಭಿಲೇಖಾಲಯದ ದಾಖಲಾತಿಗಳನ್ನು ಗಣಕೀಕರಣ ರೂಪದಲ್ಲಿ ಡಿಜಿಟಲ್ ಸಹಿಯೊಂದಿಗೆ ನೀಡಲಾಗುತ್ತಿದೆ. ಸದರಿ ದಾಖಲೆಗಳನ್ನು ವೆಬ್‌ಸೈಟïhttp:/recordroom.karnataka.in/service4ಮೂಲಕ ನೀಡಲಾಗುತ್ತದೆ ಎಂದು ಬಾಗಲಕೋಟೆ ತಹಶೀಲ್ದಾರ ತಿಳಿಸಿದ್ದಾರೆ.

# ಕುಡಿತಿನಿಯಲ್ಲಿ ಸಮುದಾಯ ಆರೋಗ್ಯ ಕೇಂದ್ರ ನಿರ್ಮಿಸಲು ಸಂಸದರಿಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

**ಬಳ್ಳಾರಿ:** ಇಲ್ಲಿಗೆ ಸಮೀಪದ ಕುಡಿತಿನಿ ಪಟ್ಟಣದ ಮುಖಂಡರು ಬಳ್ಳಾರಿ ಸಂಸದರಾದ ಈ.ತುಕಾರಾಂ ಗೃಹ ಕಛೇರಿ ಸಂಡೂರಿನಲ್ಲಿ ಬೇಟಿಯಾಗಿ 21ನೇ ಮೇಲುಸ್ತುವಾರಿ ಸಭೆಯಲ್ಲಿ ಅನುಮೋದನೆಯಾಗಿದ್ದ ಕುಡತಿನಿ ಸಮುದಾಯ ಆರೋಗ್ಯ ಕೇಂದ್ರವನ್ನು ಕೆಎಂಈಆರ್ಸಿ ಯೋಜನೆ ಅಡಿಯಲ್ಲಿ ಆರ್ಥಿಕ ಇಲಾಖೆ ಒಪ್ಪದಿರುವುದ-ರಿಂದ ಸದರಿ ಪ್ರಸ್ತಾವನೆ ಕೈಬಿಟ್ಟಿರುವುದಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯಿಂದ ನಿರ್ದೇಶನ ನೀಡಿರುವ ಬಗ್ಗೆ ಬಳ್ಳಾರಿ ಸಂಸದರು ಮತ್ತು ಸಂಡೂರು ಶಾಸಕರ ಗಮನಕ್ಕೆ ಪಟ್ಟಣದ ಸಾರ್ವಜನಿಕರು ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಂಸದ ಈ ತುಕಾರಾಂ ಅವರು ಅಧಿಕಾರಿಗಳು ಕುಡತಿನಿ ಪಟ್ಟಣವು ಕೆಎಂ ಈ ಆರ್ಸಿಗೆ ಒಳಪಡದ ಕಾರಣ ಈ ನಿರ್ಧಾರ ಮಾಡಿದ್ದಾರೆ. ಅಲ್ಲದೆ ಕುಡತಿನಿ ಪಟ್ಟಣಕ್ಕೆ ಸಮುದಾಯ ಆರೋಗ್ಯ ಕೇಂದ್ರದ ಅವಶ್ಯಕತೆ ಹಾಗೂ ಅದರ ಸಾದಕ ಬಾದಕಗಳ ಬಗ್ಗೆ ಗಮನಕ್ಕೆ ತಂದು ಶೀಘ್ರವಾಗಿ ಮಂಜೂರು ಮಾಡಿಸುತ್ತೇವೆ. ಜನರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಕ್ರಮಕೊಳ್ಳುವುದಾಗಿ ಇದೆ ವೇಳೆ ಭರವಸೆ ನೀಡಿದರು.

ನಿರ್ಮಾಣ-

ವಕೀಲರು ಹಾಗೂ ಸಾಮಾಜಿಕ ಹೋರಾಟಗಾರಾದ ಟಿ.ಕೆ.ಕಾಮೇಶ ಮಾತನಾಡಿ ಕಳೆದ ಮೂರು ವರ್ಷಗಳಿಂದ ಕುಡತಿನಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೆ ಏರಿಸಿ

ಈ ಭಾಗದ ಹತ್ತಾರು ಹಳ್ಳಿಗಳ ಜನರು ಅನುಭವಿಸುತ್ತಿರುವ ಆರೋಗ್ಯ ಸಮಸ್ಯೆಗಳಿಗೆ ಉತ್ತಮ ಚಿಕಿತ್ಸೆ ತೊರೆಯುವಂತೆ ಮಾಡಲು 25-9-2023ರಲ್ಲಿ ಜನತಾ ದರ್ಶನ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ತೆರಿಗೆ ನಂತರ 30-1-2024 ಪಟ್ಟಣದಲ್ಲಿ ನಡೆದ ಜನತಾ ದರ್ಶನದಲ್ಲಿ ಅಂದಿನ ಶಾಸಕರು ಹಾಗೂ ಇಂದಿನ ಸಂಸದರಾದ ಈ.ತುಕಾರಾಂ ಮತ್ತು ಜಿಲ್ಲಾಧಿಕಾರಿಗಳು ಬಳ್ಳಾರಿ ರವರಿಗೆ ಇತ್ತೀಚೆಗೆ 29-9-2025 ರಂದು ಬಳ್ಳಾರಿಯಲ್ಲಿ ನಡೆದ ಜನತಾ ದರ್ಶನದ ಹಾಲಿ

ಬಿ.ಝಡ್. ಜಿಲ್ಲಾ ಉಸ್ತುವಾರಿ ಸಚಿವರಾದ ಜಮೀರ್ ಅಹಮದ್ ಖಾನ್ ರವರಿಗೆ ಮನವಿ ಸಲ್ಲಿಸಿ ಒತ್ತಾಯಿಸುತ್ತಾ ಬರುತ್ತಿದ್ದೇನೆ ಸರ್ಕಾರ ಒಂದಲ್ಲ ಒಂದು ಕಾರಣದಿಂದ ವಿಳಂಬ ಮಾಡುತ್ತಿದೆ. ಇದ-ರಿಂದ ಕುಡತಿನಿ ಹಾಗೂ ಸುತ್ತಲಿನ ಹತ್ತಾರು ಹಳ್ಳಿಗಳ ಲಕ್ಷಾಂತರ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಕೂಡಲೇ ಸಂಸದರಾದ ಈ.ತುಕಾರಾಂ ಹಾಗೂ ಅನ್ನಪೂರ್ಣ ರವರು ಹೆಚ್ಚು ಮುತುವರ್ಜಿ ವಹಿಸಿ, ಸಮುದಾಯ ಆರೋಗ್ಯ ಕೇಂದ್ರ ಮಂಜೂರು ಮಾಡಿಸಿ ಆಸತ್ರೆಗೆ ಕಾಮಗಾರಿ ಪ್ರಾರಂಬಿಸಲು ಎಲ್ಲಾ ಸಾರ್ವಜನಿಕರ ಪರವಾಗಿ ಆಗ್ರಹಿಸುತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಂ.ತಿಮ್ಮಪ್ಪ, ಅಧ್ಯಕ್ಷರು ಕರ್ನಾಟಕ ರಕ್ಷಣಾ ವೇದಿಕೆ ಕಾವಲು ಪಡೆ ಸಮಾಜ ಸೇವಕ, ನರೇಶ್ . ಮನೋಜ್ ಹಾಗೂ ಇತರರು ಇದ್ದರು.

# ಶೆಟಕಾರ್ ಪ್ರೌಢಶಾಲೆಯಲ್ಲಿ ಕಾನೂನು ಅರಿವು ಕಾರ್ಯಕ್ರಮ ದೌರ್ಜನ್ಯ ನಡೆದರೆ ಗಮನಕ್ಕೆ ತನ್ನಿ



ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆದರೆ ಕೂಡಲೇ ಪಾಲಕರು ಇಲ್ಲವೇ ಪ್ರೀತಿ ಪಾತ್ರರ ಗಮನಕ್ಕೆ ತರಬೇಕು ಎಂದು ಅಕ್ಕ ಪಡೆಯ ಎಎಐ ಸಂಗೀತಾ ಹೇಳಿದರು.

ಇಲ್ಲಿಯ ಚಿದಂಬರ ಶಿಕ್ಷಣ ಸಂಸ್ಥೆಯ ಸಂಚಾಲಿತ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೌರ್ಜನ್ಯದ ಬಗ್ಗೆ ಧ್ವನಿ ಎತ್ತಿದಾಗ ಮಾತ್ರ ದೌರ್ಜನ್ಯಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಉತ್ತಮ ಸ್ಪರ್ಶ, ಕೆಟ್ಟ ಸ್ಪರ್ಶ, ಪೋಕ್ಸೊ ಕಾಯ್ದೆ, ಮಕ್ಕಳ ಸಹಾಯವಾಣಿ 1098 ಕುರಿತು ಮಾಹಿತಿ ನೀಡಿದರು. ಅಕ್ಕ ಪಡೆ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಶ್ರಮಿಸುತ್ತಿದೆ. ಜಿಲ್ಲೆಯ ಮಹಿಳೆಯರ ಆತ್ಮವಿಶ್ವಾಸ ಇಮ್ಮಡಿಗೊಳಿಸಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕ ಲಕ್ಷ್ಮಣ ಪೂಜಾರಿ ಹೇಳಿದರು. ಅಕ್ಕ ಪಡೆಯವರು ಜನರೊಂದಿಗೆ ಬೆರೆತು, ಅವರ ಸಮಸ್ಯೆ ಅರಿತು ಅದಕ್ಕೆ ಪರಿಹಾರ ಕಲ್ಪಿಸಿಕೊಡಲು ಪ್ರಯತ್ನಿಸುತ್ತಿದ್ದಾರೆ. ಅಕ್ಕ ಪಡೆಯಿಂದಾಗಿ ಶಾಲೆಗಳ ಪರಿಸರದಲ್ಲಿ ಪೋಲಿ ಹುಡುಗರ ಕಾಟ ತಪ್ಪಿದೆ ಎಂದು ತಿಳಿಸಿದರು. ಅಕ್ಕ ಪಡೆಯ ನೀಲಮ್ಮ, ಶ್ರೀದೇವಿ ಮತ್ತಿತರರು ಇದ್ದರು. ಅಕ್ಕ ಪಡೆ ಹಾಗೂ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

# ಮೀನುಗಾರಿಕೆ ಆತ್ಮಬಲ ಆತ್ಮವಿಶ್ವಾಸ ಮುಖ್ಯ:ಉಪಮುಖ್ಯಮಂತ್ರಿ

ಬೆಂಗಳೂರು: ಮೀನು ಎಂದರೆ ಲಕ್ಷ್ಮಿ, ನಾವೆಲ್ಲ ರೈತರು, ರೈತರು ಭೂಮಿಯಲ್ಲಿ ಕೃಷಿ ಮಾಡುತ್ತಾರೆ. ಮೀನುಗಾರರು ನೀರಿನಲ್ಲಿ ಕೃಷಿ ಮಾಡುತ್ತಾರೆ ಮೀನುಗಾರರು ಗಂಗೆಯ ಪುತ್ರರು ಎಂದರು. ಮತ್ಸ್ಯಮೇಳ-2025 ಉದ್ಘಾಟನಾ ಕಾರ್ಯಕ್ರಮದಲ್ಲಿ ಬಾಗವಹಿಸಿ ಮಾತನಾಡಿದ ಉಪಮುಖ್ಯಮಂತ್ರಿ ಅವರು ಮೀನುಗಾರಿಕೆಯನ್ನು ಮಾಡಲು ಆತ್ಮಬಲ, ಆತ್ಮವಿಶ್ವಾಸ ಮುಖ್ಯ, ಮೀನುಗಾರರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಕೆಲಸ ಮಾಡುತ್ತಾರೆ. ಮೀನು ಹಿಡಿಯೋದು ಬೇರೆ, ಮೀನನ್ನು ಮಾರಾಟ ಮಾಡೋದು ಬೇರೆ ಎಂದರು.

ಈ ಮೀನುಗಾರಿಕೆಗೆ ಜಾತಿ ಇಲ್ಲ, ನೀತಿ ಮತ್ತು ಚಲ ಆಸಕ್ತಿ ಇರಬೇಕು, ತಾಳ್ಮೆ ಇರಬೇಕು. ಮೀನುಗಾರರು ಶಿಕಾರಿಗೆ ಹೋದಾಗ ಒಂದೇ ದಿನಕ್ಕೆ ಶಿಕಾರಿ ಸಿಗುವುದಿಲ್ಲ. ಮೂರು ದಿನ, ವಾರ ಆದರೂ ಕೂಡ ಒಂದು ಮೀನು ಸಿಗುವುದಿಲ್ಲ ಎಂದು ಮೀನುಗಾರರ ಕಷ್ಟವನ್ನು ವಿವರಿಸಿ ಮೀನುಗಾರರ ಕಷ್ಟವನ್ನು ನಾನು ಅರಿತಿದ್ದೇನೆ. ಮೀನುಗಾರರು ಶ್ರಮ ಜೀವಿಗಳು ಎಂದರು ನಮ್ಮ ಸರ್ಕಾರ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಕೆರೆಗಳಿಗೆ ವಿದ್ಯುತ್ ಶಕ್ತಿಯನ್ನು ಕೊಟ್ಟು, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕೆರೆಗಳನ್ನ ತುಂಬಿಸೋವಂತ ಕೆಲಸ ಮಾಡಿದೆ ಎಂದರು.

# ನೆಹರು ಕ್ರಿಡಾಂಗಣದಲ್ಲಿ ಕ್ರೀಡಾಕೂಟ



ಬೀದರ: ಸ್ಪೋರ್ಟ್ಸ್ ಅಥೋರಿಟಿ ಇಂಡಿಯಾ, ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆ, ಖೇಲೋ ಇಂಡಿಯಾ ಇವರುಗಳ ಸಂಯುಕ್ತಾಶ್ರಯದಲ್ಲಿ ಬೀದರ ಜಿಲ್ಲಾ ಅಥ್ಲೇಟಿಕ್ ಅಸೋಶಿಯೇಷನ್ ಅಧ್ಯಕ್ಷರಾದ ಬಾಬು ವಾಲಿ ಅವರ ಅಧ್ಯಕ್ಷತೆಯಲ್ಲಿ ನಗರದ ನೆಹರು ಕ್ರಿಡಾಂಗಣದಲ್ಲಿ ಆಯೋಜನೆಗೊಂಡ ಅಸ್ಮಿತಾ ಲೀಗ್‌ಗೆ ಬೀದರ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಧ್ವಜಾರೋಹಣ ನಡೆಸಿಕೊಡುವ ಮೂಲಕ ಚಾಲನೆ ನೀಡಿದರು.

ಸುಮಾರು 1500ಕ್ಕೂ ಹೆಚ್ಚು ವಿದ್ಯಾರ್ಥಿಗಳ ನಿರೀಕ್ಷೆ ಇತ್ತು. ಆದರೆ ಆಯಾ ಶಿಕ್ಷಣ 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. 300 ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸುವ ಅಂದಾಜಿತ್ತು ಆದರೆ 500 ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಸ್ಪರ್ಧಿಸಿದರು.

ಈ ಸಂದರ್ಭದಲ್ಲಿ ಭಾಗವಹಿಸಿದ ಕ್ರೀಡಾಪಟ್ಟುಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮತ್ತು ಬಾಳೆಹಣ್ಣು, ಕುಡಿಯುವ ನೀರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಲಾಯಿತು. ಕೊನೆಯಲ್ಲಿ ಕ್ರೀಡಾಪಟ್ಟುಗಳು ಕುಣಿದು ಕುಪ್ಪಳಿಸಿದರು. ಬೀದರ ಜಿಲ್ಲಾ ಅಥ್ಲೇಟಿಕ್ ಅಸೋಶಿಯೇಷನ್ ಅಧ್ಯಕ್ಷರಾದ ಬಾಬು ವಾಲಿ ವಿಜೇತರಿಗೆ ಮೆಡಲ್ ಮತ್ತು ಸರ್ಟಿಫಿಕೇಟ್ ವಿತರಿಸಿದರು. ಈ ಸಂಧರ್ಭದಲ್ಲಿ ಜಯರಾಜ ಖಂಡ್ರೆ, ಬೀದರ ಜಿಲ್ಲಾ ಅಥ್ಲೇಟಿಕ್ಸ್ ಅಸೋಶಿಯೇಷನ್ ಸದಸ್ಯರಾದ ಶಿವರಾಜ ಕಣಜಿ, ನಿವೃತ್ತ ದೈಹಿಕ ಶಿಕ್ಷಕರಾದ ಶ್ರೀನಿವಾಸ ರೆಡ್ಡಿ, ಅಟಲ್ ಬಿಹಾರಿ ವಾಜಪೇಯಿ ಶಾಲೆಯ ಮುಖ್ಯಗುರುಗಳಾದ ಶರಣಪ್ಪ, ಬಬಲು, ರಾಬರ್ಟ್ ವಿಜಯಕುಮಾರ ಪಾಟೀಲ ಯರನಳ್ಳಿ ಉಪಸ್ಥಿತರಿದ್ದರು.

# ಅನ್ಯಾಯ ಅಸತ್ಯ ದಬ್ಬಾಳಿಕೆಯ ವಿರುದ್ಧದ ಹೋರಾಟಗಳಿಗೆ ಸಮಾಜವಾದಿ ಕ್ರಾಂತಿ ಪ್ರೇರಣೆಯಾಗಬೇಕು: ರಾಧಾಕೃಷ್ಣ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಸಮಾಜದಲ್ಲಿನ ಅನ್ಯಾಯ, ಅಸತ್ಯ, ದಬ್ಬಾಳಿಕೆಯ ವಿರುದ್ಧದ ಹೋರಾಟಗಳಿಗೆ ಸಮಾಜವಾದಿ ಕ್ರಾಂತಿ ಪ್ರೇರಣೆಯಾಗಬೇಕು ಎಂದು ಎಸ್ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ರಾಧಾಕೃಷ್ಣ ಉಪಾಧ್ಯ ಹೇಳಿದರು.

ನವೆಂಬರ್ ಮಹಾಕ್ರಾಂತಿಯ 108ನೇ ವಾರ್ಷಿಕೋತ್ಸವದ ಅಂಗವಾಗಿ ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)-(ಎಸ್‌ಯುಸಿಐ(ಸಿ) ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿಂದು ಆಯೋಜಿಸಲಾಗಿದ್ದ ನವೆಂಬರ್ ಮಹಾಕ್ರಾಂತಿಯ 108ನೇ ವಾರ್ಷಿಕ ಸಭೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ರಾಧಾಕೃಷ್ಣ ಉಪಾಧ್ಯ ಅವರು ಮಾತನಾಡಿ, ವಿಶ್ವದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಶೋಷಿತ ವರ್ಗವಾದ ಕಾರ್ಮಿಕ ವರ್ಗವನ್ನು ಅಧಿಕಾರಕ್ಕೆ ತಂದ ಈ ನವೆಂಬರ್ ಮಹಾಕ್ರಾಂತಿಯು ಹಲವು ಪಾಠಗಳನ್ನು ನಮ್ಮ ಮುಂದಿಟ್ಟಿದೆ. 1871ರಲ್ಲಿ ಪ್ಯಾರಿಸ್ ಕಮ್ಯೂನ್ ಮೂಲಕ ಮೊದಲ ಬಾರಿಗೆ ಕಾರ್ಮಿಕ ವರ್ಗವು ಅಧಿಕಾರಕ್ಕೆ ಬರುವ ಪ್ರಯತ್ನ ಮಾಡಿದರೂ ಸಹ ಅದು ಕೆಲವೇ ಕೆಲವು ತಿಂಗಳುಗಳೂ ಉಳಿಯಲಿಲ್ಲ. ಹಳೆಯ ರಾಜ್ಯಯಂತ್ರವನ್ನು ನುಚ್ಚುನೂರು ಮಾಡದೆ ಕೇವಲ ಸುಧಾರಣೆಯ ಮೂಲಕ ಶೋಷಿತ ವರ್ಗದ ಕ್ರಾಂತಿಯನ್ನು ನೆರವೇರಿಸಲಾಗದು ಎಂಬ ಮಾರ್ಕ್ಸ್ ವಾದಿ ಸೈದ್ಧಾಂತಿಕ ತಿಳುವಳಿಕೆಯನ್ನು ಆಚರಣೆಯಲ್ಲಿ ತಂದು ಸಾಬೀತು ಮಾಡಿದ್ದು ನವೆಂಬರ್ ಮಹಾಕ್ರಾಂತಿ ಎಂದು ಹೇಳಿದರು.

ಕ್ರಾಂತಿಯನ್ನು ನೆರವೇರಿಸಲು ಒಂದು ನೈಜ ಕ್ರಾಂತಿಕಾರಿ ಪಕ್ಷದ ಅಗತ್ಯವಿದೆ. ಕಮ್ಯುನಿಸ್ಟ್ ಪಕ್ಷಗಳು ಕ್ರಾಂತಿಯ ಹಾದಿಯಲ್ಲಿ ವಿಘ್ನಗಳನ್ನು ತಂದು ಹಾಕುತ್ತವೆ. ಅವನ್ನೆಲ್ಲ ನಿವಾ-ರಿಸಿಕೊಂಡು ಸರಿಯಾದ ಸಿದ್ಧಾಂತದ ಮೂಲಕ ಮಾತ್ರ ಹಾಗೂ ಸಮರ್ಪಿತ ಕ್ರಾಂತಿಕಾರಿಗಳೊಂದಿಗೆ ಮಾತ್ರ ಕ್ರಾಂತಿಯನ್ನು ನೆರವೇರಿಸಲು ಸಾಧ್ಯ ಸತ್ಯವನ್ನು ನವೆಂಬರ್ ಮಹಾಕ್ರಾಂತಿಯು ಸಿದ್ಧಮಾಡಿದೆ ಎಂದರು.

1898ರಲ್ಲಿ ನೈಜ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸುವ ಪ್ರಯತ್ನದಿಂದ ಆರಂಭಿಸಿ, 1917ರಲ್ಲಿ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸುವವರೆಗೂ ಮತ್ತು ನಂತರವೂ ಸಹ ತಾವೂ ಬದುಕಿರುವವರೆಗೂ ಲೆನಿನ್, ಮತ್ತು ಸ್ಟಾಲಿನ್ ಒಟ್ಟಾಗಿ ನೆರವೇರಿಸಿದ

ಮಹಾನ್ ನವೆಂಬರ್ ಮಹಾಕ್ರಾಂತಿಯು ವಿಶ್ವದ ಹಲವಾರು ಕ್ರಾಂತಿಗಳಿಗೆ ಸ್ಫೂರ್ತಿಯಾಗಿದೆ ಎಂದು ತಿಳಿಸಿದರು.

ಒಂದು ದೇಶದಲ್ಲಿ ನಡೆಯಬೇಕಾದಂತಹ ಕ್ರಾಂತಿಯ ಘಟ್ಟ ಯಾವುದು, ಯಾವ ವರ್ಗವು ಕ್ರಾಂತಿಯನ್ನು ನೆರವೇರಿಸುವುದು. ಯಾವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ವರ್ಗಗಳ ಸಮೀಕರಣ ಹೇಗಿರುತ್ತದೆ. ಬಂಡವಾಳವಾದವು ಹೇಗೆ ಬೆಳೆಯುತ್ತಿದೆ. ಸಾಮ್ರಾಜ್ಯವಾದದ ಉಗಮ ಹೇಗಾಯಿತು, ವಿತಕ್ಕಾಗಿ ಮಾರ್ಕ್ಸ್‌ವಾದವು ಒಂದು ಜಡ್ಡುಗಟ್ಟಿದ ಬದಲಾಗದ ಸಿದ್ಧಾಂತವಲ್ಲ, ನಿರಂತರವಾಗಿ ಬೆಳವಣಿಗೆಯನ್ನು ಹೊಂದುತ್ತಿರುವ ಜೀವಂತ ಸಿದ್ಧಾಂತ ಎಂಬ ವಿಷಯಗಳನ್ನು ಕುರಿತು ಸೈದ್ಧಾಂತಿಕ ತಿಳುವಳಿಕೆಯನ್ನು ಮೂಡಿಸುತ್ತಲೇ ಲೆನಿನ್, ಚೊಚ್ಚಲ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸಿದರು.




ನವೆಂಬರ್ ಮಹಾಕ್ರಾಂತಿಯು ಇಂದಿಗೂ ಸಹ ವಿಶ್ವದ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿಯ ಸೆಲೆಯಾಗಿದೆ. ನಮ್ಮ ಸಮಾಜದಲ್ಲಿ ಮುಂದೆ ಘಟಿಸುವ ಎಲ್ಲ ಕ್ರಾಂತಿಗಳಿಗೂ 108 ವರ್ಷಗಳ ಹಿಂದೆ ಜರುಗಿದ ನವೆಂಬರ್ ಮಹಾಕ್ರಾಂತಿಯು, ಚಿರಂತನ ದಾ-ರಿದೀಪವಾಗಿದೆ. ಇಂದು ಸಮಾಜದಲ್ಲಿನ ಅನ್ಯಾಯ, ಅಸತ್ಯ, ದಬ್ಬಾಳಿಕೆಯ ವಿರುದ್ಧದ ಹೋರಾಟಗಳಿಗೆ ಸಮಾಜವಾದಿ ಕ್ರಾಂತಿ ಪ್ರೇರಣೆಯಾಗಬೇಕೆಂದು ಉಪಾಧ್ಯ ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬಳ್ಳಾರಿ ಜಿಲ್ಲಾ ಸಮಿತಿಯ ಸೆಕ್ರೆಟೆರಿಯೇಟ್ ಸದಸ್ಯರಾದ ಎಂ.ಎನ್. ಮಂಜುಳಾರವರು ಮಾತನಾಡುತ್ತಾ, ರಷ್ಯಾದ ಸಮಾಜವಾದಿ ಕ್ರಾಂತಿಯು ಆ ದೇಶದ ದುಡಿಯುವ ಜನರಿಗಷ್ಟೇ ಅಲ್ಲದೆ, ಜಗತ್ತಿನ ಎಲ್ಲ ಶೋಷಿತ ಜನರ ಕಗ್ಗತ್ತಲಿನ ಬದುಕಿನಲ್ಲಿ ಭರವಸೆಯ ಕಿರಣಗಳನ್ನು ಮೂಡಿಸಿತು. ಲೆನಿನ್ ಮತ್ತು ಸ್ಟಾಲಿನ್ ನೆರವೇರಿಸಿದ ನವೆಂಬರ್ ಮಹಾಕ್ರಾಂತಿಗೆ ಈಗ 108 ವರ್ಷಗಳು ತುಂಬಿವೆ. ವಿಶ್ವದಾದ್ಯಂತ ಕಾರ್ಮಿಕ ವರ್ಗಕ್ಕೆ ಇಂದಿಗೂ ಸಹ ಅದು ಮಹಾ ಸ್ಫೂರ್ತಿಯ ಘಟನೆಯಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮವನ್ನು ಪಕ್ಷದ ಕಛೇರಿಯಲ್ಲಿ ಸಂಘಟಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಗರದ ನಾನಾ ಬಡಾವಣೆಗಳಿಂದ ಪಕ್ಷದ ಬೆಂಬಲಿಗರು, ಹಿತೈಷಿಗಳು ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವೇದಿಕೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಗೋವಿಂದ್, ಕೆ. ಎಂ. ಈಶ್ವರಿ, ವಿಜಯಲಕ್ಷ್ಮೀ ಮತ್ತಿತರರು ಭಾಗವಹಿಸಿದ್ದರು.

### ಬಾಗಲಕೋಟೆಯಲ್ಲಿ ರಾಷ್ಟ್ರೀಯ ಏಕತಾ ನಡಿಗೆ

# ರಾಷ್ಟ್ರದ ಐಕ್ಯತೆ, ಸಮಗ್ರತೆ ಕಾಪಾಡುವುದು ಎಲ್ಲರ ಕರ್ತವ್ಯ : ನಾರಾಯಣಸ್ವಾಮಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ರಾಷ್ಟ್ರದ ಐಕ್ಯತೆ, ಸಮಗ್ರತೆ ಮತ್ತು ಭದ್ರತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಚಲುವಾದಿ ನಾರಾಯಣಸ್ವಾಮಿ ಹೇಳಿದರು.

ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಭಾರತ ಸರಕಾರದ ಯವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ವತಿಯಿಂದ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್‌ರ 150 ನೇ ಜನ್ಮದಿನ ಅಂಗವಾಗಿ ನಡೆದ ಏಕತಾ ನಡಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಏಕತಾ ಅಭಿಯಾನದ ಮುಖ್ಯ ಉದ್ದೇಶ ರಾಷ್ಟ್ರಪ್ರೇಮವನ್ನು ಉತ್ತೇಜಿಸುವುದು, ನಾಗರಿಕರಲ್ಲಿ ಜವಾಬ್ದಾರಿಯ ಮನೋಭಾವವನ್ನು ಬಿತ್ತುವುದು, ಯುವಕರಲ್ಲಿ ರಾಷ್ಟ್ರೀಯ ಏಕತೆಯ ಆತ್ಮವನ್ನು ಬಲಪಡಿಸುವುದಾಗಿದೆ, ಸರ್ದಾರ ವಲ್ಲಭಭಾಯಿ ಪಟೇಲ್‌ರವರ ದೂರದೃಷ್ಟಿ ಮತ್ತು ಕಾರ್ಯಕ್ಷಮತೆಯಿಂದ ಸಾಧಿಸಿದ ರಾಷ್ಟ್ರೀಯ ಏಕೀಕರಣದ ಸ್ಫೂರ್ತಿಯನ್ನು ಎಲ್ಲರೂ ಅಳವಡಿಸಿಕೊಳ್ಳೋಣ ಎಂದು ಚಲವಾದಿ ಹೇಳಿದರು.

ವಿಧಾನ ಪರಿಷತ್ತ ಸದಸ್ಯೆ ಭಾರತಿ ಶೆಟ್ಟಿ ಮಾತನಾಡಿ, ಜಾತಿ ಧರ್ಮಗಳನ್ನು ಮರೆತು ಎಲ್ಲರೂ ಭಾರತಾಂಬೆಯ ಮಕ್ಕಳಂತೆ ಬಾಳಬೇಕು. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬದುಕಿನ ತತ್ವಗಳು ಭಾರತೀಯರಿಗೆ ಸದಾ ಸ್ಫೂರ್ತಿಯ ಚಿಲುಮೆಯಾಗಿವೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸದ ಪಿ.ಸಿ.ಗದ್ದಿಗೌಡರ, ದೇಶದ ಸ್ವಾತಂತ್ರ್ಯ ಅಖಂಡ ಭಾರತದ ಕನಸನ್ನು ಕಟ್ಟಿ, ದೇಶದ ಐಕ್ಯತೆಗೆ ಶ್ರಮಿಸಿದವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇಶಕ್ಕೆ ಮಾದರಿಯಾಗಿದ್ದು, ತಮ್ಮ ಉಕ್ಕಿನ ನಡೆಯಿಂದ ಉಕ್ಕಿನಂತ ಭಾರತ ನಿರ್ಮಾಣ ಮಾಡಿದ ಶ್ರೇಯಸ್ಸು ಸರದಾರ ವಲ್ಲಭಾಯಿ ಪಟೇಲರದ್ದಾಗಿದೆ, ಅವರ ಸ್ಮರಣೆಗಾಗಿ ಇಂದು ದೇಶದಾದ್ಯಂತ ಏಕತಾ ನಡೆಗೆ ಆಯೋಜಿಸಿದ್ದು, ನಮ್ಮ ಯುವಕರಲ್ಲಿ ಇದರಿಂದ ದೇಶಾಭಿಮಾನ ಬೆಳಸಿಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ತಿನ ಸದಸ್ಯ ಹನಮಂತ ನಿರಾಣಿ, ಶಾಸಕ ಸಿದ್ದು ಸವದಿ, ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ಸಂಚಾಲಕ ಮಲ್ಲಯ್ಯ ಮೂಗನೂರಮಠ, ಮೇರಾ ಯುವ ಭಾರತದ ಜಿಲ್ಲಾಧಿಕಾರಿಗಳಾದ ಗೌತಮ ರೆಡ್ಡಿ, ಎನ್.ಎಸ್.ಎಸ್ ಜಿಲ್ಲಾ ನೋಡಲ್ ಅಧಿಕಾರಿ ಡಾ.ಮಾರುತಿ ಪಾಟೋಳಿ ಉಪಸ್ಥಿತರಿದ್ದರು.

ಅನ್ನಪೂರ್ಣ ಪ್ರಾರ್ಥಿಸಿದರು. ಮಾರುತಿ ಪಾಟೋಳಿ ಸ್ವಾಗತಿಸಿದರು. ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿ, ವಂದಿಸಿದರು. ಸರ್ದಾರ್ ವಲ್ಲಭಭಾಯಿ ಪಟೇಲ್‌ರ 150 ನೇ ಜನ್ಮದಿನ ಅಂಗವಾಗಿ ರಾಷ್ಟ್ರೀಯ ಏಕತಾ ದಿವಸದ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಇದಕ್ಕೂ ಮೊದಲು ವಿದ್ಯಾಗಿರಿಯ ಬಸವೇಶ್ವರ ಇಂಜನಿಯರಿಂಗ ಕಾಲೇಜು ವೃತ್ತದಿಂದ ಪ್ರಾರಂಭವಾದ ಏಕತಾ ನಡಿಗೆ ನವನಗರದ ಕಾಳಿದಾಸ ವೃತ್ತ, ಜಿಲ್ಲಾ ಆಸ್ಪತ್ರೆ, ನಗರಸಭೆ ವೃತ್ತ, ಜಿಲ್ಲಾ ಕ್ರೀಡಾಂಗಣ ಮಾರ್ಗವಾಗಿ ಮುಚಖಂಡಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಮಾವೇಶಗೊಂಡಿತು.

# ಜಮಖಂಡಿ ಎಕ್ಸಲೆಂಟ್ ಕೋಚಿಂಗ್ ಸೆಂಟರಗೆ ಬೀಗ ಜಿಲ್ಲೆಯ ಅನಧಿಕೃತ ಕೋಚಿಂಗ್ ಸೆಂಟರ್ ಮುಚ್ಚಲು ಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳಲ್ಲಿ ಮಕ್ಕಳು ಅಧ್ಯಯನ ಮಾಡುವದು ಕಂಡುಬಂದಲ್ಲಿ ಸಂಬಂಧಿಸಿದವರ ಮೇಲೆ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ತಿಳಿಸಿದ್ದಾರೆ.

ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿರುವ ಅವರು, ಜಮಖಂಡಿ ವಲಯದಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಎಕ್ಸಲೆಂಟ್ ಕೋಚಿಂಗ್ ಸೆಂಟರ್‌ಗೆ ಭೇಟಿ ನೀಡಿದ ಸಮಯದಲ್ಲಿ ಕೋಚಿಂಗ್ ಸೆಂಟರ್ ಮುಖ್ಯಸ್ಥ ರಮೇಶ ಕೋರಿ ಅವರನ್ನು ವಿಚಾರಿಸಲಾಗಿ ಕೋಚಿಂಗ್ ಸೆಂಟರ್‌ನಲ್ಲಿ 4 ಮತ್ತು 5 ನೇ ತರಗತಿಯ ಸುಮಾರು 30 ಮಕ್ಕಳು ಅಧ್ಯಯನ ಮಾಡುತ್ತಿದ್ದು, ಈ ಮಕ್ಕಳು ನವೆಂಬರ 13 ರಂದು ರಾತ್ರಿ ಸಮಯದಲ್ಲಿ ದೋಷಪೂರಿತ ಆಹಾರ ಸೇವಿಸಿ ಅಸ್ವಸ್ಥರಾಗಿ ನಂತರ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಸುರಕ್ಷಿತವಾಗಿ ಮನೆಗೆ ತೆರಳಿರುತ್ತಾರೆ.

ಈ ಹಿನ್ನಲೆಯಲ್ಲಿ ಈ ಕೋಚಿಂಗ್ ಸೆಂಟರ್ ಮುಚ್ಚಲಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿನ ಎಲ್ಲ ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ಇಂದಿನಿಂದಲೇ ಮುಚ್ಚಲು ತಿಳಿಸಿದೆ. ಶಾಲಾ ಅವಧಿಯಲ್ಲಿ ಎಲ್ಲ ಮಕ್ಕಳು ದಾಖಲಾತಿ ಹೊಂದಿರುವ ಶಾಲೆಯಲ್ಲಿಯೆ ಅಧ್ಯಯನ ಮಾಡುತ್ತಿರುವ ಬಗ್ಗೆ ಎಲ್ಲ ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲಾ ಮುಖ್ಯೋಪಾಧ್ಯಾಯರು ಕ್ರಮವಹಿಸಬೇಕ. ಇಲ್ಲವಾದಲ್ಲಿ ಯಾವ ಶಾಲೆಯಿಂದ ಮಕ್ಕಳು ಕೋಚಿಂಗ್ ಕೇಂದ್ರಕ್ಕೆ ಹೋಗಿರುತ್ತಾರೆ, ಆ ಶಾಲೆಯ ಮುಖ್ಯ ಗುರುಗಳನ್ನು ಜವಾಬ್ದಾರರನ್ನಾಗಿ ಮಾಡಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವದು ಹಾಗೂ ಅನಧಿಕೃತ ಕೋಚಿಂಗ್ ಸೆಂಟರ್ ನಡೆಸುತ್ತಿರುವ ಸಂಸ್ಥೆಯ ಮುಖ್ಯಸ್ಥರ ಮೇಲೆ ಕೂಡ ಅಗತ್ಯ ಕ್ರಮವಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪಾಲಕರು, ಸಾರ್ವಜನಿಕರು ತಕ್ಷಣದಿಂದ ಅನಧಿಕೃತ ಕೊಚಿಂಗ್ ಸೆಂಟರ್‌ನಲ್ಲಿ ಮಕ್ಕಳನ್ನು ಇರಿಸಿದ್ದಲ್ಲಿ ತಮ್ಮ ಮಕ್ಕಳನ್ನು ಕೋಚಿಂಗ್ ಸೆಂಟರ್‌ಗಳಿಂದ ತಕ್ಷಣವೇ ಕ-ರೆದುಕೊಂಡು ಅವರು ಅಧ್ಯಯನ ಮಾಡುತ್ತಿರುವ ಶಾಲೆಯಲ್ಲಿಯೇ ಅಧ್ಯಯನ ಮಾಡಿಸುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಅನಧಿಕೃತ ಕೋಚಿಂಗ್ ಸೆಂಟರ್‌ಗಳಲ್ಲಿ ಮಕ್ಕಳು ಅಧ್ಯಯನ ಮಾಡುವದು ಕಂಡು ಬಂದಲ್ಲಿ ಸಂಬಂಧಿಸಿದವರ ಮೇಲೆ ತಕ್ಷಣವೇ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ಜಮಖಂಡಿ ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಸಿಇಟಿ ಸಹ ನಿರ್ದೇಶಕರು, ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ಜಂಟಿಯಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಭ್ರಮದ ಕಾರ್ತಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಶನಿವಾರ ಸಂಜೆ ಮಾರುತೇಶ್ವರ ದೇವರ ಕಾರ್ತಿಕೋತ್ಸವ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ಮಾರುತೇಶನಿಗೆ ಅಭಿಷೇಕ, ಎಲೆಪೂಜೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ಭಕ್ತರಿಂದ ನೈವೇದ್ಯ ಸಮರ್ಪಣೆ ಕಾರ್ಯಕ್ರಮಗಳು ಜರುಗಿದವು. ಸಂಜೆ ನಡೆದ ಕಾರ್ತಿಕೋತ್ಸವದಲ್ಲಿ ಭಕ್ತ ಸಮೂಹ ಎಣ್ಣೆ ದೀಪ ಹಚ್ಚಿ ಭಕ್ತಿ ಸಮರ್ಪಿಸಿ ಸಂಭ್ರಮಿಸಿದರು. ಮಹಿಳೆಯರು, ಮಕ್ಕಳು ದೀಪೋತ್ಸವದಲ್ಲಿ ಪಾಲ್ಗೊಂಡರು. ನಂತರ ಗ್ರಾಮದೇವತೆ ಹಾಗೂ ವೆಂಕಟೇಶ್ವರ ದೇವಸ್ಥಾನಗಳಲ್ಲಿ ಕಾರ್ತಿಕ ಇಳಿಸಲಾಯಿತು. ರಾತ್ರಿಯಿಡಿ ಭಜನಾ ಕಲಾವಿದರಿಂದ ಭಜನೆ ನಡೆಯಿತು. ರವಿವಾರ ಬೆಳಿಗ್ಗೆ ಮಾರುತೇಶ್ವರ ಪಲ್ಲಕ್ಕಿ ಉತ್ಸವ (ಹರಿಶಾವಿ) ಜರುಗಿತು. ಮಹಿಳೆಯರು, ಮಕ್ಕಳು ಪಾಲ್ಗೊಂಡಿದ್ದರು.

# ಇಲಾಳದಲ್ಲಿ ಕಾರ್ತಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ತಾಲೂಕಿನ ಇಲಾಳ ಗ್ರಾಮದಲ್ಲಿ ನ.24 ಸೋಮವಾರ ಶ್ರೀ ಬೊಮ್ಮಲಿಂಗೇಶ್ವರ ದೇವರ ಕಾರ್ತಿಕೋತ್ಸವ ಜರುಗಲಿದೆ.

ಅಂದು ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ನಡೆಯಲಿದ್ದು, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ನಡೆಯುವುದು. ಸಾಯಂಕಾಲ 5.30 ಗಂಟೆಗೆ ದೀಪೋತ್ಸವ ಹಾಗೂ ಮಹಾಮಂಗಳಾರತಿಯ ಪೂಜಾ ಕಾರ್ಯಕ್ರಮಗಳು ಜರುಗುತ್ತವೆ.

ರಾತ್ರಿ 10 ಗಂಟೆಗೆ ಅಖಂಡ ಭಜನೆ ನಡೆಯಲಿದ್ದು, ನ.25 ಮಂಗಳವಾರ ಮುಂಜಾನೆ 11 ಗಂಟೆಗೆ ಪಲ್ಲಕ್ಕಿ ಉತ್ಸವ ಜರುಗುತ್ತದೆ ಎಂದು ದೇವಸ್ಥಾನ ಸಮಿತಿಯ ಪ್ರಕಟಣೆ ತಿಳಿಸಿದೆ.

# ಮಾಸಿಕ ಶರಣ ಚಿಂತನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಹುನಗುಂದ ತಾಲೂಕಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ತಾಲೂಕಾ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಹುನಗುಂದ ಇವರ ಸಹಯೋಗದಲ್ಲಿ ಬಸವಾದಿ ಶಿವಶರಣರ ದಿವ್ಯ ಬೆಳಕಲ್ಲಿ 36ನೆಯ ಮನೆ ಮನಗಳಿಗೆ ವಚನ ಸೌರಭ, ಮಾಸಿಕ ಶರಣ ಚಿಂತನ ಕಾರ್ಯಕ್ರಮ ಹುನಗುಂದ ಪಟ್ಟಣದಲ್ಲಿ ನ.26 ರಂದು ಜರುಗಲಿದೆ.

ಹುನಗುಂದ ನಗರದ ಮಾರುತಿ ನಗರದಲ್ಲಿರುವ ಶ್ರೀಮತಿ ಶರಣಮ್ಮ ಮಹೇಶ ವೀರಸಂಗಪ್ಪ ಅರಳಿ ವಕೀಲರು ಇವರ ಮನೆ ಆವರಣದಲ್ಲಿ ಬುಧವಾರ ಸಂಜೆ 6 ಗಂಟೆಗೆ ಜರುಗಲಿರುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಗುರುಮಹಾಂತ ಸ್ವಾಮಿಗಳು ವಹಿಸಲ್ಲಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಹಾಗೂ ಸಾಹಿತಿ ಮಹಾದೇವ ಬಸರಕೋಡ ಅಧ್ಯಕ್ಷತೆ ವಹಿಸಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಸ್.ಎನ್. ಹಾದಿಮನಿ ಮಹಾ ಶರಣೆ ನೀಲಾಂಬಿಕೆ ಜಯಂತೋತ್ಸವದ ಬಗ್ಗೆ ಮಾತನಾಡಲಿದ್ದಾರೆ.

ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಡಾ.ಶಿವಗಂಗಾ ರಂಜಣಗಿ, ತಾಲೂಕಾ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರಭು ಮಾಲಗಿತ್ತಿಮಠ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ವಿವಿಧ ಸಂಘಟನೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಲಿದ್ದಾರೆ ಎಂದು ತಾಲೂಕ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಸ್.ಎನ್.ಹಾದಿಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಶಿಕ್ಷಣ ದೊರೆಯಲಿ




**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ:** ಸಾಮಾನ್ಯ ಮಕ್ಕಳ ಜೊತೆಗೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಶಿಕ್ಷಣ ದೊರೆಯುವಂತಾಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ ಹೇಳಿದರು.

ಬಾಗಲಕೋಟೆ ನವನಗರದ ಅಗಸ್ತ್ಯ ಕೋರ್ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದ್ದ 2025-26 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿ ತಾಲೂಕಿನ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ಓದುತ್ತಿರುವ ವಿಕಲಚೇತನ ಮಕ್ಕಳ ವೈದ್ಯಕೀಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳ ವಿದ್ಯೆ ಬಗ್ಗೆ ಪೋಷಕರು ಹೆಚ್ಚು ಕಾಳಜಿ ವಹಿಸಬೇಕು. ಪಾಲಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಬಡದಾನಿ ಹೇಳಿದರು.

ಡಿವೈಪಿಸಿ ಎಸ್.ಆರ್.ಓಣಿ, ಕ್ಷೇತ್ರ ಸಮನ್ವಯಧಿಕಾರಿ ಸಿ.ವೈ.ಸಂಗಮ, ತಾಲೂಕಾ ವೈದ್ಯಾಧಿಕಾರಿಗಳಾದ ಡಾ.ಸಂಗಮ, ಡಾ.ತೇಲಿ, ಡಾ.ಪ್ರಸನ್ನ ರೆಡ್ಡಿ, ಮೋಹಿತ ಜಾದವ, ಬಿ.ಆಯ್.ಈ.ಆರ್‌ಟಿಗಳಾದ ಎಸ್.ಎಂ.ಬೆನ್ನೂರ, ಗಿರಿಜಾ ವಾಬನ್ನವರ, ಸುಮಂಗಲಾ ಮೇಟಿ, ರಾಯಪ್ಪ ಜಾಲಿಹಾಳ ಇದ್ದರು.

# ಹಿರಿಯ ಪತ್ರಕರ್ತ ಗೊಂದಿ ನಿಧನಕ್ಕೆ ಕಾನಿಪ ಸಂತಾಪ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಹಿರಿಯ ಪತ್ರಕರ್ತ, ಜಮಖಂಡಿ ಕಾರ್ಯನಿರತ ಪತ್ರಕರ್ತರ ಸಂಘದ ಗೌರವಾಧ್ಯಕ್ಷರು ಹಾಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ, ವಿಕ್ರಾಂತ ಪತ್ರಿಕೆಯ ಸಂಪಾದಕ ಎಂ.ಸಿ.ಗೊಂದಿಯವರ ನಿಧನಕ್ಕೆ ಬಾಗಲಕೋಟೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸಂತಾಪ ವ್ಯಕ್ತಪಡಿಸಿದೆ.

ನವನಗರದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಭಾವಪೂರ್ಣ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಹೇಶ ಅಂಗಡಿ, ಎಂ.ಸಿ.ಗೊಂದಿಯವರು ಪತ್ರಕರ್ತರ ಸಂಘಟನೆಯಲ್ಲಿ ಸದಾ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ಸಂಘದ ಚುನಾವಣೆ ನಡೆಯಬಾರದು, ಎಲ್ಲರೂ ಒಗ್ಗಟ್ಟಾಗಿ ಇರಬೇಕು. ಬಯಸುತ್ತಿದ್ದರು ಎಂದು ಹೇಳಿ, ಅವರ ನಿಧನದಿಂದ ಜಿಲ್ಲೆಯ ಪತ್ರಿಕಾ ರಂಗಕ್ಕೆ ನಷ್ಟವಾಗಿದೆ ಎಂದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ ಗಾಣಿಗೇರ, ಉಪಾಧ್ಯಕ್ಷ ರವಿ ಹಳ್ಳೂರ, ಖಜಾಂಚಿ ಸಂತೋಷ ದೇಶಪಾಂಡೆ, ಕಾರ್ಯಕಾರಿಣಿ ಸದಸ್ಯರಾದ ಬಸವರಾಜ ಹವಾಲ್ದಾರ, ಅಶೋಕ ಶೆಟ್ಟರ, ಅಭಯ ಮನಗೂಳಿ, ಕೃಷ್ಣಾ ಹಾದಿಮನಿ, ಶಬ್ಬೀರಭಾಷಾ ಬಿಜಾಪುರ, ಭೀಮು ಜಮಖಂಡಿ ಹಾಗೂ ಶಶಿಕುಮಾರ ಕೆರೂರ, ವಿಠ್ಠಲ ಬಲಕುಂದಿ, ಆನಂದ ಧಲಂಭಂಜನ, ಪ್ರಕಾಶ ಜಿಗಜಿನ್ನಿ, ಸಿದ್ದು ಕಳ್ಳಿಮನಿ, ಸಂತೋಷ ಮುದೋಳೆ, ಶಾಂತು ಚವ್ಹಾಣ್ ಇನ್ನಿತರರು ಇದ್ದರು.

# ತೋಟಗಾರಿಕೆ ವಿವಿಯ 17ನೇ ಸಂಸ್ಥಾಪನಾ ದಿನಾಚರಣೆ ತಳಿ ಅಭಿವೃದ್ಧಿಯಲ್ಲಿ ಪೋಷಕಾಂಶ, ರುಚಿಗೆ ಮಹತ್ವ ನೀಡಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ತೋಟಗಾರಿಕೆಯಲ್ಲಿ ಗುಣಮಟ್ಟದ ಉತ್ಪಾದನೆಯೆಂದರೆ ಪೌಷ್ಠಿಕತೆಯೇ ಆಗಿದ್ದು, ತಳಿ ಅಭಿವೃದ್ಧಿಯಲ್ಲಿ ಕೇವಲ ಇಳುವರಿಗೆ ಪ್ರಾಮುಖ್ಯತೆ ನೀಡದೇ ಪೋಷಕಾಂಶ ಮತ್ತು ರುಚಿಗಳಿಗೆ ಆದ್ಯತೆ ನೀಡಬೇಕೆಂದ ಯುಎಸ್‌ಎ ಟೆಕ್ಸಾಸ್ ಎ ಮತ್ತು ಎಂ ವಿಶ್ವವಿದ್ಯಾಲಯದ ತರಕಾರಿ ಮತ್ತು ಹಣ್ಣು ಅಭಿವೃದ್ಧಿ ಕೇಂದ್ರದ ನಿರ್ದೇಶಕ ಡಾ.ಭೀಮನಗೌಡ ಪಾಟೀಲ ಹೇಳಿದರು.

ತೋಟಗಾರಿಕೆ ವಿವಿಯ ಪ್ರೇಕ್ಷಾಗೃಹದಲ್ಲಿ ಶನಿವಾರ ಹಮ್ಮಿಕೊಂಡ ತೋಟಗಾರಿಕೆ ವಿವಿಯ 17ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಣ್ಣು ಮತ್ತು ತರಕಾರಿಗಳ ಸೇವನೆಯು ಆರೋಗ್ಯಕರ ಹವ್ಯಾಸವಾಗಿದ್ದು, ಇಂದಿನ ಮಕ್ಕಳಿಗೆ ಇವುಗಳ ಸೇವನೆಯ ಮಹತ್ವವನ್ನು ತಿಳಿಸಿ ಕೊಡುವುದು ಅವಶ್ಯಕವಾಗಿದೆ. ಇಂದು ತೋಟಗಾರಿಕೆ ಕ್ಷೇತ್ರದಲ್ಲಿ ಉತ್ಪಾದನೆಯ ಜೊತೆಗೆ ಹಣ್ಣು ಮತ್ತು ತರಕಾರಿಗಳ ಸೇವನೆಯ ಮಹತ್ವವನ್ನು ಜನಪ್ರಿಯಗೊಳಿಸಬೇಕಿದೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯ ನಿವೃತ್ತ ಅಪರ ನಿರ್ದೇಶಕ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಎಸ್.ವಿ.ಹಿತ್ತಲಮನಿ ಮಾತನಾಡಿ, ಆಹಾರ ಫ್ಯಾಕ್ಟರಿಯಲ್ಲಿ ಬೆಳೆಯುವುದಿಲ್ಲ, ಹೊಲದಲ್ಲಿ ಬೆಳೆಯುತ್ತದೆ. ಅದನ್ನು ಬೆಳೆಯುವ ರೈತ ಅನ್ನದಾತ. ಹೀಗಾಗಿ ರೈತನಿಗೆ ಕೃತಜ್ಞನಾಗಿರಬೇಕು. ರೈತನಿಗೆ ಸಹಾಯ ಹಸ್ತ ನೀಡುವ ತೋಟಗಾರಿಕೆ ವಿವಿ ಸದಾಕಾಲ ಬೆಳೆಯಬೇಕು. ಒಡಂಬಡಿಕೆಗಳನ್ನು ಮಾಡಿಕೊಂಡು ವಿಶ್ವವಿದ್ಯಾಲಯವನ್ನು ಅಭಿವೃದ್ಧಿ ಪಡಿಸಬೇಕು. ರೈತರ ಅಭಿವೃದ್ಧಿಗಾಗಿಯೇ ಮುಂದಿನ ಕೆಲವು ವರ್ಷಗಳಷ್ಟು ಧ್ಯೇಯಗಳನ್ನು ಇಟ್ಟುಕೊಳ್ಳಬೇಕು. ನೀವು ಜಗತ್ತಿಗೆ ಏನು ನೀಡುತ್ತಿರೋ, ಜಗತ್ತು ಮರಳಿ ಅದನ್ನು ನಿಮಗೆ ನೀಡುತ್ತದೆ ಎಂದರು.

ವಿಧಾನ ಪರಿಷತ್ ಶಾಸಕ ಹಾಗೂ ತೋಟಗಾರಿಕೆ ವಿವಿಯ ವ್ಯವಸ್ಥಾಪನಾ ಮಂಡಳಿಯ ಸದಸ್ಯ ಹನಮಂತ ನಿರಾಣಿ ಮಾತನಾಡಿ, ವಿಶ್ವವಿದ್ಯಾಲಯಗಳು ಬೆಳೆದಲ್ಲಿ ರೈತರು ಬೆಳೆಯುತ್ತಾರೆ. ಒಂದು ಕಾಲದಲ್ಲಿ ಆಹಾರ ಉತ್ಪಾದನೆಯಲ್ಲಿ ಕಡಿಮೆಯಾಗಿ ಒಂದು ಹೊತ್ತು ಊಟ ಬಿಡುವ ಪರಿಸ್ಥಿತಿ ಉಂಟಾಗಿ-ತ್ತು. ಆದರೆ ಈಗ ವಿಜ್ಞಾನಿಗಳ ಹೊಸ ಹೊಸ ಸಂಶೋಧನೆಯಿಂದ ಆಹಾರ ಉತ್ಪಾದನೆ ಹೆಚ್ಚಾಗಿದೆ. ರೈತರು ಸುಗಮವಾಗಿ ಕೆಲಸ ಮಾಡುವಂತೆ ಆಗಬೇಕು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಕೆಲಸ ಮಾಡಬೇಕು ಎಂದರು.

ತೋಟಗಾರಿಕೆ ವಿವಿಯ ನಿವೃತ್ತ ಕುಲಪತಿ ಡಾ.ದಂಡಿನ ಮಾತನಾಡಿ, ಆಹಾರ, ಆರೋಗ್ಯ, ಆದಾಯಕ್ಕೆ ತೋಟಗಾರಿಕೆ ಎಂಬ ಹೇಳಿಕೆ ಜನಪ್ರಿಯವಾಗಲಿದೆ. ಮುಂದೊಂದು ದಿನ ಇಡೀ ಜಗತ್ತಿಗೆ ಆಹಾರವನ್ನು ಒದಗಿಸುವ ದೇಶವೆಂದರೆ ಭಾರತ ಎಂದು ಹೆಮ್ಮೆಯಿಂದ ಹೇಳಬೇಕಾಗುತ್ತದೆ ಎಂದರು.

ತೋಟಗಾರಿಕೆ ವಿವಿಯ ವ್ಯವಸ್ಥಾಪನಾ ಮಂಡಳಿಯ ಸದಸ್ಯ ಡಾ.ಎಸ್.ಎನ್.ವಾಸುದೇವನ, ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕೆ ವಿವಿಯ ಕುಲಪತಿ ಡಾ.ವಿಷ್ಣುವರ್ಧನ ಮಾತನಾಡಿದರು.

ತೋಟಗಾರಿಕೆ ವಿವಿಯ ಕುಲಸಚಿವರಾದ ಡಾ.ಜನಾರ್ಧನ ಜಿ, ವಿವಿಯ ಪ್ರಗತಿಯ ಪಕ್ಷಿನೋಟವನ್ನು ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ಸಂಶೋಧನೆಯ ವಿವಿಧ ಪ್ರಕಟಣೆಗಳು ಹಾಗೂ ಅತ್ಯುತ್ತಮ ಸಾಧನೆಗೈದ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿವಿಯ ವ್ಯವಸ್ಥಾಪನಾ ಮಂಡಳಿಯ ಸದಸ್ಯ ಮಹಾಂತೇಶಗೌಡ ಪಾಟೀಲ, ಸಂಶೋಧನಾ ನಿರ್ದೇಶಕ ಡಾ.ಬಿ.ಫಕ್ರುದ್ದಿನ್, ಶಿಕ್ಷಣ ನಿರ್ದೇಶಕ ಡಾ.ಎನ್.ಕೆ.ಹೆಗಡೆ, ಡೀನ್ ಸ್ನಾತಕೋತ್ತರ ಡಾ.ತಮ್ಮಯ್ಯ ಎನ್, ಡೀನ್ ವಿದ್ಯಾರ್ಥಿ ಕಲ್ಯಾಣ ಡಾ.ರಾಮಚಂದ್ರನಾಯ್ಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹಾನಗಲ್ ಶ್ರೀಗಳು ಸಮಾಜದ ಒಳಿತನ್ನು ಬಯಸಿದವರು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಅರಮನೆಗೆ ಸೀಮಿತವಾಗಿದ್ದ ಭಾರತೀಯ ಸಂಸ್ಕೃತಿಯ ಸಂಗೀತ, ಸಾಹಿತ್ಯ ಪರಂಪರೆಯನ್ನು ಎಲ್ಲರ ಮನೆ, ಮನಗಳಿಗೆ ತಲುಪಿಸಿದ ಶ್ರೇಯಸ್ಸು ಹಾನಗಲ್ ಕುಮಾರೇಶ್ವರ ಮಹಾಸ್ವಾಮಿಗಳಿಗೆ ಸಲ್ಲುತ್ತದೆ ಎಂದು ಶಿರೂರಿನ ಶಿವ ಯೋಗಾಶ್ರಮದ ಅಭಿನವ ಸಿದ್ಧಲಿಂಗ ಮಹಾಸ್ವಾಮಿಗಳು ಹೇಳಿದರು.

ಶಿರೂರಿನಲ್ಲಿ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ಲಿಂ.ಸಿದ್ಧಲಿಂಗ ಶ್ರೀಗಳ 55 ನೇ ಪುಣ್ಯಾರಾಧನೆ ನಿಮಿತ್ತ ಶುಕ್ರವಾರದಿಂದ ಆರಂಭಗೊಂಡ ಹಾನಗಲ್ ಗುರುಕುಮಾರ ಸ್ವಾಮೀಜಿಗಳ ಪುರಾಣ ಪ್ರವಚನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿ, ಗುರುಕುಮಾರ ಸ್ವಾಮಿಗಳು ಸಮಾಜದ ಸರ್ವರ ಅಭ್ಯುದಯ ಬಯಸಿದವರು ಎಂದರು. ಶಿವಯೋಗಮಂದಿರ ಹಾಗೂ ವೀರಶೈವ ಮಹಾಸಭಾ ಸ್ಥಾಪನೆಯ ರೂವಾರಿಗಳಾಗಿದ್ದ ಹಾನಗಲ್ ಕುಮಾರ ಸ್ವಾಮೀಜಿ, ಸಂಗೀತ ಪ್ರೀಯರಷ್ಟೇ ಅಲ್ಲದೇ ಕಾವ್ಯ ಹಾಗೂ ಪ್ರಕೃತಿಯನ್ನು ಪ್ರೀತಿಸಿದವರಾಗಿದ್ದು, ಅದಕ್ಕಿಂತಲೂ ಹೆಚ್ಚಾಗಿ ಮಾನವೀಯತೆಯ ಸಾಕಾರ ರೂಪವಾಗಿದ್ದರು ಎಂದ ಸಿದ್ದಲಿಂಗ ಶ್ರೀಗಳು, ಪುರಾಣ, ಪ್ರವಚನಗಳು ಮನುಷ್ಯನ ನೆಮ್ಮದಿಯ ಜೀವನಕ್ಕೆ ಅವಶ್ಯವಾಗಿವೆ ಎಂದು ಹೇಳಿದರು.

ಗುಳೇದಗುಡ್ಡ ಮರಡಿಮಠದ ಕಾಡಸಿದ್ಧೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿ, ಮತ್ತೊಬ್ಬರನ್ನು ಸಂತೋಷಪಡಿಸುವುದೇ ಬದುಕಿನ ಜೀವಾಳ. ಲಿಂ. ಸಿದ್ಧಲಿಂಗ ಶ್ರೀಗಳು ಹಾಗೂ ಲಿಂ.ಹಾನಗಲ್ ಗುರುಕುಮಾರ ಶ್ರೀಗಳು ನೀಡಿದ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಗುಳೇದಗುಡ್ಡದ ಒಪ್ಪತ್ತೇಶ್ವರ ಮಠದ ಅಭಿನವ ಒಪ್ಪತ್ತೇಶ್ವರ ಸ್ವಾಮೀಜಿ ಪುರಾಣ ಪ್ರವಚನ ಮಾಡಿದರು. ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ರಂಗಪ್ಪ ಮಳ್ಳಿ, ಎಸ್.ಬಿ.ಮಾಚಾ, ಅರ್ಜುನ ಅಂಗಡಿ, ಬಸವರಾಜ ಕೋಟಿಕಲ್, ಯಂಕಪ್ಪ ಸಿಂಪಿ, ಅಣ್ಣಯ್ಯ ಎಮ್ಮಿಮಠ, ಮಲ್ಲಿಕಾರ್ಜುನ ಪಲ್ಲೇದ, ಸಂಜಯ ನಡುವಿನಮನಿ, ವೈ.ಜಿ.ಕುಲಕರ್ಣಿ ಇದ್ದರು.

# ಇಂದು ಲೋಕ ಕಲ್ಯಾಣಾರ್ಥಕ್ಕಾಗಿ ಕಲಮೂಡನಲ್ಲಿ ಅತಿರುದ್ರ ಯಾಗಾ ಜರುಗಲಿದೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಕಲ್ಬುರ್ಗಿ ಜಿಲ್ಲೆಯ ಕಮಲಾಪುರ್ ತಾಲೂಕಿನ ಕಲಮೂಡ್ ಗ್ರಾಮದ ಶ್ರೀ ಶ್ರೀ ಶ್ರೀ ದತ್ತ ದಿಗಂಬರ ಮಾಣಿಕೇಶ್ವರ ದೇವಸ್ಥಾನ ಪರಿಶುಗುಡ್ಡದಲ್ಲಿ ಕಲಮೂಡನಲ್ಲಿ ನವೆಂಬರ್ 24ರಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 2ಘಂ-ಟೆಯ ವರೆಗೆ ಲೋಕ ಕಲ್ಯಾಣಾರ್ಥ ಅತಿ ರುದ್ರ ಮಹಾಯಜ್ಞ ಪೂಜೆ, ಸಾಯಂಕಾಲ 7 ಘಂಟೆಗೆ ಆರತಿ ಪೂಜೆ ಜರುಗಲಿದೆ ಎಂದು ಶರಣ ಶಂಕರಲಿಂಗ ಆಶ್ರಮದ ಪೀಠಾಧಿಪತಿಗಳಾದ ಶ್ರೀ ಶ್ರೀ ಅಭಿನವ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರು ಪತ್ರಕರ್ತರೊಂದಿಗೆ ಮಾತನಾಡುತ್ತ ತಿಳಿಸಿದರು. ದೇಶದ ವೆಶಿಷ್ಟತೆ, ಪರಂಪರೆ, ಸಂಸ್ಕೃತಿ ಉಳಿವಿಗೆ ಹಾಗೂ ಲೋಕ ಕಲ್ಯಾಣಾರ್ಥಕ್ಕಾಗಿ ಸುಮಾರು 121 ತ್ರಿಜ-ರಿಂದ ಅತಿ ರುದ್ರ ಯಜ್ಞ, 108 ಅಗ್ನಿಕುಂಡ ಏರ್ಪಡಿಸಲಾಗಿದೆ ಎಂದರು. ಕಾಶಿ ಮತ್ತು ಕೇದಾರದಿಂದ ವೇದ ಶಾಲೆ ಪಾಠದಿಂದ ಕಲಿತ ಮಕ್ಕಳು ಭಾಗವಹಿಸಲಿದ್ದಾರೆ. 18 ವರ್ಷದ ಮಕ್ಕಳಿಗೆ ವೇದ ಪಠಣ ಮಾಡಲು ಆಗಮಿಸಿದ್ದಾರೆ. ಈ ಹೋಮ ಹವನ ಕಾರ್ಯಕ್ರಮದಲ್ಲಿ ಸುಮಾರು 200 ಕ್ಕೂ ಹೆಚ್ಚು ಜೋಡಿಗಳು ಅತಿ ರುದ್ರ ಯಾಗ ಪೂಜೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದರ್ಶನ ಪಡೆದು ಪುನಿತರಾಗಬೇಕೆಂದು ನುಡಿದರು.

## ರಸ್ತೆ ಕೆಳಗೆ ಇಳಿದ ಬಸ್: ತಪ್ಪಿದ ಅನಾಹುತ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಬಸವಕಲ್ಯಾಣ್ ತಾಲ್ಲೂಕಿನ ಯರಂಡಗಿ ಹತ್ತಿರ ಶುಕ್ರವಾರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ರಸ್ತೆ ಕೆಳಗೆ ಇಳಿದು ನಿಂತಿದ್ದು, ಅನಾಹುತ ತಪ್ಪಿದೆ.

ಬಸ್ ಬಸವಕಲ್ಯಾಣ ನಗರದಿಂದ ಮುಡಬಿಗೆ ಹೋಗುತ್ತಿತ್ತು. ಬಸ್ ಎದುರಲ್ಲಿ ಬಂದ ಬೇರೆ ವಾಹನಗಳನ್ನು ತಪ್ಪಿಸುವಾಗ ಈ ಅವಘಡ ಸಂಭವಿಸಿದೆ ಎಂದು ತಿಳಿದುಬಂದಿದೆ.

ರಸ್ತೆ ಕೆಳಗೆ ಇಳಿದ ಬಸ್ ಎದುರಲ್ಲಿ ತಗ್ಗು ಮತ್ತು ಮುಳ್ಳುಕಂಟೆಗಳು ಇದ್ದುದರಿಂದ ಅರ್ಧ ವಾಲಿದ ಬಸ್ ನಿಂತಲ್ಲೇ ನಿಂತಿತು. ಆಗ ಗಾಬರಿಗೊಂಡ ಪ್ರಯಾಣಿಕರು ಕೆಳಗೆ ಇಳಿಯಲು ಆರಂಭಿಸಿದರು. ಗದ್ದಲ ಆಗಿದ್ದರಿಂದ ತುರ್ತು ನಿರ್ಗಮನದ ಬಾಗಿಲು ಸಹ ತೆರೆಯಲಾಯಿತು.

ಒಳಗಿದ್ದ 50ಕ್ಕಿಂತ ಹೆಚ್ಚಿನ ಪ್ರಯಾಣಿಕರು ಹಾಗೂ ಶಾಲಾ ಮಕ್ಕಳು ತಕ್ಷಣ ಕೆಳಗೆ ಇಳಿದರು.

ಯಾರಿಗೂ ಏನೂ ಆಗಿಲ್ಲ.

ಸಾರಿಗೆ ಸಂಸ್ಥೆಯವರು ಮತ್ತು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

## ದ್ವಿತೀಯ ಟೆಸ್ಟ್ ಪಂದ್ಯ

# ದಕ್ಷಿಣ ಆಫ್ರಿಕಾ 489 ರನ್‌ಗೆ ಆಲೌಟ್

ಮಲ್ಲಮ್ಮ ನುಡಿ ವಾರ್ತೆ

**ಗುವಾಹಟಿ:** ಭಾರತ ವಿರುದ್ಧ ನಡೆಯುತ್ತಿರುವ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 489 ರನ್‌ಗಳ ದೊಡ್ಡ ಮೊತ್ತ ಕಲೆ ಹಾಕಿದೆ.

ಎರಡನೇ ದಿನದ ಆಟದ ಮೂರನೇ ಸೆಷನ್‌ನಲ್ಲಿ ಆಫ್ರಿಕಾ ತಂಡ ಆಲೌಟ್ ಆಯಿತು.ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಎಲ್ಲರೂ ಸ್ಥಿರ ಆಟವನ್ನು ತೋರಿ ತಂಡದ ಮೊತ್ತಕ್ಕೆ ಉತ್ತಮ ಕೊಡುಗೆ ನೀಡಿದರು. ಮಧ್ಯಕ್ರಮದಲ್ಲಿ ಸೆನುರನ್ ಮುತ್ತುಸಾಮಿ ಶತಕ (109) ಬಾರಿಸಿದರೆ, ಅದೇ ವೇಳೆ ಮಾರ್ಕೊ ಜಾನ್‌ಸೆನ್ 93 ರನ್ ಗಳಿಸಿ ತಂಡಕ್ಕೆ ಬಿರುಸಿನ ನೆರವು ನೀಡಿದರು.ಉಳಿದಂತೆ ಮರ್ಕರಂ (38), ರ್ಯಾನ್ ರಿಕಲ್ಟನ್ (35), ಟ್ರಿಸ್ಟನ್ ಸ್ಟಬ್ಸ್ (49), ಹಾಗೂ ನಾಯಕ ತೆಂಬಾ ಬವುಮಾ (41) ಪ್ರಮುಖ ರನ್‌ಗಳನ್ನು ಸೇರಿಸಿದರು.

ಭಾರತದ ಪರವಾಗಿ ಕುಲ್ದೀಪ್ ಯಾದವ್ 115 ರನ್‌ಗಳಿಗೆ 4 ವಿಕೆಟ್ ಪಡೆದರೆ, ಜಸ್‌ಪ್ರೀತ್ ಬುಮ್ರಾ, ಮುಹಮ್ಮದ್ ಸಿರಾಜ್ ಮತ್ತು ರವೀಂದ್ರ ಜಡೇಜಾ ತಲಾ 2 ವಿಕೆಟ್‌ಗಳನ್ನು ಪಡೆದರು.

## ಸಿ.ಐ.ಟಿ.ಯು ಜಿಲ್ಲಾ ಸಮಿತಿಯಿಂದ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ:** ಶುಕ್ರವಾರ ರಾತ್ರಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಹಠಾತ್ತನೆ, 4 ಕಾರ್ಮಿಕ ಸಂಹಿತೆ (4 ಲೇಬರಕೋಡ್)ಗಳನ್ನು ಜಾರಿಗೊಳಿಸಿ ದೇಶದ ಕಾರ್ಮಿಕ ವರ್ಗದ ಮೇಲೆ ನರಸಂಹಾರದಂತ ಹಲ್ಲೆ ನಡೆಸಿದ್ದಾರೆ. ಇದು ನರೇಂದ್ರ ಮೋದಿ ಸರ್ಕಾರ ನಡೆಸಿದ ಕಾರ್ಮಿಕರ ಮೇಲಿನ ಯುದ್ಧವಾಗಿದೆ.

ಇದನ್ನು ದೇಶದ ಕಾರ್ಮಿಕ ವರ್ಗ ಅತ್ಯಂತ ಬಲಿಷ್ಠವಾಗಿ ವಿರೋಧಿಸಲಿದೆ.

ಮತ್ತು ಅದನ್ನು ಹಿಂತೆಗೆದುಕೊಳ್ಳುವತನಕ ನಿರ್ಣಾಯಕ ಹೋರಾಟ ಮಾಡುವುದು ಎಂದು ಸಿ.ಐ.ಟಿ.ಯು ಕಲಬುರಗಿ ಜಿಲ್ಲಾ ಸಮಿತಿಯಿಂದ ನಗರದ ತಿಮ್ಮಾಪೂರಿ ಚೌಕಿನಲ್ಲಿ ನಡೆದ ಮಿಂಚಿನ ಪತ್ರಿಭಟನೆ ಉದ್ದೇಶಿಸಿ ಮುಖಂಡರು ತಮ್ಮ ಅಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕವರ್ಗಕ್ಕೆ ಮರಣಶಾಸನವಾಗಿರುವ 4 ಕಾರ್ಮಿಕ ಸಂಹಿತೆಗಳು ಜಾ-ರಿಯಾಗಿದ್ದರಿಂದ ದೇಶಾದ್ಯಂತ ಕಾರ್ಮಿಕರು ಇಂದು ಸಿಡಿಲೆದಿದ್ದಾರೆ. 26-11-2025 ರಂದು ಕಿಶಾನ ಮೋರ್ಚಾ ಮತ್ತು ಇತರ ಜನಪರ ಸಂಘಟನೆಗಳ ಜೊತೆ ಜಂಟಿಯಾಗಿ ದೇಶಾದ್ಯಂತ ಬಹುದೊಡ್ಡ ಪ್ರತಿಭಟನೆ ವ್ಯಕ್ತಪಡಿಸಲು ಈ ಸಂಹಿತೆಗಳನ್ನು ದಹನ ಮಾಡಲಾಗುವುದು ಎಂದು ತಿಳಿಸಲಾಗಿದೆ.

ಸಮಿತಿ ಅಧ್ಯಕ್ಷ ಎಂ.ಬಿ. ಸಜ್ಜನ್, ಉಪಾಧ್ಯಕ್ಷರಾದ ಗೌರಮ್ಮ ಪಾಟೀಲ, ಅಯ್ಯಪ್ಪ ಕರಗಾರ, ಕಾರ್ಮಿಕ ಮುಖಂಡ ಶೇಕಮ್ಮ ಕುರಿ, ನಾಗಯ್ಯಾ ಸ್ವಾಮಿ, ನಾಗರಾಜ, ಅಂಜನಾ, ಜಗದೇವಿ ಸೇರಿದಂತೆ ಇತರರು ಇದ್ದರು.

## ಬುಡಕಟ್ಟು ಸಮುದಾಯ ಆರಂಭಿಕ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖರು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಬುಡಕಟ್ಟು ಸಮುದಾಯಗಳು ಭಾರತದ ಆರಂಭಿಕ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರು ಎಂದು ಮಧ್ಯಪ್ರದೇಶದ ಅಮರಕಂಟಕದ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಪ್ರೊ. ಎಂ.ಟಿ.ವಿ. ನಾಗರಾಜು ಹೇಳಿದರು.

ಅವರು ಸಿಯುಕೆಯಲ್ಲಿ ಮಹಾನ ಭಾರತೀಯ ಬುಡಕಟ್ಟು ನಾಯಕ ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ಜನ್ಮ ದಿನಾಚರಣೆಯ ಮುನ್ನಾದಿನದಂದು ಜನಜಾತಿಯ ಗೌರವ ದಿನಾಚರಣೆಯಲ್ಲಿ ಮಾತನಾಡುತ್ತಿದ್ದರು. ಭಾರತದ ಸ್ವಾತಂತ್ರ್ಯ ಚಳವಳಿಯ ಅಪ್ರಸಿದ್ಧ ವೀರರ ಬಗ್ಗೆ ಮಾತನಾಡಿದ ಅವರು, ಪಹರಿಯಾ ಬುಡಕಟ್ಟು ಜನಾಂಗದ ತಿಲಕ್ ಮಹಂಜಿ, ಒರಿಸ್ಸಾದ ಖಾಂಡಾ ಬುಡಕಟ್ಟು ಜನಾಂಗದ ಡೋರಾ ಬಿಸೋಯಿ ಮತ್ತು ಚಕ್ರ ಬಿಸೋಯಿ, ಸಂತಾಲ್ ಬುಡಕಟ್ಟು ಜನಾಂಗದ ಸಿದ್ದು ಮುರ್ಮು ಮತ್ತು ಕನ್ಹು ಮುರ್ಮು, ಜಾಖರ್‌ಂಡದ ಮುಂಡಾ ಬುಡಕಟ್ಟು ಜನಾಂಗದ ಬಿರ್ಸಾ ಮುಂಡಾ, ಜಾಖರ್‌ಂಡದ ಜಾತ್ರಾ ಭಗತ್ (ಬುಡಕಟ್ಟುಗಳ ಗಾಂಧಿ), ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮ್ ರಾಜು, ಖಮರಾಮ್ ಭೀಮು, ಕನಕಲತಾ ಬರುವಾ, ರಾಣಿ ಗೈಡಿನ್ಲಿಯು (ನಾಗ ರಾಣಿ) ಮುಂತಾದ ಭಾರತದ ವಿವಿಧ ಬುಡಕಟ್ಟು ಸಮುದಾಯಗಳ ಅನೇಕ ಬುಡಕಟ್ಟು ನಾಯಕರು ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ.ಅವರು ಜಲ,ಭೂಮಿಮತ್ತು ಅರಣ್ಯ ನಮ್ಮದು ಎಂದು ಘೋಷಿಸಿದರು ಮತ್ತು ನಾವು ಇದರಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದರು. ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯ ಪಠ್ಯಕ್ರಮದ ಮೂಲಕ ಅವರ ಕಥೆಗಳನ್ನು ಭಾರತದಾದ್ಯಂತ ಕೊಂಡೊಯ್ಯುವ ಅವಶ್ಯಕತೆಯಿದೆ ಎಂದು ಅವರು ಹೇಳಿದರು.

ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಅಧ್ಯಕ್ಷೀಯ ಭಾಷಣ ಮಾಡಿ, ಬುಡಕಟ್ಟು ಸಮುದಾಯಗಳ ಹೋರಾಟ ಎಷ್ಟು ತೀವ್ರವಾಗಿತ್ತು ಎಂದರೆ ಬ್ರಿಟಿಷರು ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಹಿತಾಸಕ್ತಿಗಳನ್ನು ರಕ್ಷಿಸಲು ಹಲವಾರು ಕಾನೂನುಗಳನ್ನು ಜಾರಿಗೆ ತರಬೇಕಾಯಿತು. ಈ ಕಾನೂನುಗಳ ಮೂಲಕ ಸರ್ಕಾರವು ಇತರ ಸಮುದಾಯಗಳು ಬುಡಕಟ್ಟು ಪ್ರದೇಶಗಳಿಗೆ ಪ್ರವೇಶಿಸುವುದನ್ನು ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ನಿಷೇಧಿಸಿತು. ನಮ್ಮ ಸಂವಿಧಾನವು ಭಾರತದ ಎಲ್ಲಾ ಸಮುದಾಯಗಳಿಗೆ ಸಮಾನ ಅವಕಾಶವನ್ನು ನೀಡಿದೆ ಮತ್ತು ಸಂತೋಷದ ವಿಷಯವೆಂದರೆ ನಮ್ಮ ರಾಷ್ಟ್ರಪತಿಗಳು ಬುಡಕಟ್ಟು ಸಮುದಾಯಗಳಿಂದ ಬಂದಿದ್ದಾರೆ. ಡಾ. ಸಂಗಮೇಶ್ ಸ್ವಾಗತಿಸಿದರು, ಡಾ. ಗೌತಮ್ ಡಿ. ಭಗವಾನ್ ಬಿರ್ಸಾ ಮುಂಡಾ ವಿವರಗಳನ್ನು ನೀಡಿದರು, ತೌಂಕ್ಸಪ ಸಂಗಟಮ್ ಮತ್ತು ಅಸ್ತಾ ಪಾಠಕ್ ಕಾರ್ಯಕ್ರಮವನ್ನು ನಿರೂಪಿಸಿದರು, ಡಾ. ಶಮಲಾ ಆರ್. ವಂದಿಸಿದರು. ಜನಜಾತೀಯ ಗೌರವ ದಿವಸದ ಮುನ್ನಾದಿನ ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಪ್ರೊ. ಜಿ. ಆರ್. ಅಂಗಡಿ, ಡಾ. ನಿತಿನ್ ಬಿ., ಡಾ. ಗುರು ಬಾಗೇವಾಡಿ, ಡಾ. ಶಿವಕುಮಾರ್ ಬೆಳ್ಳಿ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಂಭ್ರಮದ ತೆಗ್ಗಿ ಮಾರುತೇಶ್ವರ ಕಾರ್ತಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ತೆಗ್ಗಿ ಗ್ರಾಮದ ಮಾರುತೇಶ್ವರ ಕಾರ್ತಿಕೋತ್ಸವ ರವಿವಾರ ಸಂಭ್ರಮ ಮತ್ತು ಸಡಗರದಿಂದ ಜರುಗಿತು.

ತೆಗ್ಗಿ ಮಾರುತೇಶ್ವರ ದೇವಸ್ಥಾನಕ್ಕೆ ಕಲ್ಯಾಣ ಚಾಲುಕ್ಯರ ಕಾಲದ ಇತಿಹಾಸವಿದೆ. ಪ್ರತಿ ವರ್ಷ ದೀಪಾವಳಿ ಪಾಡ್ಯ ದಿನ ಕಾರ್ತಿಕ ಹಚ್ಚುವ ಪರಂಪರೆ ಪ್ರಾರಂಭವಾಗುತ್ತದೆ. ಕಾರ್ತಿಕ ಮಾಸದ ಐದು ಶನಿವಾರ ಮುಗಿಯುವವರಿಗೆ ಪ್ರತಿನಿತ್ಯ ಸಂಜೆ ಹನುಮಂತ ದೇವರಿಗೆ ಡೊಳ್ಳಿನ ವಾದ್ಯ ಮೇಳಗಳು ಕಳಸದೊಂದಿಗೆ ಮೂರು ಸುತ್ತು ಸೇವೆ ಜರಗುವ ಮೂಲಕ ತಿಂಗಳ ಪೂರ್ಣ ಕಾರ್ತಿಕೋತ್ಸವ ನಡೆಯುತ್ತದೆ.

ಕಾರ್ತಿಕ ಮಾಸದ ಮೊದಲು ಒಂಬತ್ತು ದಿನಗಳ ಕಾಲ ಒಂಬತ್ತು ಬಾಬದವರ ಮನೆಯವರು ಕಾರ್ತಿಕವನ್ನು ಹಚ್ಚುವ ಸಂಪ್ರದಾಯ ನಡೆದುಕೊಂಡು ಬಂದಿರುತ್ತದೆ. ನಂತರ ಭಕ್ತರು ಕಾರ್ತಿಕ ಸೇವೆ ಮಾಡಿಸುತ್ತಾರೆ. ಐದನೇ ಶನಿವಾರ ರಾತ್ರಿಪೂರ್ಣ ಐದು ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ರವಿವಾರ ಮಧ್ಯಾಹ್ನ ಬಾಬದ ಮನೆಯಿಂದ ಬಂಗಾರದ ಕಳಸ ತರುವದರೊಂದಿಗೆ ಸಾವಿರಾರು ಭಕ್ತರ ಸಮೂಹದಲ್ಲಿ ಹೂ, ಕಾಯಿ, ಪಳಾರ, ಗಂಡಾರತಿಗಳ ಮೂಲಕ ಗ್ರಾಮದ ಆರಾಧ್ಯ ದೇವರು ಮಾರುತೇಶ್ವರನ ಕಾರ್ತಿಕೋತ್ಸವ ಇಳಿಸುವ ಸಂಪ್ರದಾಯ ಹಾಗೂ ಪಾಲಕಿ ಸೇವೆಯ ಪರಂಪರೆ ಸಂಭ್ರಮ ಸಡಗರದಿಂದ ಜರುಗಿತು.

## ಪ್ರಮಾಣಪತ್ರಗಳ ಸೇವೆ ನೀಡುವಲ್ಲಿ ತೃತೀಯ ಸ್ಥಾನ ಜಿಲ್ಲಾಧಿಕಾರಿ ಅವರಿಗೆ ಅಭಿನಂದನೆ

ಮಲ್ಲಮ್ಮ ನುಡಿ ವಾರ್ತೆ




ಕಲಬುರಗಿ: ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿ ಸಾರ್ವಜನಿಕರಿಗೆ ವಿವಿಧ ಪ್ರಮಾಣಪತ್ರ ಸೇವೆಗಳನ್ನು ಒದಗಿಸುವಲ್ಲಿ ಕಲಬುರಗಿ ಜಿಲ್ಲೆ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುವ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿ ಬಿ. ಫೌಜಿಯ್ಯಾ ತರನ್ನುಮ್ ಅವರಿಗೆ ಕಂದಾಯ ಇಲಾಖೆಯ ಆಯುಕ್ತ ಮುಲ್ಲೈ ಮುಹಿಲನ್ (ಐಎಎಸ್) ಅಭಿನಂದನಾ ಪತ್ರ ನೀಡಿದ್ದಾರೆ.

ಸೆಪ್ಟೆಂಬರ್ 2025ರಲ್ಲಿ ಕಲಬುರಗಿ ಜಿಲ್ಲೆಯ ನಾಡ ಕಚೇರಿಗಳು ಸ್ವೀಕರಿಸಿದ 26,722 ಅರ್ಜಿಗಳಲ್ಲಿ ಶೇ. 99.96 ರಷ್ಟು ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ವಿಲೇವಾರಿ ಮಾಡಿ 6.64 ಸಿಗ್ಮಾ ಮೌಲ್ಯ ಹಾಗೂ 8.57 ವಿಲೇವಾರಿ ಸೂಚ್ಯಂಕ (ಆುಠಿಥಚಿಟ ಖಟಿಜಜಥ)ಗಳನ್ನು ಸಾಧಿಸಿದೆ. ನಿಗದಿತ ಅವಧಿಗಿಂತ 9.57 ಪಟ್ಟು ವೇಗವಾಗಿ ಕೆಲಸ ನಿರ್ವಹಿಸಿರುವುದು ಶ್ಲಾಘನೀಯವೆಂದು ಆಯುಕ್ತರು ತಮ್ಮ ಅಭಿನಂದನಾ ಪತ್ರದಲ್ಲಿ ಪ್ರಶಂಸಿಸಿದ್ದಾರೆ.

ಈ ಸಾಧನೆಗೆ ಜಿಲ್ಲಾಧಿಕಾರಿಗಳು ತೋರಿದ ನಾಯಕತ್ವ ಮತ್ತು ನಾಡ ಕಚೇರಿಗಳು/ಅಟಲ್‌ಜೀ ಜನಸ್ನೇಹಿ ಕೇಂದ್ರ ಸಿಬ್ಬಂದಿಯ ಕಾರ್ಯತತ್ಪರತೆ ಕಾರಣವೆಂದು ಅವರು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಕಾರ್ಯಕ್ಷಮತೆಯನ್ನು ಮುಂದುವರಿಸುವಂತೆ ಆಶಿಸುತ್ತಾ, ಜಿಲ್ಲಾಧಿಕಾರಿ ಬಿ. ಫೌಜಿಯ್ಯಾ ತರನ್ನುಮ್ ಮತ್ತು ಅವರ ತಂಡಕ್ಕೆ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಪರವಾಗಿ ಆಯುಕ್ತರು ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಕೌಠಾ ಸೇತುವೆ ಮೇಲಿಂದ ಜಿಗಿದ ಯುವಕನಿ ಮುಂದುವರಿದ ಶೋಧ

ಮಲ್ಲಮ್ಮ ನುಡಿ ವಾರ್ತೆ

**ಬೀದರ್:** ಕೌಠಾ ಸೇತುವೆ ಮೇಲಿನಿಂದ ನದಿಗೆ ಶುಕ್ರವಾರ ಸಂಜೆ ಜಿಗಿದಿದ್ದಾನೆ ಎನ್ನಲಾದ ಯುವಕನಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಕುಮಟಿ ಗ್ರಾಮದ ನಿವಾಸಿ ಕೃಷ್ಣ ನಾರಲ್ವಾರ್(30) ಸೇತುವೆ ಮೇಲಿಂದ ನದಿಗೆ ಜಿಗಿದ ಯುವಕ. ಎರಡು ದಿನಗಳಿಂದ ಕೃಷ್ಣರಿಗಾಗಿ ಪೊಲೀಸ್ ಮತ್ತು ಅಗ್ನಿಶಾಮಕ ದಳ ಹುಡುಕಾಟ ನಡೆಸುತ್ತಿದೆ.

ಕ್ಷಯ ರೋಗದಿಂದ ಬಳಲುತ್ತಿದ್ದ ಕೃಷ್ಣ ಕೆಲ ದಿನಗಳಿಂದ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅನಾರೋಗ್ಯ ಕಾರಣ ಮನನೊಂದಿದ್ದ ಅವರು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಎರಡು ದಿನಗಳಿಂದ ಹುಡುಕಾಟ ನಡೆಸುತ್ತಿದ್ದರೂ ಕೃಷ್ಣ ಪತ್ತೆಯಾಗಿಲ್ಲ.

ಇಂದು ಬೆಳಗ್ಗೆಯಿಂದ ಶೋಧಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಸಂತಪುರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಉದ್ಯೋಗ ಮೇಳ 25.ರಂದು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: 2023-24 ಮತ್ತು 2024-25 ನೇ ಶೈಕ್ಷಣಿಕ ವರ್ಷಗಳ ಪದವಿಯಲ್ಲಿ ಕಲಿಕೆ ಜೊತೆ ಕೌಶಲ್ಯ ಕೋರ್ಸನ್ನು ಅಧ್ಯಯನ ಮಾಡಿ, ತೇರ್ಗಡೆ ಹೊಂದಿದ ಗುಲ್ಬರ್ಗಾ ಹಾಗೂ ಬೀದರ್ ವಿಶ್ವವಿದ್ಯಾಲಯಗಳ 26 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳವನ್ನು ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ನಗರದ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ)ದಲ್ಲಿ ದಿನಾಂಕ: 25/11/2025 ರಂದು ಆಯೋಜಿಸಲಾಗಿದೆ.ಸದರಿ ಉದ್ಯೋಗ ಮೇಳದಲ್ಲಿ 25ಕ್ಕೂ ಹೆಚ್ಚು ಬಹುರಾಷ್ಟ್ರೀಯ ಹಾಗೂ ಇನ್ನಿತರ ಕಂಪನಿಗಳು ಭಾಗವಹಿಸುತ್ತಿದ್ದು, ಎರಡೂ ವಿಶ್ವವಿದ್ಯಾಲಯಗಳ ಅಡಿಯಲ್ಲಿನ ಸರ್ಕಾರಿ ಮಹಾವಿದ್ಯಾಲಯಗಳು ಹಾಗೂ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಕಲಬುರಗಿ ಇಲ್ಲಿ ವ್ಯಾಸಂಗ ಮಾಡಿ 2023-24 ಹಾಗೂ 2024-25 ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ ಎಲ್ಲ ವಿದ್ಯಾರ್ಥಿಗಳು ಇದರ ಸದುಪಂ ಯೋಗಪಡಿಸಿಕೊಳ್ಳಬೇಕೆಂದು ಅತಿಥೇಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಸವಿತಾ ತಿವಾರಿ ಅವರು ತಿಳಿಸಿರುತ್ತಾರೆ.

## ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಯ ತರಗತಿಗಳು ಯಶಸ್ವಿ ಆರಂಭ

ಮಲ್ಲಮ್ಮ ನುಡಿ ವಾರ್ತೆ



ರಾಯಚೂರು: ರಾಯಚೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಉಚಿತ ತರಬೇತಿಯ ತರಗತಿಗಳು ನವೆಂಬರ್ 22 ರಿಂದ ಯಶಸ್ವಿಯಾಗಿ ಆರಂಭವಾದವು.

ತರಬೇತಿಯ ಮೊದಲ ದಿನವಾದ ನವೆಂಬರ್ 22ರಂದು ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು, ತರಬೇತಿಗೆ ಆಯ್ಕೆಯಾದ 120 ವಿದ್ಯಾರ್ಥಿಗಳೊಂದಿಗೆ ನೇರ ಸಂವಹನ ನಡೆಸಿದರು. ರಾಯಚೂರು ಜಿಲ್ಲೆ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿರುವ ವಿದ್ಯಾರ್ಥಿಗಳೊಂದಿಗೆ ಅವರು ಮಾತನಾಡಿ ತರಬೇತಿಯ ಅವಧಿ, ತರಬೇತಿಯ ಪಾಠಗಳು, ತರಬೇತಿಯ ಪ್ರತಿದಿನದ ಸಮಯ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಚರ್ಚಿಸಿದರು. ತರಬೇತಿಯ ನೋಡಲ್ ಅಧಿಕಾರಿಗಳು ಆಗಿರುವ ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಪ್ರವೀಣಕುಮಾರ, ವಿವಿಧ ಸಮಿತಿಯಲ್ಲಿರುವ ಅಧಿಕಾರಿಗಳಾದ ಜಿಲ್ಲಾ ಗ್ರಂಥಾಲಯ ಇಲಾಖೆಯ ಅಧಿಕಾರಿಗಳಾದ ಡಾ.ಕಲಾಲ, ನಿರ್ಮಲಾ ಹೆಚ್ ಹೊಸೂರ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ಈರೇಶ್ ನಾಯಕ, ಆಹಾರ ಇಲಾಖೆಯ ಅಧಿಕಾರಿ ನಜೀರ್ ಅಹ್ಮದ್, ಹಟ್ಟಿ ಚಿನ್ನದ ಗಣಿ ಕಂಪನಿಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಕೃಷ್ಣ ಶಾವಂತಗೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ಇಲಾಖೆಯ ಚಂದಪ್ಪ, ಅರಣ್ಯ ಇಲಾಖೆಯ ಮಹೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು ತರಗತಿಯ ಆರಂಭದ ಪ್ರಕ್ರಿಯೆಯ ಬಗ್ಗೆ ಸಮನ್ವಯ ನಡೆಸಿದರು.

ನವೆಂಬರ್ 22ರಂದು ಬೆಳಗ್ಗೆ ವಿದ್ಯಾರ್ಥಿಗಳೊಂದಿಗೆ ನೇರ ಸಂವಹನದ ನಂತರ ತರಬೇತಿಯು ಆರಂಭವಾಯಿತು. ಮೊದಲ ದಿನ ನವೆಂಬರ್ 22ರಿಂದ ಭಾರತೀಯ ಸಂವಿಧಾನ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಶರಣು ಭಾಗೂರ ಅವರು ತರಗತಿ ಆರಂಭಿಸಿದರು. ನವೆಂಬರ್ 23ರಂದು ಸಹ ಪಾಠಗಳು ನಡೆದವು. ನವೆಂಬರ್ 24 ಮತ್ತು ನವೆಂಬರ್ 25ರಂದು ಸಹ ಭಾರತೀಯ ಸಂವಿಧಾನದ ವಿಷಯದ ಮೇಲೆ ಪಾಠಗಳು ನಡೆಯಲಿವೆ.

ನವೆಂಬರ್ 26 ರಿಂದ ನಾಲ್ಕು ದಿನಗಳ ಕಾಲ ಸಾಮಾನ್ಯ ವಿಜ್ಞಾನ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ನಿರಂಜನ ಮೂರ್ತಿ ಟಿ ಅವರು ಪಾಠ ಮಾಡಲಿದ್ದಾರೆ. ನವೆಂಬರ್ 30 ರಿಂದ ಡಿಸೆಂಬರ್ 3ರವರೆಗೆ ಅರ್ಥಶಾಸ್ತ್ರ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಸುನೀಲ್ ರಾಠೋಡ್ ಅವರು ಪಾಠ ಮಾಡಲಿದ್ದಾರೆ. ಡಿಸೆಂಬರ್ 4 ರಿಂದ ಡಿಸೆಂಬರ್ 7ರವರೆಗೆ ಭೂಗೋಳಶಾಸ್ತ್ರ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಅನಿಲ್ ಅವರು ಪಾಠ ಮಾಡಲಿದ್ದಾರೆ. ಡಿಸೆಂಬರ್ 8 ರಿಂದ 11ರವರೆಗೆ ಮಾನಸಿಕ ಸಾಮರ್ಥ್ಯ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಗಿರೀಶ್ ಅವರು ಪಾಠ ಮಾಡಲಿದ್ದಾರೆ.

ಜಿಲ್ಲಾಧಿಕಾರಿಗಳ ಮನವಿ: ಪ್ರತಿಭೆಯು ಪ್ರತಿಯೊಬ್ಬರಲ್ಲೂ ಇರುತ್ತದೆ. ಪರಿಸರ ಮತ್ತು ಪ್ರಯತ್ನದಿಂದ ಗುರಿ ಸಾಧನೆ, ಯಶಸ್ಸು ಸಾಧ್ಯವಾಗುತ್ತದೆ. ರಾಯಚೂರು ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿ, ಕಲಬುರಗಿ, ಬೀದರ, ಬಳ್ಳಾರಿ, ವಿಜಯನಗರ, ಕೊಪ್ಪಳ ಭಾಗದ ವಿದ್ಯಾರ್ಥಿಗಳು ಯಾವುದೇ ಸಾಧನೆಯಲ್ಲಿ ಹಿಂದೆ ಉಳಿದಿಲ್ಲ. ಬಡತನ, ತಿಳಿವಳಿಕೆ ಕೊರತೆಯಿಂದ ಹಿಂದೆ ಬೀಳುವ ರಾಯಚೂರು ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಪರಿಸರ ಮೂಡಿಸುವ ನಿಟ್ಟಿನಲ್ಲಿ ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಬಾವಿ ಉಚಿತ ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಈ ತರಬೇತಿಗೆ ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳು ತರಬೇತಿ ಪೂರ್ಣವಾಗುವವರೆಗೆ ಸಕ್ರಿಯ ಭಾಗಿಯಾಗಿ ಸದುಪಯೋಗಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮನವಿ ಮಾಡಿದ್ದಾರೆ.

ಸಹಾಯಕ ಆಯುಕ್ತರ ಮನವಿ: ರಾಯಚೂರು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಆಯೋಜನೆ ಮಾಡಿರುವ ಈ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಯ ಕಾರ್ಯಕ್ರಮವನ್ನು ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಆಯೋಜನೆ ಮಾಡಿದೆ. ಈ ಕಾರ್ಯಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು ವಿಶೇಷ ಕಾಳಜಿ ವಹಿಸಿ ನಾನಾ ಸಮಿತಿಗಳನ್ನು ರಚಿಸಿ ಹಲವು ದಿನಗಳಿಂದ ಮಾರ್ಗದರ್ಶನ ಮಾಡಿದ್ದಾರೆ. ತಹಸೀಲ್ದಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪ್ರಶ್ನೆ ಪತ್ರಿಕೆ ತಯಾರಿಸುವುದು,

ಪಾರದರ್ಶಕವಾಗಿ ಪರೀಕ್ಷೆ ನಡೆಸುವುದು, ತರಬೇತಿಗಳ ಹಾಲ್ ಸಿದ್ಧಪಡಿಸುವುದು ಸೇರಿದಂತೆ ಹತ್ತಾರು ಮಹತ್ವದ ಕಾರ್ಯಗಳನ್ನು ತಿಂಗಳುಗಟ್ಟಲೇ ನಿರಂತರ ನಡೆಸಿ ಶ್ರಮಿಸಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳು ತಪ್ಪದೇ ತರಗತಿಗೆ ಹಾಜರಾಗಿ ತರಬೇತಿ ಪಡೆದುಕೊಂಡಲ್ಲಿ ಜಿಲ್ಲಾಡಳಿತದ ಕಾರ್ಯ-ಕ್ಕೆ ಅರ್ಥ ಬರಲಿದೆ ಎಂದು ತರಗತಿಗೆ ಹಾಜರಾಗಲು ಅಭ್ಯರ್ಥಿಗಳಲ್ಲಿ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಮನವಿ ಮಾಡಿದ್ದಾರೆ.

## ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬೀದರ್: 1995ರ ನಂತರ ಪ್ರಾರಂಭವಾದ ಅನುದಾನರಹಿತ ಶಾಲಾ-ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು, ಶಾಲೆ ನವಿಕರಣ ಪದ್ದತಿ ಸರಳಿಕರಿಸುವುದು, ಖಾಸಗಿ ಶಾಲೆಗಳಿಗೂ ಆರ್.ಟಿ.ಇ ಯೋಜನೆ ವಿಸ್ತರಿಸಬೇಕೆಂದು ಒತ್ತಾಯಿಸಲು ಹಾಗೂ ಇನ್ನಿತರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಈ ತಿಂಗಳ 25ರಂದು ಬೆಳಗಾವಿ ನಗರದ ಚನ್ನಮ್ಮ ವೃತ್ತದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಬೆಳಿಗ್ಗೆ 10-30 ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ರಾಜ್ಯ ಕಾರ್ಯದರ್ಶಿ ಗುರುನಾಥ ರಡ್ಡಿ ತಿಳಿಸಿದ್ದಾರೆ.

ಪ್ರಕಟಣೆ ಹೇಳಿಕೆ ನೀಡಿರುವ ಅವರು, ಬೆಳಗಾವಿಯಲ್ಲಿ ಡಿಸೆಂಬರ್ 08 ರಿಂದ ಪ್ರಾರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಧರಣಿ ಸತ್ಯಾಗ್ರಹವನ್ನು ಮಾಡಲು ನಿರ್ಧರಿಸಲಾಗಿದೆ.. ಅದರ ಅಂಗವಾಗಿ ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ರಾಜ್ಯ ಅಧ್ಯಕ್ಷರಾದ ರೇವಣಸಿದ್ದಪ್ಪ ಜಲಾದೆ ಅವರ ಅಧ್ಯಕ್ಷತೆಯಲ್ಲಿ ಹಾಗೂ ಬೆಳಗಾವಿಯ ಕೆ.ಎಸ್. ಎಸ್.ಸಿ ಅಸೋಶಿಯೇಶನ್ ಅಧ್ಯಕ್ಷರಾದ ಎಸ್.ಎಸ್. ಮಠದ ರವರ ನೇತೃತ್ವದಲ್ಲಿ, ಪೂರ್ವಭಾವಿ ಸಭೆಯನ್ನು ಮಂಗಳವಾರ ಕರೆಯಲಾಗಿದೆ.

ಸಭೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಜಿಲ್ಲಾಧ್ಯಕ್ಷರು, ತಾಲೂಕ ಅಧ್ಯಕ್ಷರು, ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯವರು, ಶಿಕ್ಷಕರು, ಪ್ರಮುಖರು ಆಗಮಿಸುತ್ತಿದ್ದು, ಬೀದರ್ ಜಿಲ್ಲೆಯಿಂದಲೂ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕರು, ಅಡಳಿತ ಮಂಡಳಿಯವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆ ನೀಡಬೇಕೆಂದು ಗುರುನಾಥ ರಡ್ಡಿ ಕರೆ ನೀಡಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)